ಏಪ್ರಿಲ್ 6, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ


# ಪೊಲೀಸ್ ನ್ಯೂಸ್

1979
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹ 20/-


## ಯೂ ಟ್ಯೂಬ್ ನೋಡಿ ಸ್ವಯಂ ಹೆರಿಗೆ ಮಾಡಿಕೊಂಡಿದ್ದ ಅವಿವಾಹಿತೆ!

# ನವಜಾತ ಶಿಶುವನ್ನು ಕೊಂದು ತಿಪ್ಪೆಗೆಸೆದ ಐನಾತಿ ಪ್ರೇಮಿಗಳು!





## ಜನನಾಯಕರ ಬೆತ್ತಲೆ ಮಾಡಿದ ಹನಿಟ್ರ್ಯಾಪ್!



## ಓಣಿಯ ಜಾಗಕ್ಕಾಗಿ ಕೊಲೆ ಮಾಡಿದ ಮುನಿ!

## ಉದ್ಯಮಿ ಅಳಿಯನ ಕತ್ತು ಸೀಳಿದ ಅತ್ತೆ!





## ವೈನ್‌ಶಾಪ್‌ನಲ್ಲಿ ಕ್ಷುಲ್ಲಕ ಕಾರಣಕ್ಕಾಗಿ ಮರ್ಡರ್!

# ತರೂರ್ ಪ್ರಶ್ನೆಯಲ್ಲಿ ಹುರುಳಿದೆ; ಕಾಂಗ್ರೆಸ್ ಕಿವಿಗೊಡುತ್ತಾ?

ಕಾಂಗ್ರೆಸ್ ಪಕ್ಷದಲ್ಲಿ ಶಶಿ ತರೂರ್‌ಗೆ ಇರುವ ಚರಿಷ್ಮಾವೇ ಬೇರೆ. 68 ವರ್ಷದ ಈ ಹಿರಿಯ ಕಾಂಗ್ರೆಸಿಗ ಇವತ್ತಿಗೂ ದೇಶದ ಯುವಕರ ಹೃದಯವನ್ನು ಆಳುತ್ತಿದ್ದಾನೆ. ಅದರಲ್ಲೂ ಕಾಂಗ್ರೆಸ್ ಪಕ್ಷದ ಯುವಕರಿಗೆ ಶಶಿ ತರೂರ್ ದೊಡ್ಡ ಸ್ಫೂರ್ತಿಯ ಸೆಲೆ. ಇಂತಹ ತರೂರ್ ಇತ್ತೀಚೆಗೆ ತಮ್ಮ ಪಕ್ಷದ ವಿರುದಟಛಿ ಬಂಡೇಳುವ ಸೂಚನೆ ನೀಡುತ್ತಿದ್ದಾರೆಯೇ? ಎಲ್ಲರೂ ಹಾಗೆ ಹೇಳುತ್ತಿದ್ದಾರಾದರೂ ನನಗೆ ಹಾಗನ್ನಿಸುತ್ತಿಲ್ಲ. ತರೂರ್ ನನಗೆ ಸಾಕಷ್ಟು ವರ್ಷಗಳಿಂದ ಒಳ್ಳೆಯ ಸ್ನೇಹಿತ. ಅವರ ಸ್ವಭಾವ ಏನೆಂಬುದು ನನಗೆ ಚೆನ್ನಾಗಿ ಗೊತ್ತು. ತರೂರ್ ಸತ್ಯ ಹೇಳಲು ಹಿಂಜರಿಯುವ ವ್ಯಕ್ತಿಯಲ್ಲ, ತನಗೆ ಏನನ್ನಿಸುತ್ತದೆಯೋ ಅದನ್ನು ಖುಲ್ಲಂಖುಲ್ಲಾ ಹೇಳಿಬಿಡುತ್ತಾರೆ. ಅವರ ವ್ಯಕ್ತಿತ್ವದಲ್ಲಿ ಎಂತಹ ಆಕರ್ಷಣೆಯಿದೆ ಅಂದರೆ, ಯಾವುದೇ ರಾಜಕೀಯ ಪಕ್ಷವಾದರೂ ಅವರನ್ನು ತನ್ನೊಂದಿಗೆ ಇರಿಸಿಕೊಳ್ಳಲು ಬಯಸುತ್ತದೆ. ಅವರಿಗೆ ಪಕ್ಷಾತೀತ



ಜನಪ್ರಿಯತೆ ಇದೆ. ಆದರೂ ಅವರು ಕಾಂಗ್ರೆಸ್ ಪಕ್ಷದಲ್ಲೇ ಇದ್ದಾರೆ ಅಂದರೆ ಅವರಿಗೆ ಆ ಪಕ್ಷದ ಮೂಲಭೂತ ಸಿದ್ಧಾಂತಗಳ ಬಗ್ಗೆ ಇರುವ ಬದಟಛಿತೆಯನ್ನು ಅದು ತೋರುತ್ತದೆ. ಇಷ್ಟಕ್ಕೂ ಸತ್ಯ ಹೇಳುವುದು ಬಂಡಾಯ ಅಲ್ಲವಲ್ಲ!

ಶಶಿ ತರೂರ್ ಈ ಹಿಂದೆ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದಾಗ ಅವರ ಉದ್ದೇಶ ಯುವಕರನ್ನು ಪಕ್ಷದ ಕೆಲಸ ಮಾಡುವಂತೆ ಪ್ರೇರೇಪಿಸಿ ಪಕ್ಷಕ್ಕೆ ಹೊಸ ಶಕ್ತಿ ಮತ್ತು ಚೈತನ್ಯ ತುಂಬುವುದಾಗಿತ್ತು. ಶಶಿ ತರೂರ್ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರೆ ಅದರಗತ್ತೇ ಬೇರೆ ಇರುತ್ತಿತ್ತು ಎಂದು ಈಗಲೂ ಅನೇಕ ಕಾಂಗ್ರೆಸಿಗರು ಹೇಳುತ್ತಾರೆ. ತರೂರ್ ಬಹುಮುಖ ಪ್ರತಿಭೆ. ಅವರು ಗುಂಪಿನಲ್ಲಿ ಗೋವಿಂದ ಅಲ್ಲ, ಸಾವಿರಾರು ಜನರ ನಡುವೆಯೂ ವಿಶಿಷ್ಟವಾಗಿ ಎದ್ದು ಕಾಣಿಸುವ ವ್ಯಕ್ತಿ. ಹಿಂದೆ ಅವರು ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿಯಾಗಿ ಕೆಲಸ ಮಾಡಿ, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯ ಚುನಾವಣೆಗೆ ಸ್ಪರ್ಧಿಸುವವರೆಗೂ ಹೋಗಿದ್ದರು. ಅವರಿಗೆ ಕಾಂಗ್ರೆಸ್ ಪಕ್ಷ ತನ್ನನ್ನು ಮೂಲೆಗುಂಪು ಮಾಡುತ್ತಿದೆ ಮತ್ತು ತನ್ನ ಸಾಮರ್ಥ್ಯವನ್ನು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ ಎಂಬ ಕೊರಗಿದೆ. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿಬಿಟ್ಟರು ಎಂಬ ಏಕೈಕ ಕಾರಣಕ್ಕೆ ಪಕ್ಷ ಅವರನ್ನು ದೂರ ಇರಿಸುತ್ತಿದೆ. ವಾಸ್ತವವಾಗಿ ಇದು ಆ ಪಕ್ಷಕ್ಕೇ ಆಗುತ್ತಿರುವ ನಷ್ಟವೇ ಹೊರತು, ವೈಯಕ್ತಿಕವಾಗಿ ತರೂರ್‌ಗೆ ಇದರಿಂದ ನಷ್ಟವಿಲ್ಲ. ತರೂರ್‌ರಂತಹ ಘನ ವ್ಯಕ್ತಿತ್ವದ ನಾಯಕರ ಕೊರತೆ ಕಾಂಗ್ರೆಸ್ ಪಕ್ಷಕ್ಕೆ ಇದೆ ಎಂದು ನಾನು ಎಲ್ಲಿ ನಿಂತು ಬೇಕಾದರೂ ಹೇಳಬಲ್ಲೆ. ಅವರಿಗೆ ದೇಶದ ನಾಡಿಮಿಡಿತ ಗೊತ್ತು. ಅದೇ ವೇಳೆ, ಜಾಗತಿಕ ವಿದ್ಯಮಾನಗಳ ಬಗ್ಗೆಯೂ ಚೆನ್ನಾಗಿ ಅರಿವಿದೆ. ಇಂತಹ ಬುದ್ಧಿವಂತರು ಎಷ್ಟು ಜನರಿದ್ದಾರೆ?



ತರೂರ್‌ಗಿರುವ ಇನ್ನೊಂದು ಬಹಳ ವಿಶಿಷ್ಟವಾದ ಗುಣವೇನೆಂದರೆ, ಅಷ್ಟೊಂದು ಜ್ಞಾನವಂತನಾಗಿದ್ದರೂ ಅವರು ತನ್ನ ಅಭಿಪ್ರಾಯವನ್ನಾಗಲೀ ಬುದ್ಧಿವಂತಿಕೆಯನ್ನಾಗಲೀ ಬೇರೆಯವರ ಮೇಲೆ ಹೇರಲು ಹೋಗುವುದಿಲ್ಲ, ಅವರ ನಡೆ ತುಂಬಾ ಸರಳ. ಎಲ್ಲರೊಂದಿಗೆ ವಿನಯದಿಂದ ನಡೆದುಕೊಳ್ಳುತ್ತಾರೆ. ಶಶಿ ತರೂರ್ ಅವರನ್ನು ರಾಜಕೀಯಕ್ಕೆ ತರಬೇಕು ಎಂಬ ಯೋಚನೆ ಮೊದಲು ಬಂದಿದ್ದು ಡಾ. ಮನಮೋಹನ ಸಿಂಗ್ ಅವರಿಗೆ. 2009ರಿಂದ ಅವರು ಕೇರಳದ ತಿರುವನಂತಪುರಂ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಮೇಲೆ ನಿರಂತರವಾಗಿ ಗೆಲ್ಲುತ್ತಾ ಬಂದಿದ್ದಾರೆ. ಮನಮೋಹನ ಸಿಂಗ್‌ರ ಸಂಪುಟದಲ್ಲಿ ಅವರು ವಿದೇಶಾಂಗ ಖಾತೆ ರಾಜ್ಯ ಸಚಿವರಾಗಿದ್ದರು. ಬಳಿಕ ಮಾನವ ಸಂಪನ್ಮೂಲ ಅಭಿವೃದ್ಧಿ ರಾಜ್ಯ ಸಚಿವರೂ ಆಗಿದ್ದರು. ಅವರಿಗಿರುವ ಸಾಮರ್ಥ್ಯಕ್ಕೆ ಸಂಪುಟ ದರ್ಜೆಯ ಸಚಿವ ಸ್ಥಾನವನ್ನೇ ಕೇಳಬಹುದಿತ್ತು. ಆದರೆ ಅಂತಹ ಬೇಡಿಕೆಯನ್ನು ಅವರು ಯಾವತ್ತೂ ಮುಂದಿಡಲಿಲ್ಲ. ಕಾಂಗ್ರೆಸ್ ಪಕ್ಷದಲ್ಲಿನ ಒಂದು ಬಣ ಡಾ. ಮನಮೋಹನ ಸಿಂಗ್ ಅವರನ್ನು ನಿರಂತರವಾಗಿ ಹತ್ತಿಕ್ಕಲು ಯತ್ನಿಸುತ್ತಿತ್ತು ಎಂಬುದು ತರೂರ್ ಚಿಂತೆಗೆ ಕಾರಣವಾಗಿತ್ತು. ಆ ಬಣ ಶಶಿ ತರೂರ್ ಉನ್ನತ ಸ್ಥಾನಕ್ಕೇರಿದ್ದರೆ ಅದನ್ನೂ ಸಹಿಸಿಕೊಳ್ಳುತ್ತಿರಲಿಲ್ಲ. ತರೂರ್ ಈ ಹಿಂದೆ ಗುಲಾಂ ನಬಿ ಆಜಾದ್ ನೇತೃತ್ವದ ಜಿ-23 ಭಿನ್ನಮತೀಯರ ಗುಂಪಿನಲ್ಲೂ ಕಾಣಿಸಿಕೊಂಡಿದ್ದರು. ಅಲ್ಲಿ ಪಕ್ಷದ ನಾಯಕತ್ವದ ಬಗ್ಗೆ ಅವರೂ ಪ್ರಶ್ನೆಗಳನ್ನು ಎತ್ತಿದ್ದರು. ಸಹಜವಾಗಿಯೇ ಆ ಗುಂಪಿನಲ್ಲಿದ್ದವರ ಬಗ್ಗೆ ಕಾಂಗ್ರೆಸ್ ನಾಯಕತ್ವಕ್ಕೆ ಇಂದಿಗೂ ಅಸಮಾಧಾನವಿದೆ. ಕಾಂಗ್ರೆಸ್‌ನ ನಾಯಕತ್ವದ ಬಗ್ಗೆ ಜಿ-23 ಗುಂಪಿನಲ್ಲಿ ಇದ್ದವರಿಗೂ ಬೇಸರವಿದೆ.

ಎರಡು ವಾರಗಳ ಹಿಂದೆ ಶಶಿ ತರೂರ್ ರಾಹುಲ್ ಗಾಂಧಿಯನ್ನು ಭೇಟಿಯಾಗಿದ್ದರು. ಆಗ, ಸಂಸತ್ತಿನಲ್ಲಿ ಮಹತ್ವದ ಚರ್ಚೆಗಳು ನಡೆದಾಗ ತನಗೆ ಮಾತನಾಡಲು ಅವಕಾಶ ನೀಡಲಿಲ್ಲ ಎಂದು ಬೇಸರ ತೋಡಿಕೊಂಡಿದ್ದರು. ಮಾತನಾಡಲು ತರೂರ್ ಸಾಕಷ್ಟು ಪ್ರಯತ್ನಿಸಿದರೂ ನಿರಂತರವಾಗಿ ಅವರನ್ನು ಹತ್ತಿಕ್ಕಲಾಗಿತ್ತು. ಅದಕ್ಕೆ ರಾಹುಲ್ ಗಾಂಧಿ ಏನು ಪ್ರತಿಕ್ರಿಯೆ ನೀಡಿದರು ಎಂಬುದು ಗೊತ್ತಿಲ್ಲ. ಆದರೆ ಶಶಿ ತರೂರ್‌ರಂತಹ ಪ್ರಭಾವಿ ಮಾತುಗಾರರನ್ನು ಯಾವುದಾದರೂ ರಾಜಕೀಯ ಪಕ್ಷ ಯಾಕಾದರೂ ಮೂಲೆ ಗುಂಪು ಮಾಡಬೇಕು? ತರೂರ್ ಯಾವುದೇ ವೇದಿಕೆಯಲ್ಲಿ ನಿಂತು ಮಾತನಾಡಿದರೂ ಬಹಳ ಪರಿಣಾಮಕಾರಿಯಾಗಿ ಮಾತನಾಡುತ್ತಾರೆ. 2014ರಿಂದ 2019ರವರೆಗೆ ಮಲ್ಲಿಕಾರ್ಜುನ ಖರ್ಗೆ ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕರಾಗಿದ್ದರು. 2019ರಿಂದ 2024ರವರೆಗೆ ಅಧೀರ್ ರಂಜನ್ ಚೌಧುರಿಗೆ ಆ ಸ್ಥಾನ ಲಭಿಸಿತ್ತು. ತರೂರ್‌ರಂತಹ ಪ್ರಚಂಡ ವಾಗ್ಮಿ ಕಾಂಗ್ರೆಸ್‌ನಲ್ಲಿದ್ದರೂ ಅವರಿಗೆ ಈ ಸ್ಥಾನ ಸಿಗಲಿಲ್ಲ! ಆಕ್ಸ್‌ಫರ್ಡ್ ಹಾಲ್‌ನಲ್ಲಿ ನಡೆದ ಚರ್ಚೆಯಲ್ಲಿ ಬ್ರಿಟಿಷರು ಹೇಗೆ ಭಾರತವನ್ನು ಶೋಷಣೆ ಮಾಡಿದರು ಎಂಬ ಬಗ್ಗೆ ಶಶಿ ತರೂರ್ ಮಾಡಿದ ಭಾಷಣ ನಿಮಗೆ ನೆನಪಿದೆಯಾ? ಭಾರತದಿಂದ ಮಾಡಿದ ಲೂಟಿಗೆ ಬ್ರಿಟನ್ ಇಂದು ಎಷ್ಟು ಮೊತ್ತವನ್ನು ಪರಿಹಾರವಾಗಿ ನೀಡಬೇಕು ಎಂದೂ ಲೆಕ್ಕ ಹಾಕಿ ತರೂರ್ ಹೇಳಿದ್ದರು. ಇಡೀ ದೇಶ ಅದನ್ನು ಮೆಚ್ಚಿಕೊಂಡಿತ್ತು. ಏಕೆಂದರೆ ಶಶಿ ತರೂರ್ ಬಹಳ ಗಟ್ಟಿಯಾದ ವಾಸ್ತವಾಂಶಗಳನ್ನಿಟ್ಟುಕೊಂಡು ವಾದ ಮಂಡಿಸುತ್ತಾರೆ.

ಕಳೆದ ಕೆಲ ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷ ಸಾಕಷ್ಟು ಆಂತರಿಕ ಬದಲಾವಣೆಗಳನ್ನು ಮಾಡಿಕೊಂಡಿದೆ. ತೀರಾ ಇತ್ತೀಚೆಗೆ ಇಬ್ಬರು ಹೊಸ ಪ್ರಧಾನ ಕಾರ್ಯದರ್ಶಿಗಳನ್ನು ನೇಮಕ ಮಾಡಿದೆ ಮತ್ತು ಅನೇಕ ರಾಜ್ಯಗಳ ಎಐಸಿಸಿ ಉಸ್ತುವಾರಿಗಳನ್ನು ಬದಲಾಯಿಸಿದೆ. ಆದರೆ ಅಲ್ಲೆಲ್ಲೂ ಶಶಿ ತರೂರ್‌ಗೆ ಸ್ಥಾನ ಮಾಡಿಕೊಟ್ಟಿಲ್ಲ. ಅವರನ್ನು ನೇಮಕ ಮಾಡುವ ಬಗ್ಗೆ ಚರ್ಚೆಯೂ ನಡೆದಿರಲಿಲ್ಲ. ಅಖಿಲ ಭಾರತ ವೃತ್ತಿಪರ ಕಾಂಗ್ರೆಸ್ (ಎಐಪಿಸಿ) ಎಂಬ ಸ್ವತಃ ತರೂರ್ ಹುಟ್ಟುಹಾಕಿದ ಘಟಕದಿಂದಲೂ ಅವರನ್ನು ಹೊರಹಾಕಲಾಗಿದೆ!

ಇತ್ತೀಚೆಗೆ ಶಶಿ ತರೂರ್ ಪ್ರಧಾನಿ ನರೇಂದ್ರ ಮೋದಿಯವರ ಅಮೆರಿಕ ಪ್ರವಾಸವನ್ನು ಹೊಗಳಿದ್ದರು. ಅದೊಂದು ಯಶಸ್ವಿ ಪ್ರವಾಸ ಎಂದು ಬಣ್ಣಿಸಿದ್ದರು. 'ಪ್ರಧಾನಿ ನರೇಂದ್ರ ಮೋದಿಯವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜೊತೆಗೆ ನಡೆಸಿದ ಸಭೆಗಳಿಂದ ನಮ್ಮ ದೇಶದ ಜನರಿಗೆ ಅನುಕೂಲವಾಗುವಂತಹ ಅನೇಕ ನಿರ್ಧಾರಗಳು ಹೊರಬಿದ್ದಿವೆ. ನನ್ನ ಪ್ರಕಾರ ಏನೋ ಒಂದಷ್ಟು ಧನಾತ್ಮಕ ಬೆಳವಣಿಗೆಗಳಾಗಿವೆ. ಒಬ್ಬ ಭಾರತೀಯನಾಗಿ ನಾನದನ್ನು ಸ್ವಾಗತಿಸುತ್ತೇನೆ. ಈ ವಿಷಯದಲ್ಲಿ ನಾನು ಕೇವಲ ರಾಷ್ಟ್ರೀಯ ಹಿತಾಸಕ್ತಿಯನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಮಾತನಾಡಿದ್ದೇನೆ' ಎಂದು ತರೂರ್ ಹೇಳಿದ್ದರು.

ಈ ಹಿಂದೆ ಅವರು ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್‌ರನ್ನೂ ಹೊಗಳಿದ್ದರು. ಒಂದು ಲೇಖನದಲ್ಲಿ ಕೇರಳದ ಎಡರಂಗದ ಸರ್ಕಾರವನ್ನು ಮೆಚ್ಚಿಕೊಳ್ಳುತ್ತಾ, ಭಾರತದ ತಾಂತ್ರಿಕ ಮತ್ತು ಔದ್ಯೋಗಿಕ ರೂಪಾಂತರದ ನೇತೃತ್ವ ವಹಿಸಿಕೊಳ್ಳುವ ಮಟ್ಟಕ್ಕೆ ಕೇರಳ ಬೆಳೆದಿದೆ ಎಂದು ಹೇಳಿದ್ದರು. ಈ ಹೇಳಿಕೆ ಕಾಂಗ್ರೆಸ್ ಪಕ್ಷದೊಳಗೆ ಆಕ್ರೋಶಕ್ಕೆ ಕಾರಣವಾಗಿತ್ತು. ಅದಕ್ಕೆ ಪ್ರತಿಕ್ರಿಯಿಸಿದ್ದ ತರೂರ್, 'ನಾನು ಕಾಂಗ್ರೆಸ್‌ನಲ್ಲಿದ್ದೇನೆ. ಆದರೆ, ಪಕ್ಷಕ್ಕೆ ನಾನು ಬೇಡವಾದರೆ ನನಗೆ ಬೇರೆ ಆಯ್ಕೆಗಳಿವೆ ಎಂದು ಹೇಳಿದ್ದರು. ತರೂರ್ ಇಷ್ಟೊಂದು ಆತ್ಮವಿಶ್ವಾಸದಿಂದ ಮಾತನಾಡುವುದಕ್ಕೆ ಮುಖ್ಯ ಕಾರಣವೆಂದರೆ ಅವರಿಗೆ ತಳಮಟ್ಟದಲ್ಲಿ ಇರುವ ಅಪಾರ ಬೆಂಬಲ. ದೇಶಾದ್ಯಂತ ಭರ್ಜರಿ ಮೋದಿ ಅಲೆ ಇದ್ದಾಗಲೂ ಅವರು ತಿರುವನಂತಪುರಂನಲ್ಲಿ ಸುಲಭವಾಗಿ ಗೆದ್ದಿದ್ದಾರೆ ಅಂದರೆ ಅವರಲ್ಲಿ ಮತದಾರರು ಎಷ್ಟು ನಂಬಿಕೆ ಇರಿಸಿದ್ದಾರೆ ಮತ್ತು ಮತದಾರರ ಜೊತೆಗೆ ತರೂರ್ ಎಂತಹ ಸಂಬಂಧ ಹೊಂದಿದ್ದಾರೆ ಎಂಬುದು ತಿಳಿಯುತ್ತದೆ. ಕೇರಳದಲ್ಲಿ ಕಾಂಗ್ರೆಸ್ ಪಕ್ಷ ಗೆಲ್ಲಬೇಕು ಅಂದರೆ ಮುಂದಿನ ವರ್ಷ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ನೇತೃತ್ವವನ್ನು ತನಗೆ ನೀಡಬೇಕು ಎಂದು ತರೂರ್ ಬಯಸುತ್ತಿದ್ದಾರೆ. ಅವರ ಅಭಿಪ್ರಾಯವನ್ನು ಪಕ್ಷ ಕೇಳಿಸಿಕೊಳ್ಳುತ್ತದೆಯೇ?

ನನಗೆ ಒಂದು ವಿಷಯ ಅರ್ಥವಾಗುವುದಿಲ್ಲ. ಹಿಂದೊಂದು ಕಾಲದಲ್ಲಿ ದೇಶದ ಜನರ ಹೃದಯದ



ಬಡಿತವೇ ಆಗಿದ್ದ ಕಾಂಗ್ರೆಸ್ ಪಕ್ಷ ತಮಿಳುನಾಡಿನಲ್ಲಿ ಕಳೆದ 58 ವರ್ಷಗಳಿಂದ, ಪಶ್ಚಿಮ ಬಂಗಾಳದಲ್ಲಿ 48 ವರ್ಷಗಳಿಂದ, ಕೇರಳದಲ್ಲಿ 41 ವರ್ಷಗಳಿಂದ, ಉತ್ತರ ಪ್ರದೇಶದಲ್ಲಿ 36 ವರ್ಷಗಳಿಂದ, ಬಿಹಾರದಲ್ಲಿ 35 ವರ್ಷಗಳಿಂದ, ಗುಜರಾತ್‌ನಲ್ಲಿ 30 ವರ್ಷಗಳಿಂದ ಮತ್ತು ಒಡಿಶಾದಲ್ಲಿ 25 ವರ್ಷಗಳಿಂದ ಏಕೆ ಅಧಿಕಾರಕ್ಕೆ ಬಂದಿಲ್ಲ? ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷ ಧೂಳೀಪಟವಾಗಿದೆ. ಮಹಾರಾಷ್ಟ್ರದಲ್ಲಿ ಪಕ್ಷದ ಸ್ಥಿತಿ ಗಂಭೀರವಾಗಿದೆ. ಪಂಜಾಬ್‌ನಲ್ಲೂ ಅಧಿಕಾರದಿಂದ ದೂರವಿದೆ. ಹಾಗಿದ್ದರೆ ದೇಶದ ಅತ್ಯಂತ ಪುರಾತನ ರಾಜಕೀಯ ಪಕ್ಷವೆಂಬ ಹೆಗ್ಗಳಿಕೆ ಗಳಿಸಿರುವ ಕಾಂಗ್ರೆಸ್‌ನ ಸ್ಥಿತಿ ಎಲ್ಲಿಗೆ ಬಂತು? ಪಕ್ಷದ ಲಕ್ಷಾಂತರ ಕಾರ್ಯಕರ್ತರು ಕೂಡ ಇದೇ ಪ್ರಶ್ನೆ ಕೇಳುತ್ತಿದ್ದಾರೆ. ಆದರೆ ಪಕ್ಷದ ನಾಯಕರು ಇದಕ್ಕೆ ಉತ್ತರ ನೀಡುತ್ತಾರಾ? ಈ ಪ್ರಶ್ನೆಗೆ ಉತ್ತರಿಸುವುದು ಬಹಳ ಕಷ್ಟ! ಸದ್ಯಕ್ಕೆ ಶಶಿ ತರೂರ್ ಇತ್ತೀಚೆಗೆ ಎಕ್ಸ್‌ನಲ್ಲಿ ಮಾಡಿದ್ದ ಪೋಸ್ಟ್ ಓದಿ ಸುಮ್ಮನಾಗೋಣ. 'ಎಲ್ಲಿ ಅಜ್ಞಾನವೇ ಪರಮಾನಂದವೋ ಅಲ್ಲಿ ಜಾಣನಾಗಿರುವುದು ಅಪರಾಧ'.

☯

# ಮಾನಗೇಡಿಗಳ ಹನಿಟ್ರ್ಯಾಪ್! ಹನಿಟ್ರ್ಯಾಪ್ ಪಿತಾಮಹ ಯಾರು? ಸಿದ್ದರಾಮಯ್ಯ ಗೇಮ್ ಪ್ಲಾನ್?

✍ ಎಸ್.ಎಸ್. ಗಾಂಧಿ

ಬಜೆಟ್ ಅಧಿವೇಶನದ ಕೊನೆಯ ಎರಡು ದಿನಗಳು ಹನಿಟ್ರ್ಯಾಪ್‌ಗೆ ಬಲಿಯಾಯಿತು. ಇದೊಂದು ರಾಜ್ಯದ ರಾಜಕೀಯ ವಿಧಾನಸಭೆಯ ಅಧಿವೇಶನದ ಕಪ್ಪುಚುಕ್ಕೆಯೆಂದೇ ಹೇಳಬಹುದು.

ಸಹಕಾರ ಸಚಿವ ಕ್ಯಾತ್ಸಂದ್ರ ರಾಜಣ್ಣ ಶಾಸನಸಭೆಯಲ್ಲಿ ನನ್ನನ್ನು ಸೇರಿದಂತೆ 48 ಜನರ ಮೇಲೆ ಹನಿಟ್ರ್ಯಾಪ್ ನಡೆದಿರಬಹುದು ಎಂದು ಸಂಶಯ ವ್ಯಕ್ತಪಡಿಸಿ, ಹೇಳಿಕೆ ನೀಡುತ್ತಾರೆಂದರೆ, ಸದನದ ಘನತೆ, ಗಾಂಭೀರ್ಯತೆ, ಮಹತ್ವದ ಬಗ್ಗೆ ಏನಾದರೂ ಇವರಿಗೆ ಕಾಳಜಿ ಇದೆಯೇ ಎಂದು ಜನಸಾಮಾನ್ಯರ ಚರ್ಚೆಯಾಗಿದೆ.



ಮಾನ-ಮರ್ಯಾದೆಗೆ ಅಂಜುವವರು ಈ ರೀತಿ ಸದನದಲ್ಲಿ ಹೇಳುವುದಿಲ್ಲ. ಅಂದರೆ ಇವರನ್ನು ಏನೆನ್ನಬೇಕು. ಮೂರು ಬಿಟ್ಟ ಮಾನಗೇಡಿಗಳು ಎನ್ನಬೇಕಾ? ಶಾಸನಸಭೆಗೆ ಚ್ಯುತಿ ತಂದ ಎನ್ನಬೇಕಾ? ನಾಲ್ಕು ಗಂಡೆಯ ಮಧ್ಯದಲ್ಲಿ ನಡೆಯುವ ಲೈಂಗಿಕ ಕ್ರಿಯೆಯ ಕಾರ್ಯಕ್ರಮವನ್ನು ಸದನದಂತೆ ಸಭೆಯಲ್ಲಿ ಬೆತ್ತಲು ಮಾಡಿದ್ದಾರಲ್ಲ ಇವರು ನಮ್ಮನ್ನು ಆಳುವ ಪ್ರತಿನಿಧಿಗಳ ನಾಚಿಗೆಟ್ಟ ಜನ ಇವರು. ಇಡೀ ರಾಜ್ಯ ನಮ್ಮನ್ನು ಗಮನಿಸುತ್ತಿದೆ. ನಾವು ಈ ಹೇಳಿಕೆಯನ್ನು ಹೇಳಬೇಕೋ ಬೇಡವೋ ಎಂಬ ಕಾಮನ್‌ಸೆನ್ಸ್ ಇಲ್ಲವಲ್ಲ ಇವರಿಗೆ. ಈ ಸ್ಟೇಟ್‌ಮೆಂಟ್ ಹಿಂದೆ ಯಾರಿದ್ದಾರೆ ಎಲ್ಲರಿಗೂ ತಿಳಿದೇ ಇದೆ. ಆದರೆ ಈ ಹೇಳಿಕೆ ಅಧಿವೇಶನದ ಇತಿಹಾಸದಲ್ಲಿಯೇ ದಾಖಲಾಗುತ್ತದೆ ಎಂಬ ಪರಿಜ್ಞಾನವು ಇವರಿಗಿಲ್ಲವೆಂದರೆ ನಿಜಕ್ಕೂ ದುರಂತ. ನಮ್ಮ ಶಾಸಕರು, ಶಾಸನಸಭೆ ಎತ್ತ ಸಾಗುತ್ತಿದೆ ಎಂಬ ಜಿಜ್ಞಾಸೆ ಹುಟ್ಟುತ್ತದೆ!

**ಯತ್ನಾಳ್ ಹಚ್ಚಿದ ಬೆಂಕಿ!**

ಬಿಜೆಪಿಯ ರೆಬಲ್ ಭಿನ್ನಮತೀಯ ಶಾಸಕ, ಸಿಡಿಗುಂಡು ಬೆಂಕಿಯುಂಡೆಯಂತೆ ಮಾತನಾಡುವ ವಿಜಯಪುರದ ಶಾಸಕ, ಮಾಜಿ ಕೇಂದ್ರ ಸಚಿವ ಬಸವನಗೌಡ ಪಾಟೀಲ್ ಯತ್ನಾಳ್ ಸದನದಲ್ಲಿ ಮಾತನಾಡುವಾಗ 'ಹನಿಟ್ರ್ಯಾಪ್' ಬಗ್ಗೆ ವಿಷಯ ಹರಿಬಿಟ್ಟರು. ರಾಜ್ಯದಲ್ಲಿ ಹನಿಟ್ರ್ಯಾಪ್‌ಗಳ ಕಾರ್ಖಾನೆಯೇ ಇದೆ. ಸಚಿವರುಗಳು, ಶಾಸಕರುಗಳು ಇದರಲ್ಲಿ ಸೇರಿದ್ದಾರೆ. ಇದರ ಬಗ್ಗೆ ಸರ್ಕಾರ ಉತ್ತರ ನೀಡಬೇಕು, ತನಿಖೆಯಾಗಬೇಕೆಂದು ಒತ್ತಾಯಿಸಿದರು. ಯತ್ನಾಳ್ ಸದನದಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವಾಗ ಅವರಿಗೆ ಒಂದು ಚೀಟಿ ಬಂತು. ಆ ಚೀಟಿಯನ್ನು ಓದಿಕೊಂಡು ಮಾತನ್ನು ಮುಂದುವರೆಸಿದರು. ಬಸವನಗೌಡ ಪಾಟೀಲ್ ಯತ್ನಾಳ್ ಹಚ್ಚಿದ ಕಿಚ್ಚು ಇಡೀ ಸದನದ ಕಲಾಪವನ್ನೇ ನುಂಗಿ ಹಾಕಿತ್ತು.

ಹನಿಟ್ರ್ಯಾಪ್ ಬಗ್ಗೆ ಮಾತನಾಡಲು ಯತ್ನಾಳ್‌ರವರನ್ನು ಹುರಿದುಂಬಿಸಿಬಿದ್ದು ಯಾರು? ಅವರಿಗೆ ಮಾಹಿತಿ ಕೊಟ್ಟವರು ಯಾರು? ಇದರ ಹಿಂದಿರುವ ಆ ನಿಗೂಢ ವ್ಯಕ್ತಿ ಯಾರು?

**ಸಹಕಾರ ಸಚಿವ ರಾಜಣ್ಣನ ಉತ್ತರ**

ಯತ್ನಾಳ್ ಯಾವಾಗ ಹನಿಟ್ರ್ಯಾಪ್ ವಿಚಾರ ಮಾತನಾಡಿದ್ದರೋ ವಿಪಕ್ಷ ನಾಯಕ ಆರ್. ಅಶೋಕ್, ಉಪನಾಯಕ ಅರವಿಂದ ಬೆಲ್ಲದ, ಶಾಸಕ ಹಾಗೂ ಬಿಜೆಪಿ ಅಧ್ಯಕ್ಷ ವಿಜಯೇಂದ್ರ, ಶಾಸಕ ಸುನೀಲ್ ಸೇರಿದಂತೆ ಮೇಲ್ಮನೆಯ ಸದಸ್ಯರೆಲ್ಲ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ಇದನ್ನೇ ಹೈಲೆಟ್ ಮಾಡಿದ್ರು. ಸರ್ಕಾರ ಇಕ್ಕಟ್ಟಿಗೆ ಸಿಲುಕಿಸಿದರು. ಶಾಸನ ಸಭೆಯ ನಾಯಕ ಸಿದ್ದರಾಮಯ್ಯ ಸರ್ಕಾರದ ಪರ ಹೇಳಿಕೆ ನೀಡುವಂತೆ ಸಹಕಾರ ಸಚಿವ ರಾಜಣ್ಣನಿಗೆ ತಿಳಿಸಿದರು. ರಾಜಣ್ಣ ಯತ್ನಾಳ್ ಎತ್ತಿದ ಪ್ರಶ್ನೆಗೆ ಉತ್ತರ ಹೌದು ನನ್ನ ಮತ್ತು ನಮ್ಮ ಜಿಲ್ಲೆಯ ಪ್ರಭಾವಿ ಸಚಿವರು ಸೇರಿದಂತೆ ಶಾಸಕರು ಮತ್ತು ಜಡ್ಜ್‌ಗಳು ಒಟ್ಟಾರೆ 48 ಜನರ ಮೇಲೆ ಹನಿಟ್ರ್ಯಾಪ್ (ಮದುಬಲೆ) ನಡೆದಿರಬಹುದು ಎಂದು ಸಂಶಯ ವ್ಯಕ್ತಪಡಿಸಿ ಹೇಳಿಕೆ ನೀಡಿಯೇ ಬಿಟ್ಟರು. ಉನ್ನತ ಮಟ್ಟದ ತನಿಖೆಯಾಗಬೇಕೆಂದು ಸದನದಲ್ಲಿ ಹೇಳಿಯೇ ಬಿಟ್ಟರು. ಮಂತ್ರಿ ರಾಜಣ್ಣನವರ ಮಾತು ರೆಕಾರ್ಡ್ ಆಗಿಯೇ ಹೋಯಿತು. ವಿರೋಧ ಪಕ್ಷದ ಬಾಯಿಗೆ ಸಿಲುಕಿಯೇ ಬಿಟ್ಟರು.



**ಉನ್ನತ ಮಟ್ಟದ ತನಿಖೆಗೆ ಸಿದ್ಧ – ಸಿದ್ದರಾಮಯ್ಯ ಪೊಲೀಸ್ ಸ್ಟೇಷನ್‌ಗೆ ದೂರು ನೀಡಲಿ – ಡಿಸಿಎಂ**

ಹನಿಟ್ರ್ಯಾಪ್ ವಿಚಾರವನ್ನು ಸದನದಲ್ಲಿ ವಿರೋಧ ಪಕ್ಷದವರು ಕೈಗೆತ್ತಿಕೊಂಡರೋ ಆಡಳಿತ ಪಕ್ಷದ ಹೈಡ್ರಾಮಾ ಆರಂಭವಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಉನ್ನತ ಮಟ್ಟದ ತನಿಖೆಗೆ ಸರ್ಕಾರ ಸಿದ್ಧ ಎಂದು ಗ್ರೀನ್ ಸಿಗ್ನಲ್ ನೀಡಿಯೇ ಬಿಟ್ಟರು. ಸಿಎಂ ಮಾತಿನ ನಂತರ ಡೆಪ್ಯೂಟಿ ಸಿಎಂ ಶಿವಕುಮಾರ್ ಯಾರ ಮೇಲೆ ಹನಿಟ್ರ್ಯಾಪ್ ನಡೆದಿದ್ದೀಯೋ ಅವರು ಪೊಲೀಸ್ ಠಾಣೆಗೆ ಮೊದಲು ದೂರು ನೀಡಲಿ ಎಂದರು. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ 'ಹಲೋ' ಎಂದರೆ ಅವರು ಹಲೋ ಎನ್ನುತ್ತಾರೆ. ಡಿಕೆಶಿಯ ಬಾಲಂಗೋಚಿ ಮಾಗಡಿ ಶಾಸಕ ಬಾಲಕೃಷ್ಣ ಕಚ್ಚೆ ಬಿಗಿಯಾಗಿದ್ರೆ, ಯಾವ ಹನಿಟ್ರ್ಯಾಪ್ ನಡೆಯುವುದಿಲ್ಲವೆಂದು ಡಿಕೆಶಿಯ ಮಾತನ್ನು ಬೆಂಬಲಿಸುವಂತೆ ಮಾತನಾಡಿದರು. ಡಿಕೆಶಿಯ ಬೆಂಬಲಿಗರೆಲ್ಲ ಅವರ ಮಾತನ್ನು ಸಮರ್ಥಿಸಿಕೊಂಡರು. ಹಾಗೆಯೇ ಸಿದ್ದರಾಮಯ್ಯನವರ ಬೆಂಬಲಿಗ ರಾಜಣ್ಣನ ಹೇಳಿಕೆಯನ್ನು ಎಂ.ಬಿ. ಪಾಟೀಲ್, ಡಾ. ಜಿ. ಪರಮೇಶ್ವರ್ ಸೇರಿದಂತೆ ಇನ್ನಿತರರು ಬೆಂಬಲಿಸಿದರು. ಇಲ್ಲಿ ಎರಡು ಗುಂಪುಗಳಿವೆ ಎಂಬುವುದು ಮತ್ತೊಮ್ಮೆ ಸಾಬೀತಾಯಿತು.

**ಹನಿಟ್ರ್ಯಾಪ್‌ನಲ್ಲಿ ಯಾರ್‍ಯಾರಿದ್ದಾರೆ? ಈ ಹಿಂದೆ ಯಾರಿದ್ದರು!**

ಹನಿಟ್ರ್ಯಾಪ್ ಎಂದರೆ ಏನು ಮೊದಲು ತಿಳಿಯೋಣ. ಹನಿ ಎಂದರೆ ಜೇನು ಟ್ರ್ಯಾಪ್ ಎಂದರೆ ಬಲೆಗೆ ಬೀಳಿಸಿಕೊಳ್ಳುವುದು. ಅಚ್ಚ ಕನ್ನಡದಲ್ಲಿ ಹೇಳುವುದಾದರೆ 'ಮದುಬಲೆ' ಅಂತ. ಮದು ತುಂಬಿರುವುದು ಯಾರಲ್ಲಿ, ಹೆಣ್ಣಲ್ಲಿ. ಡಾ. ರಾಜ್ ಚಿತ್ರದಲ್ಲಿ ಒಂದು ಹಾಡು ನೆನಪಾಗುತ್ತದೆ. ಈ ದೇಹ ರಸಮಯ ಸದನ ಈ ನೇಹ ಮದು ಸಂಗ್ರಹಣ' ಹೆಣ್ಣಿನಲ್ಲಿರುವ ಮದುವೆಂಬ ರಸವನ್ನು ಹೀರಲು ಗಂಡು ಎಂಬ ದುಂಬಿ ಹೀರಲು ಪ್ರಯತ್ನಿಸುತ್ತದೆ. ಮದು ಹೀರುವಾಗ ಅದನ್ನು ವಿಡಿಯೋ ಅಥವಾ ಫೋಟೋದಲ್ಲಿ ಸೆರೆ ಹಿಡಿದು ಅದನ್ನು ಜಗತ್ತಿಗೆ ಬಯಲು ಮಾಡುವ ಬೆತ್ತಲಿನಲ್ಲಿ ನಡೆಯುವ ರಹಸ್ಯ ರಾತ್ರಿಯ ಚಂದ್ರಮ್ಮನ ತಂಗಾಳಿಯಲ್ಲಿ ನಡೆಯುವ ಲೈಂಗಿಕ ಕ್ರಿಯೆಯನ್ನು ಮುಂದಿಟ್ಟುಕೊಂಡು ತನ್ನ ಬಲೆಗೆ ಬೀಳಿಸಿಕೊಳ್ಳುವುದು ಮದುಬಲೆ ಹನಿಟ್ರ್ಯಾಪ್ ಎನ್ನುತ್ತಾರೆ.

ಹನಿಟ್ರ್ಯಾಪ್‌ನಲ್ಲಿ 48 ಜನರಿದ್ದಾರೆ. ಅವರೆಲ್ಲ ಯಾರು? ಎಂಬ ಉತ್ತರ ಗೊತ್ತಿದ್ದರೂ ಯಾರು ಬಾಯಿ ಬಿಡುವ ಗೋಜಿಗೆ ಹೋಗುತ್ತಿಲ್ಲ. ಆಡಳಿತ ಪಕ್ಷದಲ್ಲೂ ಇದ್ದಾರಂತೆ, ವಿರೋಧ ಪಕ್ಷದಲ್ಲೂ ಇದ್ದಾರಂತೆ. ಈ ಹಿಂದೆ ಅನೇಕರು ಮದುಬಲೆಗೆ ಬಿದ್ದವರು ಆ ರಹಸ್ಯವನ್ನು ಬೆತ್ತಲು ಮಾಡಬಾರದೆಂದು ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದವರು ಇದ್ದಾರೆ.



'ಮದುಬಲೆ'ಯ ಸಿಡಿಯಿಂದ ಅಧಿಕಾರ ಕಳೆದುಕೊಂಡವರು ಇದ್ದಾರೆ. ಕೇಂದ್ರದಲ್ಲೂ, ರಾಜ್ಯದಲ್ಲೂ ಇದ್ದಾರೆ. ಆ 48 ಜನ ಯಾರು? ನ್ಯಾಯಾಧೀಶರು ಯಾರು? ಎಂಬುವುದು ಸಾರ್ವಜನಿಕ ಚರ್ಚೆಗೆ ಗ್ರಾಸವಾಗಿದೆ. ಬೆಂಗಳೂರು ವಕೀಲರ ಸಂಘ ತುರ್ತು ಸಭೆ ಕರೆದು ನ್ಯಾಯಾಧೀಶರ ಮೇಲೆ ಬಂದಿರುವ ಆರೋಪದ ಮೇಲೆ ಗಂಭೀರವಾಗಿ ಚರ್ಚೆ ನಡೆಸಿದೆ.

**ಹನಿಟ್ರ್ಯಾಪ್ ಹಿಂದಿರುವ ವ್ಯಕ್ತಿ ಯಾರು?**

ಸದಾಶಿವನಗರದಲ್ಲಿ ಹನಿಟ್ರ್ಯಾಪ್‌ಗಳ ಫ್ಯಾಕ್ಟರಿಯಿದೆ ಎಂದು ಹಲವು ನಾಯಕರು ಬಹಿರಂಗವಾಗಿಯೇ ಹೇಳಿಕೆ ನೀಡುತ್ತಿದ್ದಾರೆ. ಪರೋಕ್ಷವಾಗಿ ಮಾಜಿ ಸಚಿವ, ಹಾಲಿ ಶಾಸಕ ರಮೇಶ್ ಜಾರಕಿಹೋಳಿ ಡೆಪ್ಯೂಟಿ ಸಿಎಂ ಡಿ.ಕೆ. ಶಿವಕುಮಾರ್‌ರವರೇ ಈ ಹನಿಟ್ರ್ಯಾಪ್‌ನ ಹಿಂದಿರುವ ವ್ಯಕ್ತಿ ಅಂತ ಹೇಳುತ್ತಿದ್ದಾರೆ. ರಮೇಶ್ ಜಾರಕಿ ಹೋಳಿಯ ಸಿಡಿ ಬಹಿರಂಗವಾಗಿದ್ದು ಇವರಿಂದಲೇ ರೇವಣ್ಣನ ಕುಟುಂಬವನ್ನು ಬೀದಿಗೆ ತಂದವರು ಇವರೇ. ಕುಮಾರಸ್ವಾಮಿಯ ಎರಡನೆಯ ಮದುವೆಯ ಬಗ್ಗೆ ಸುದ್ದಿ ಬಲಿಷ್ಠವಾಗುವಂತೆ ನೋಡಿಕೊಂಡವರು ಇವರೇ ಎಂದು ಜನಜನಿತವಾದ ಡಿಕೆಶಿ ಇದ್ದಾರೆಯೇ? ಇನ್ಯಾರಿದ್ದಾರೋ ಗೊತ್ತಿಲ್ಲ! ತನಿಖೆಯಿಂದ ಸತ್ಯ ಹೊರಬೇಕಾಗಿದೆ.



**ಸಿದ್ದರಾಮಯ್ಯನವರ ಗೇಮ್ ಪ್ಲಾನ್ ಏನು?**

ರಾಜ್ಯದ ರಾಜಕೀಯ ವಲಯದಲ್ಲಿ 'ಹನಿಟ್ರ್ಯಾಪ್' ಹಿಂದಿರುವ ವ್ಯಕ್ತಿಯನ್ನು ಸದೆಬಡಿಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಗೇಮ್ ಪ್ಲಾನ್ ಮಾಡಿದ್ದಾರೆ ಎಂಬ ಮಾತು ಕೇಳಿ ಬರುತ್ತಿದೆ. ಸಿದ್ದರಾಮಯ್ಯನವರ ಅಧಿಕಾರಾವಧಿ ಮುಗಿಯುತ್ತಿರುವ ವೇಳೆಯಲ್ಲಿ ಹನಿಟ್ರ್ಯಾಪ್ ವಿಷಯ ಪ್ರಸ್ತಾಪವಾಗಿದೆ. ಈ ಹಿಂದೆ ಸಿದ್ದರಾಮಯ್ಯನವರ ಅನುಯಾಯಿಗಳಾದ ರಾಜಣ್ಣ, ಜಮೀರ್ ಅಹಮದ್, ಸತೀಶ್ ಜಾರಕಿಹೋಳಿ, ಎಂ.ಡಿ. ಪಾಟೀಲ್, ಡೆಪ್ಯೂಟಿ ಸಿಎಂ ಇನ್ನೆರಡು ಸೃಷ್ಟಿಯಾಗಬೇಕು ಎಂದು ಚಕಾರ ವೆತ್ತಿದ್ದರು. ಸಿದ್ದರಾಮಯ್ಯನವರೇ ಐದು ವರ್ಷಗಳ ಕಾಲ ಸಿಎಂ ಆಗುತ್ತಾರೆ ಎಂದು ಬಹಿರಂಗವಾಗಿಯೇ ಹೇಳಿಕೆ ನೀಡುತ್ತಲೇ ಬರುತ್ತಿದ್ದಾರೆ. ಎಲ್ಲೋ ಒಂದು ಕಡೆ ಡಿಕೆಶಿಯ ಕೆಂಗಣ್ಣು ಸಚಿವರುಗಳ ಮೇಲೆ ಬಿದ್ದಿದೆಯಂತೆ. ಇವರನ್ನು ಮಟ್ಟಹಾಕಲು 'ಹನಿಟ್ರ್ಯಾಪ್' ಎನ್ನುವ 'ಜೇಡರ ಬಲೆ' ಹೆಣೆದಿದ್ದಾರಂತೆ. ಈ ಮದುಬಲೆಯಲ್ಲಿ 48 ಜನ ಇದ್ದಾರಂತೆ. ಈ ವಿಷಯ ಸಿಎಂಗೆ ತಿಳಿದು, ಬಸವನಗೌಡ ಪಾಟೀಲ್ ಯತ್ನಾಳ್ ಮುಖಾಂತರ ಈ ವಿಷಯ ಪ್ರಸ್ತಾಪಿಸಿ ರಾಜಣ್ಣನಿಂದ ಉತ್ತರ ಕೊಡಿಸಿ, ತನಿಖೆ, ತನಿಖೆಯಲ್ಲಿ ಡಿಸಿಎಂ ಕೈವಾಡವಿದೆಯೆಂದು ವರದಿ ತಯಾರಿಸಿ ಅದನ್ನು ಹೈಕಮಾಂಡ್‌ಗೆ ರವಾನಿಸಿ ಇನ್ನು ಮೂರು ವರ್ಷ ಸಿಎಂ ಹುದ್ದೆಯಲ್ಲಿಯೇ ಉಳಿಯಬೇಕೆಂದು ಸಿಎಂ ಸಿದ್ದರಾಮಯ್ಯ ಗೇಮ್ ಪ್ಲಾನ್ ಮಾಡಿದ್ದಾರೆಂದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

ಏನೇ ಆಗಲಿ, ಈ ರಾಜಕಾರಣಿಗಳ ಕೆಸರೆರೆಚಾಟದಲ್ಲಿ ಕರ್ನಾಟಕದ ಮರ್ಯಾದೆಯನ್ನು ಕಳೆದರು ಈ ಮರ್ಯಾದಸ್ಥ ರಾಜಕಾರಣಿಗಳು. ಕರ್ನಾಟಕವನ್ನು ಬೆತ್ತಲು ಮಾಡಿದ ಆಗಂತಕರು ಎಲ್ಲಿಗೆ ಬಂತು ನೋಡಿ ರಾಜಕೀಯದ ಚದುರಂಗದಾಟ.

## ಯೂ ಟ್ಯೂಬ್ ನೋಡಿ ಸ್ವಯಂ ಹೆರಿಗೆ ಮಾಡಿಕೊಂಡಿದ್ದ ಅವಿವಾಹಿತೆ ಸಿಮ್ರನ್!

# ಕಿತ್ತೂರ ಪೊಲೀಸರ ಕಾರ್ಯಾಚರಣೆ: ನವಜಾತ ಹೆಣ್ಣು ಶಿಶುವನ್ನು ಕೊಲೆ ಮಾಡಿ ತಿಪ್ಪೆಗೆ ಬೀಸಾಕಿದ್ದ ಐನಾತಿ ಪ್ರೇಮಿಗಳಿಬ್ಬರ ಬಂಧನ!

**ಆಕೆ 22 ವರ್ಷದ ಸ್ಪುರದ್ರೂಪಿ ಅನ್ಯಕೋಮಿನ ತರುಣಿ. ಆತ 31 ವರ್ಷದ ಹಿಂದೂ ನಿರುದ್ಯೋಗಿ ತರುಣ. ಒಂದೇ ಓಣಿಯವರಾಗಿದ್ದ ಇವರು ಕಳೆದ 2-3 ವರ್ಷದಿಂದ ಪರಸ್ಪರ ಪ್ರೀತಿಸುತ್ತಿದ್ದರು. ಮೈ ಮನದಲ್ಲಿ ಪುಟಿದೇಳುತ್ತಿದ್ದ ಕಾಮ ತಡೆದುಕೊಳ್ಳದ ಇವರು ಗುಟ್ಟಾಗಿ ಬೆತ್ತಲಾಗುತ್ತ ಅಕ್ರಮ ಸಂಬಂಧ ಮುಂದುವರೆಸಿದ್ದರು. ಪರಿಣಾಮ ತರುಣಿ ಗರ್ಭಿಣಿಯಾದಳು. ಮೊದಲೇ ಆಕೆ ದಪ್ಪ ಇದ್ದ ಕಾರಣ ಗರ್ಭಿಣಿಯಾಗಿದ್ದ ವಿಚಾರ ಆಕೆ ಹೆತ್ತವರಿಗೆ ಮತ್ತು ಪ್ರಿಯಕರನಿಗೆ ಗೊತ್ತಾಗಲಿಲ್ಲ. ಇತ್ತೀಚಿಗೆ ತರುಣಿಗೆ ಹೆರಿಗೆ ನೋವು ಕಾಣಿಸಿಕೊಂಡಿದೆ. ಯೂಟ್ಯೂಬ್ ಸಹಾಯದಿಂದ ಬಾತ್‌ರೂಮ್‌ನಲ್ಲಿ ಪ್ರಿಯಕರನ ನಿರ್ದೇಶನದಂತೆ ಸ್ವಯಂ ಹೆಣ್ಣು ಮಗುವಿಗೆ ಹೆರಿಗೆ ಮಾಡಿಕೊಂಡಿದ್ದಾಳೆ. ನವಜಾತಿ ಹೆಣ್ಣು ಶಿಶು ಬದುಕಿರಬಾರದು ಎಂದು ನಿರ್ಧರಿಸಿದ್ದರು. ಅದರಂತೆ ತರುಣಿ ಅದೇ ತಾನೇ ಜನಿಸಿದ್ದ ಹೆಣ್ಣು ಮಗುವನ್ನು ಪ್ಲಾಸ್ಟಿಕ್ ಚೀಲದಲ್ಲಿ ಸುತ್ತಿ ಮನೆಯ ಹಿಂದಿದ್ದ ತಿಪ್ಪೆಗುಂಡಿಗೆ ಬೀಸಾಕಿ ಬಂದಿದ್ದಳು. ಮರುದಿನ ಬೀದಿ ನಾಯಿಗಳು ಕೊಲೆಯಾಗಿದ್ದ ಮಗುವಿನ ಶವಕ್ಕಾಗಿ ಕಚ್ಚಾಟ ನಡೆಸಿದಾಗ ಘಟನೆ ಬೆಳಕಿಗೆ ಬಂದಿದೆ. ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡಿವೈಎಸ್ಪಿ ರವಿ ನಾಯಕ ನಿರ್ದೇಶನದಲ್ಲಿ ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದ ಸಿಪಿಐ ಶಿವಾನಂದ ಗುಡಗನಟ್ಟಿ, ಪಿಎಸ್ಐ ಪ್ರವೀಣ ಗಂಗೋಳ ಮತ್ತು ಸಿಬ್ಬಂದಿಗಳು ಚಾಣಾಕ್ಷತನದಿಂದ ಪತ್ತೆ ಮಾಡಿ ನವಜಾತ ಶಿಶುವಿನ ಹಂತಕರಾದ ಪ್ರೇಮಿಗಳಿಬ್ಬರನ್ನು ಬಂಧಿಸಿ ಜೈಲಿಗಟ್ಟಿದ ಘಟನೆ ಇದೀಗ ರಾಜ್ಯದಲ್ಲಿ ಪ್ರಥಮ ಎನ್ನುವಂತಾಗಿದೆ. ಇದು ನಡೆದದ್ದು ಬೆಳಗಾವಿ ಜಿಲ್ಲೆ ಕಿತ್ತೂರ ತಾಲ್ಲೂಕಿನ ಅಂಬಡಗಟ್ಟಿ ಎಂಬ ಗ್ರಾಮದಲ್ಲಿ.**





ತಮಗೆ ಜನಿಸಿದ್ದ ನವಜಾತ ಹೆಣ್ಣು ಶಿಶು ಹತ್ಯೆ ಮಾಡಿ ತಿಪ್ಪೆಗೆ ಬೀಸಾಕಿದ್ದ ಪ್ರೇಮಿಗಳು-ಮಹಾಬಳೇಶ, ಸಿಮ್ರನ್

**ಬೆಳಗಾವಿ**

✍ಮನ್ನಾಪೂರ

'ಪ್ರೀತಿ ಮಾಡಬಾರದು ಮಾಡಿದರೆ ಜಗಕೆ ಹೆದರಬಾರದು' ಎನ್ನುವ ಹಾಡು ಅಕ್ಷರಶಃ ಸಮಾಜದಲ್ಲಿನ ಪ್ರೇಮಿಗಳಿಗೆ ಒಂದು ಧೈರ್ಯದ ಸಂದೇಶ ನೀಡುತ್ತದೆ. ತಮ್ಮ ಕಾಮದ ತೆವಲು ತೀರಿಸಿಕೊಳ್ಳಲು ಹೋಗಿ 'ಕಳ್ಳ ಬಸಿರು' ಹೊಂದಿ ಜನಿಸಿದ ಮಕ್ಕಳನ್ನು ಸಾಕಿ-ಸಲಹಲು ಧೈರ್ಯ ಸಾಲದೇ ನವಜಾತ ಶಿಶುಗಳನ್ನು ಅತ್ಯಂತ ನಿರ್ಧಯವಾಗಿ ಕೊಂದು ಹಾಕುತ್ತಿರುವ ಪ್ರೇಮ ಪಿಶಾಚಿಗಳ ಪೈಶಾಚಿಕ ಕೃತ್ಯ ಇಂದು ಎಗ್ಗಿಲ್ಲದೇ ನಡೆದು ಹೋಗುತ್ತಿವೆ.



ಎಸ್ಪಿ ಡಾ. ಭೀಮಾಶಂಕರ ಗುಳೇದ



ಹೆಚ್ಚುವರಿ ಎಸ್ಪಿ ಶ್ರುತಿ ಎಸ್.ಎನ್.



ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ

ಇತ್ತೀಚಿಗೆ ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲ್ಲೂಕಿನ ಅಂಬಡಗಟ್ಟಿ ಎಂಬ ಗ್ರಾಮದಲ್ಲಿ ಬೇರೆ ಬೇರೆ ಧರ್ಮದ ಪ್ರೇಮಿಗಳು ತಮ್ಮ ಕಾಮದ ತೆವಲಿಗೆ ಜನ್ಮ ತಳೆದಿದ್ದ ಹೆಣ್ಣು ಮಗುವೊಂದಕ್ಕೆ ಜನ್ಮ ನೀಡಿ ಅದು ಕಣ್ಣು ತೆರೆದು ಭೂಮಿಯನ್ನು ನೋಡುವ ಮುನ್ನವೇ ಉಸಿರುಗಟ್ಟಿಸಿ ಕೊಲೆ ಮಾಡಿ ಮನೆಯ ಹಿಂದಿನ ತಿಪ್ಪಿಗೆಸೆದಿದ್ದಾರೆ. ಇಲ್ಲಿ ಕಿತ್ತೂರಿನ ಸಿಪಿಐ ಶಿವಾನಂದ ಗುಡಗನಟ್ಟಿ, ಪಿಎಸ್ಐ ಪ್ರವೀಣ ಗಂಗೋಳ ಮತ್ತು ಸಿಬ್ಬಂದಿಗಳು ಚಾಣಾಕ್ಷತನದಿಂದ ನವಜಾತ ಶಿಶು ಕೊಲೆ ಪ್ರಕರಣವನ್ನು ಭೇದಿಸಿದ್ದಾರೆ. ಕೃತ್ಯಕ್ಕೆ ಕಾರಣರಾದ ಮಹಾಬಲೇಶ ರುದ್ರಪ್ಪ ಕಾಮೋಜಿ (31 ವ) ಮತ್ತು ಅನ್ಯಕೋಮಿನ ಸಿಮ್ರನ್ ಮೌಲಾಸಾಬ ಮಾಣಿಕಬಾಯಿ ಎಂಬ ಕೊಲೆಗಡುಕಿ ಪ್ರೇಮಿಗಳಿಬ್ಬರನ್ನು ಬಂಧಿಸಿ ಜೈಲಿಗಟ್ಟಿದ್ದಾರೆ. ಇದು ರಾಜ್ಯದಲ್ಲಿಯೇ ಮೊದಲ ಬಾರಿಗೆ ಪ್ರೇಮಿಗಳ ಮೇಲೆ ಪ್ರಕರಣ ದಾಖಲಿಸಿ ಆರೋಪಿಗಳನ್ನು ಬಂಧಿಸಿದ ಪ್ರಕರಣವಾಗಿದೆ. ಇದರ ಕುರಿತಾಗಿ 'ಪೊಲೀಸ್ ನ್ಯೂಸ್' ವರದಿ ಮಾಡಿದೆ.

### ಮಹಾಬಳೇಶ ಮತ್ತು ಸಿಮ್ರನ್ ಲವ್ವಿ-ಡವ್ವಿ...

ಬೆಳಗಾವಿ ಜಿಲ್ಲೆಯ ಗಂಡು ಮೆಟ್ಟಿನ ನಾಡು ಎಂದು ಕಿತ್ತೂರು ಹೆಸರಾಗಿದೆ. ಇಲ್ಲಿ ಕಿತ್ತೂರ ತಾಲ್ಲೂಕಿನಲ್ಲಿ ಅಂಬಡಗಟ್ಟಿ ಎಂಬ ಗ್ರಾಮವಿದೆ. ಇಲ್ಲಿ 22 ವರ್ಷದ ಬಟ್ಟಲುಗಣ್ಣಿನ ಪದವೀಧರೆ ಸುಂದರಿ ಒಬ್ಬಳಿದ್ದಳು. ಆಕೆಯೇ ಅನ್ಯಕೋಮಿನ ಸಿಮ್ರನ್ ಮೌಲಾಸಾಬ ಮಾಣಿಕಬಾಯಿ ಎಂಬಾಕೆ. ಮನೆಯಲ್ಲಿ ತಂದೆ-ತಾಯಿ ಬಂಧು ಬಳಗದೊಂದಿಗೆ ಬೆಳೆದಾಕೆ. ಹೇಗೋ ಪದವಿವರೆಗೆ ಶಿಕ್ಷಣ ಮುಗಿಸಿದ್ದಾಳೆ. ಅದೇ ಓಣಿಯಲ್ಲಿ 31 ವರ್ಷದ ಮಹಾಬಳೇಶ ರುದ್ರಪ್ಪ ಕಾಮೋಜಿ ಎಂಬ ನಿರುದ್ಯೋಗಿ ಐನಾತಿಯೊಬ್ಬನಿದ್ದನು. ಈತ ಪಿಯುಸಿವರೆಗೆ ಓದಿ ಕೃಷಿ ಕಾಯಕ ಮಾಡಿಕೊಂಡಿದ್ದನು. ವಯಸ್ಸಿಗೆ ಬಂದಿದ್ದ ಬ್ಯೂಟಿ ಸಿಮ್ರನ್ ಚೆನ್ನಾಗಿ ತಿಂದುಂಡು ಮೈ-ಕೈ ತುಂಬಿಕೊಂಡು ಪೊಗದಸ್ತಾಗಿ ಗುಂಡು-ಗುಂಡಾಗಿ ಬೆಳೆದಿದ್ದಳು.

ಅದೇ ಓಣಿಯಲ್ಲಿ ದಿನಾಲೂ ಹಿಂದೂ ಯುವಕ ಮಹಾಬಳೇಶನನ್ನು ನೋಡುತ್ತ ನೋಡುತ್ತ ಆತನತ್ತ ಆಕರ್ಷಿತಳಾದಳು. ಹಾಲಿನಲ್ಲಿ ಎದ್ದಿ ತೆಗೆದಂತಹ ಮೈ ಬಣ್ಣದ ಸಿಮ್ರನ್‌ಳನ್ನು ನೋಡಿದ್ದ ಮಹಾಬಳೇಶ ಕೂಡಾ ಸಿಮ್ರನ್‌ಳತ್ತ ಆಕರ್ಷಿತನಾದನು. ಪರಸ್ಪರ ನೋಡುವುದು, ನಗುವುದು, ಸಿಮ್ರನ್ ಒಬ್ಬಳೇ ಹೊರಟಾಗ ಮಹಾಬಳೇಶ ಬೆನ್ನು ಹತ್ತುವುದು ಹೀಗೆ ಕೆಲವು ದಿನ ಮಾಡುವುದರೊಳಗಾಗಿ ಪರಸ್ಪರರು ಹಾಯ್... ಹಲೋ ಎಂದು ತಮ್ಮ ತಮ್ಮ ಮೊಬೈಲ್ ನಂಬರ್‌ಗಳನ್ನು ಪಡೆದುಕೊಂಡು ವ್ಯಾಟ್ಸಪ್.... ವ್ಹಿಡಿಯೋ ಕಾಲ್... ಮೆಸೇಜ್‌ಗಳು ಆರಂಭವಾಗಿ 'ಐ ಲವ್ ಯೂ' ಎಂದು ಬಿಟ್ಟರು. ಹೀಗೆ ಆರಂಭವಾದ ಪ್ರೀತಿ ಕ್ರಮೇಣ ಒಬ್ಬರನ್ನು ಒಬ್ಬರು ಬಿಟ್ಟಿರಲಾರದಷ್ಟು ಪ್ರೀತಿಸಿದರು. ಇವರ ಪ್ರೇಮ ಕಳೆದ ಎರಡು-ಮೂರು

☞ 5

## ಕಿತ್ತೂರ ಪೊಲೀಸರು ಕರ್ತವ್ಯ ಪ್ರಜ್ಞೆ ಮೆರೆದಿದ್ದಾರೆ - ಎಸ್ಪಿ ಡಾ. ಭೀಮಾಶಂಕರ ಗುಳೇದ

ಕಿತ್ತೂರ ತಾಲ್ಲೂಕಿನ ಅಂಬಡಗಟ್ಟಿಯ ತಿಪ್ಪೆಗುಂಡಿಯಲ್ಲಿ ಸಿಕ್ಕ ಅನಾಮಧೇಯ ನವಜಾತ ಹೆಣ್ಣು ಶಿಶುವಿನ ಕೊಲೆ ಪ್ರಕರಣವನ್ನು ಭೇದಿಸುವಲ್ಲಿ ಸಿಪಿಐ ಶಿವಾನಂದ ಗುಡಗನಟ್ಟಿ ಪಿಎಸ್ಐ (ಕಾ.ಸು) ಪ್ರವೀಣ ಗಂಗೋಳ, ಪಿಎಸ್ಐ (ಕ್ರೈಂ) ಪ್ರವೀಣ ಕೋಟಿ ಮತ್ತು ಸಿಬ್ಬಂದಿಗಳ ಕಾರ್ಯಾಚರಣೆ ನಿಜಕ್ಕೂ ಶ್ಲಾಘನೀಯ ಎಂದು ಎಸ್ಪಿ ಡಾ. ಭೀಮಾಶಂಕರ ಗುಳೇದ ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ರಾಜ್ಯದ ಅನೇಕ ಕಡೆಗಳಲ್ಲಿ ನವಜಾತ ಶಿಶು ಪತ್ತೆ ಪ್ರಕರಣ ನಿರಂತರವಾಗಿ ಬೆಳಕಿಗೆ ಬರುತ್ತಿವೆ. ಹೆತ್ತವರೇ ಅನೇಕ ಕಡೆಗಳಲ್ಲಿ ತಿಪ್ಪೆಗುಂಡಿ ರಸ್ತೆ ಹಾಗೂ ನಿರ್ಜನ ಪ್ರದೇಶದ ಪೊದೆಗಳಲ್ಲಿ ಶಿಶುಗಳನ್ನು ಬೀಸಾಕಿ ಹೋಗುತ್ತಿದ್ದಾರೆ. ಇದೇ ರೀತಿ ತಿಪ್ಪೆಗುಂಡಿಯಲ್ಲಿ ಬೀಸಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊದಲ ಬಾರಿಗೆ ಪ್ರೇಮಿಗಳಾದ ಮಹಾಬಳೇಶ್ವರ-ಸಿಮ್ರನ್ ಎಂಬ ಆರೋಪಿಗಳನ್ನು ಬಂಧಿಸುವಲ್ಲಿ ಕಿತ್ತೂರ ಪೊಲೀಸರು ಯಶಸ್ವಿಯಾಗಿದ್ದಾರೆ. ಸದರಿ ಪ್ರಕರಣದಲ್ಲಿ ತಾರ್ಕಿಕ ಅಂತ್ಯ ಸಿಕ್ಕಿದೆ. ನಿಜಕ್ಕೂ ಕಿತ್ತೂರ ಪೊಲೀಸರು ತುಂಬಾ ಶ್ರಮವಹಿಸಿ ಆರೋಪಿಗಳನ್ನು ಪತ್ತೆಹಚ್ಚಿದ್ದಾರೆ. ದುರಾದೃಷ್ಟ ಪ್ರಕರಣವಾದರೂ ಕೂಡಾ ಆ ಮುಗ್ಧ ಮಗುವಿನ ಸಾವಿಗೆ ಪೊಲೀಸರು ನ್ಯಾಯ ಒದಗಿಸಿದ್ದಾರೆ ಎಂದು ಎಸ್ಪಿ ಡಾ. ಭೀಮಾಶಂಕರ ಗುಳೇದ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕಿತ್ತೂರ ಪೊಲೀಸರ ಕರ್ತವ್ಯ ದಕ್ಷತೆಯನ್ನು ಇಂದು ಸಾರ್ವಜನಿಕರು ಶ್ಲಾಘಿಸುತ್ತಿದ್ದಾರೆ. ☯

4 ☞

ವರ್ಷಗಳಿಂದ ಮುಂದುವರೆದಿತ್ತು. ಪ್ರೀತಿಯ ಅಮಲಿನಲ್ಲಿ ತಮ್ಮ ಧರ್ಮಗಳು ಬೇರೆ ಬೇರೆ ಎನ್ನುವುದನ್ನು ಮರೆತು ಹೋಗಿದ್ದರು.

**ಕಾಮ ಸಂಬಂಧ ಹೊಂದತೊಡಗಿದ್ದರು...**

ಇಲ್ಲಿ ಮಹಾಬಳೇಶ ಕಾಮೋಜಿ ಸಿಮ್ರನ್‌ಗಿಂತ ಸುಮಾರು 10 ವರ್ಷ ಹಿರಿಯನಿದ್ದನು. ಆತನಿಗೆ ಇದುವರೆಗೆ ಮದುವೆಯಾಗದೇ ಐನಾತಿಯಂತೆ ತಿರುಗುತ್ತಿದ್ದನು. ಬೆದೆಗೆ ಬಂದ ಕಳ್ಳ ದನದಂತೆ ಕೆಲವೊಮ್ಮೆ ಊರಿನ ಬಿಡಾಡಿ ಹೆಂಗಸರ ಸಲುವಾಗಿ ಬೇಲಿ ಹಾರಿದ್ದುಂಟು. ಇಂತಹ ಮಹಾಬಳೇಶನಿಗೆ ಸಿಮ್ರನ್‌ಳು ಸಿಕ್ಕಾಗ ಸ್ವರ್ಗ ಮೂರೇ ಗೇಣು ಉಳಿದಂತಾಗಿತ್ತು. ಅದರಲ್ಲೂ ಮೊಬೈಲ್ ಇಂಟರ್‌ನೆಟ್ ಜಮಾನಾದಲ್ಲಿ ಪ್ರೇಮ... ಕಾಮ... ವಿರಹ ತುಂಬಿದ ರೀಲ್ಸ್‌ಗಳನ್ನು ನೋಡುತ್ತಲೇ ತಾವು ಯಾವಾಗ ಸುಖ ಪಡಬೇಕು ಎಂದು ಚಡಪಡಿಸುತ್ತಿದ್ದರು. ಅದರಲ್ಲೂ ಗೂಗಲ್ ಸರ್ಚ್ ಮಾಡಿ ತ್ರಿಬಲ್ ಎಕ್ಸ್ ಸಿನಿಮಾಗಳನ್ನು ನೋಡುವ ಪ್ರೇಮಿಗಳಿಬ್ಬರು ಮೈ ಮನದಲ್ಲಿ ಕಾಮ ತುಂಬಿಕೊಂಡರು. ಸುಖಕ್ಕಾಗಿ ಚಡಪಡಿಸತೊಡಗಿದ್ದರು.

ಅದೊಂದು ದಿನ ಇಬ್ಬರು ಪ್ರೇಮಿಗಳು ಸೇರಿ ಒಂದಾಗಿ ಸುಖ ಪಡುವ ಅವಕಾಶವನ್ನು ಸೃಷ್ಟಿಸಿಕೊಂಡರು. ಮಹಾಬಳೇಶ ಕಾಮೋಜಿ ಮತ್ತು ಸಿಮ್ರನ್ ತಾವೇ ನಿರ್ಧರಿಸಿದ ಸ್ಥಳದಲ್ಲಿ ಬೆತ್ತಲಾದರು. ಅನುಭವಸ್ಥ ಮಹಾಬಳೇಶ ಇಂಚಿಂಚಾಗಿ ಸಿಮ್ರನ್‌ಳ ದೇಹ ಸುಖ ಸವಿದು ಬೆವರಿಳಿಸಿಕೊಂಡು ವಿಜೃಂಭಿಸಿದನು. ಇದರಿಂದ ಸಿಮ್ರನ್‌ಳು ತೃಪ್ತಳಾಗಿ ಮಹಾಬಳೇಶನನ್ನು ಬಿಗಿದಪ್ಪಿಕೊಂಡಳು. ಇದೇ ತರಹ ಮಹಾಬಳೇಶ-ಸಿಮ್ರನ್‌ಳ ಕಾಮ ಸಂಬಂಧ ಕಳ್ಳ ರೂಪದಲ್ಲಿ ಮುಂದುವರೆಯಿತು.



ಸಿಪಿಐ ಶಿವಾನಂದ ಗುಡಗನಟ್ಟಿ

**ಮದುವೆಗೆ ಮನೆಯವರ ವಿರೋಧ...**

ಮಹಾಬಳೇಶ ಮತ್ತು ಸಿಮ್ರನ್ ಇಬ್ಬರೂ ಕಳ್ಳ ಕಾಮ ಸಂಬಂಧದಲ್ಲಿ ಮಿಂದೇಳುತ್ತಿದ್ದರು. ಪರಸ್ಪರ ಮದುವೆ ಮಾಡಿಕೊಳ್ಳಲು ನಿರ್ಧರಿಸಿಬಿಟ್ಟರು. ಆದರೆ ಇಬ್ಬರ ಮನೆಗಳಲ್ಲಿ ಧರ್ಮಗಳು ಬೇರೆ ಬೇರೆ ಆದ ಕಾರಣ ಮದುವೆಯನ್ನು ಖಡಾ ಖಂಡಿತವಾಗಿ ವಿರೋಧಿಸಿದರು. ಮಹಾಬಳೇಶ ಮತ್ತು ಸಿಮ್ರನ್ ಇಬ್ಬರಿಗೂ ಖಡಕ್ ವಾರ್ನಿಂಗ್ ಕೊಡಲಾಯಿತು. ಇದರಿಂದ ಪ್ರೇಮಿಗಳಿಬ್ಬರು ಬಹಳವಾಗಿ ನೊಂದುಕೊಂಡರು.

**ಸಿಮ್ರನ್ ಗರ್ಭಿಣಿಯಾದಳು...**

ಅನೇಕ ಬಾರಿ ತನ್ನ ಪ್ರಿಯಕರ ಮಹಾಬಳೇಶನ ಜತೆಗೆ ಗುಟ್ಟಾಗಿ ಸಿಮ್ರನ್‌ಳು ಕಾಮ ಸಂಬಂಧವನ್ನು ಹೊಂದಿದ್ದಳು. ಇಲ್ಲಿ ಪ್ರೇಮಿಗಳಿಬ್ಬರು ಮುಂಜಾಗರೂಕತಾ ಕ್ರಮ ಏನನ್ನೂ ಅನುಸರಿಸಲಿಲ್ಲ. ಸಿಮ್ರನ್‌ಳಿಗೆ ಪಾಳಿ ಆಗಲಿಲ್ಲ. ಆಗಲಾದರೂ ತನ್ನ ಪ್ರೇಮಿ ಮಹಾಬಳೇಶನಿಗೆ ತಿಳಿಸಲಿಲ್ಲ. ಇತ್ತ ಮನೆಯವರಿಗೂ ತಿಳಿಸಲಿಲ್ಲ. ಮೊದಲೇ ಸಿಮ್ರನ್ ಗುಂಡು-ಗುಂಡಾಗಿ ದಪ್ಪಗಿದ್ದ ಕಾರಣ ಮೊದ ಮೊದಲು ಯಾರಿಗೂ ಗೊತ್ತಾಗಲಿಲ್ಲ. ಆಗಲೇ ಸಿಮ್ರನ್‌ಳ ಉದರದಲ್ಲಿ ಮಹಾಬಳೇಶನ ಮಗು ಸದ್ದಿಲ್ಲದೇ ಬೆಳೆಯುತ್ತಿತ್ತು. ಇತ್ತ ಎಂಟು ತಿಂಗಳು ಮುಗಿಯುತ್ತ ಬಂದಾಗಲೇ ಸಿಮ್ರನ್ ತನ್ನ ಪ್ರಿಯಕರನಿಗೆ ವಿಷಯವನ್ನು ತಿಳಿಸಿದಾಗ ಆತ ಮೊದ ಮೊದಲು ಗಾಬರಿಗೊಂಡನು. ನಂತರ ನೀನು ಧೈರ್ಯವಾಗಿರು ಯಾರಿಗೂ ಗೊತ್ತಾಗದಂತೆ ಹೆರಿಗೆ ಮಾಡುವ ವಿಧಾನ ಹೇಳುತ್ತೇನೆಂದು ಸಮಾಧಾನ ಪಡಿಸಿದನು.

**ಯೂ ಟ್ಯೂಬ್ ನೋಡಿ ಸ್ವಯಂ ಹೆರಿಗೆ...**

ಅಂದು ಮಾರ್ಚ್ 5ನೇ ತಾರೀಖು ಬುಧವಾರ ಸಿಮ್ರನ್‌ಳಿಗೆ ತೀವ್ರ ಹೆರಿಗೆ ನೋವು ಕಾಣಿಸಿಕೊಂಡಿದೆ. ಹದಿನೈದು ದಿನ ಮೊದಲೇ ಪ್ರಿಯಕರ ಮಹಾಬಳೇಶನ ನಿರ್ದೇಶನದಂತೆ ಸಿಮ್ರನ್‌ಳು ಯೂಟ್ಯೂಬ್ ನೋಡಿ ಸ್ವಯಂ ಹೆರಿಗೆ ಮಾಡಿಕೊಳ್ಳಬೇಕೆಂದು ಅರಿತಿದ್ದಳು. ಅದಕ್ಕಾಗಿ ಮಾನಸಿಕವಾಗಿ ಸಿದ್ಧತೆಯನ್ನು ನಡೆಸಿಕೊಂಡಿದ್ದಳು. ಮನೆಯಲ್ಲಿದ್ದ ಬಾತ್‌ರೂಂನಲ್ಲಿ ಹೆರಿಗೆ ಬೇನೆ ತಿನ್ನುತ್ತ ಪ್ರಿಯಕರನೊಂದಿಗೆ ವಿಡಿಯೋ ಕಾಲ್ ಮಾಡಿ ಅವನಿಂದ ನಿರ್ದೇಶನ ಪಡೆದುಕೊಂಡಿದ್ದಾಳೆ. ಸಿಮ್ರನ್ ಬಲು ಗಟ್ಟಿಗಿತ್ತಿ. ಆಕೆಯ ಪ್ರಿಯಕರನ ನಿರ್ದೇಶನದಲ್ಲಿ ಮುಂದಿನ ದುಷ್ಟ ಕಾರ್ಯಕ್ಕೆ ಕೈ ಹಾಕುತ್ತಾಳೆ. ಅದಕ್ಕೆ ಹೇಳುವುದು 'ಒಲಿದರೆ ನಾರಿ ಮುನಿದರೆ ಮಾರಿ' ಎಂದು.



ಡಿವೈಎಸ್ಪಿ ರವಿ ನಾಯಕ

**ಕೊಲೆಗೈದು ತಿಪ್ಪೆಗೆ ಬೀಸಾಕಿದ್ದಳು...**

ತನ್ನ ಕಳ್ಳ ಕಾಮ ಸಂಬಂಧಕ್ಕೆ ಹುಟ್ಟಿದ್ದ ನವಜಾತ ಹೆಣ್ಣು ಶಿಶು ತುಂಬಾ ಮುದ್ದಾಗಿತ್ತು. ಅದು ಜನಿಸಿ ಕಣ್ಣು ಬಿಡುವ ಮೊದಲೇ ಕಟುಕಿ ಸಿಮ್ರನ್ ಮಗುವಿನ ಬಾಯಿ ಮುಚ್ಚಿ ಮೊದಲೇ ಸಿದ್ದಪಡಿಸಿಕೊಂಡು ಇಟ್ಟಿದ್ದ ಪ್ಲಾಸ್ಟಿಕ್ ಬ್ಯಾಗ್ ಒಂದರಲ್ಲಿ ತುಂಬಿದಳು. ಕುಟುಕ ಜೀವದ ಹಸುಳೆ ಚೀಲಕ್ಕೆ ಹಾಕುವಾಗ ತಲೆಗೆ ಪೆಟ್ಟು ಬಿದ್ದು ಅದಾಗಲೇ ಉಸಿರು ಚೆಲ್ಲಿತ್ತು. ಸತ್ತ ನವಜಾತ ಶಿಶುವನ್ನು ಅದ್ಯಾರಿಗೂ ಗೊತ್ತಾಗದಂತೆ ತಮ್ಮ ಮನೆಯ ಹಿಂದಿದ್ದ ತಿಪ್ಪೆಗೆ ಎಸೆದು ಬಂದು ಸಿಮ್ರನ್ ತೆಪ್ಪಗೆ ಬಂದು ತನ್ನ ವಿಕೃತ ಮನಸ್ಸಿನ ಪ್ರಿಯಕರ ಮಹಾಬಳೇಶನಿಗೆ ಹೇಳಿದ್ದಳು. ಆತನ ಐನಾತಿ ಐಡಿಯಾಗಳನ್ನೇ ಮುಂದಿಟ್ಟುಕೊಂಡು ಡ್ರಾಮಾ ಆರಂಭಿಸಿದ್ದಳು. ಮರುದಿನ ಮುಂಜಾನೆ ನಾಯಿಗಳು ನವಜಾತ ಶಿಶುವನ್ನು ಬಾಯಲ್ಲಿ ಕಚ್ಚಿಕೊಂಡು ಕಾದಾಟ ನಡೆಸಿದಾಗ ಊರವರಿಗೆ ಈ ಸುದ್ದಿ ಗೊತ್ತಾಗಿ ಅದು ಪೊಲೀಸ್ ಠಾಣೆವರೆಗೆ ಹೋಗಿ ಮುಟ್ಟಿತು.

**ಆರಂಭಗೊಂಡ ಪೊಲೀಸ್ ತನಿಖೆ...**

ಕಿತ್ತೂರ ಪಿಎಸ್‌ಐ ಪ್ರವೀಣ ಗಂಗೋಳ ತುಂಬಾ ಕುಶಾಗ್ರಮತಿಯ ಅಧಿಕಾರಿ. ಅವರು ಅಂಬಡಗಟ್ಟಿ ಗ್ರಾಮದ ತಿಪ್ಪೆಯ ಗುಂಡಿಯಲ್ಲಿ ನವಜಾತ ಹೆಣ್ಣು ಶಿಶುವಿನ ಮೃತದೇಹ ದೊರೆತಿರುವ ಕುರಿತು ಸಿಪಿಐ ಶಿವಾನಂದ ಗುಡಗನಟ್ಟಿ, ಬೈಲಹೊಂಗಲ ಡಿವೈಎಸ್ಪಿ ರವಿ ನಾಯಕರಿಗೆ ವಿಷಯ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡರು. ಸಿಪಿಐ ಶಿವಾನಂದ ಗುಡಗನಟ್ಟಿ, ಪಿಎಸ್‌ಐ ಪ್ರವೀಣ ಗಂಗೋಳ, ಕ್ರೈಂ ಪಿಎಸ್‌ಐ ಪ್ರವೀಣ ಕೋಟಿ ಮತ್ತು ಸಿಬ್ಬಂದಿಗಳೊಂದಿಗೆ ಅಂಬಡಗಟ್ಟಿಯ ಘಟನಾ ಸ್ಥಳಕ್ಕೆ ಧಾವಿಸಿದರು.

ಸೂಕ್ಷ್ಮವಾಗಿ ನವಜಾತ ಹೆಣ್ಣು ಶಿಶುವಿನ ಶವವನ್ನು ಸಿಪಿಐ ಶಿವಾನಂದ ಗುಡಗನಟ್ಟಿ, ಪಿಎಸ್‌ಐಗಳಾದ ಪ್ರವೀಣ ಗಂಗೋಳ, ಪ್ರವೀಣ ಕೋಟಿ ಪರಿಶೀಲಿಸಿದರು. ಶಿಶುವಿನ ತಲೆಗೆ ಗಾಯವಾಗಿತ್ತು. ಶಿಶುವನ್ನು ದಾರುಣವಾಗಿ ಹತ್ಯೆ ಮಾಡಲಾಗಿತ್ತು. ಇಂತಹ ಶಿಶು ಹತ್ಯೆ ಪ್ರಕರಣಗಳಲ್ಲಿ ಸಾಮಾನ್ಯವಾಗಿ ತಾಯಿಯನ್ನು ಪತ್ತೆಹಚ್ಚುವುದು ಕಷ್ಟ-ಸಾಧ್ಯವಾಗಿತ್ತು. ತಕ್ಷಣ ಸಿಪಿಐ ಶಿವಾನಂದ ಗುಡಗನಟ್ಟಿ ಅವರು ಡಿವೈಎಸ್ಪಿ ರವಿ ನಾಯಕ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್. ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರೊಂದಿಗೆ ಸಮಾಲೋಚಿಸಿ ನಿರ್ದೇಶನಗಳನ್ನು ಪಡೆದು ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿ ಶತಾಯ-ಗತಾಯ ಇದರ ತಾಯಿಯನ್ನು ಪತ್ತೆ ಮಾಡಲೇಬೇಕೆಂಬ ಹಠ ತಟ್ಟರು. ನವಜಾತ ಹೆಣ್ಣು ಶಿಶುವಿನ ತಲೆಗೆ ಗಂಭೀರವಾಗಿ ಗಾಯವಾಗಿ ಮೃತಪಟ್ಟ ಬಗ್ಗೆ ಮರಣೋತ್ತರ ಪರೀಕ್ಷೆಯಲ್ಲಿ ವೈದ್ಯರು ಉಲ್ಲೇಖಿಸಿದ್ದರು. ಪ್ರಕರಣ ಬೆನ್ನಟ್ಟಿದ್ದ ಪೊಲೀಸರು ಅಕ್ಕಪಕ್ಕದ ಸರಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ತೆರಳಿ ಗರ್ಭಿಣಿಯರು ಚಿಕಿತ್ಸೆ ಪಡೆದ ಬಗ್ಗೆ ಮಾಹಿತಿ ಸಂಗ್ರಹಿಸಿದ್ದರೂ ಕೂಡಾ ಹಂತಕಿ ತಾಯಿ ಬಗ್ಗೆ ಸುಳಿವು ಸಿಗಲಿಲ್ಲ.

**ಪ್ಲಾಸ್ಟಿಕ್ ಕವರ್ ನೀಡಿದ ಸುಳಿವು...**

ನವಜಾತ ಹೆಣ್ಣು ಶಿಶುವನ್ನು ಹಾಕಿ ಬಿಸಾಕಲಾದ ಪ್ಲಾಸ್ಟಿಕ್ ಕವರ್ ಫ್ಲಿಪ್‌ಕಾರ್ಟ್ ಆನ್‌ಲೈನ್‌ನಿಂದ ಬಂದದ್ದಾಗಿತ್ತು. ತುಂಬಾ ಚತುರ ಅಧಿಕಾರಿ ಎಂದು ಹೆಸರಾದ ಸಿಪಿಐ ಶಿವಾನಂದ ಗುಡಗನಟ್ಟಿ, ಪಿಎಸ್‌ಐ ಪ್ರವೀಣ ಗಂಗೋಳ ಒಂದು ಹೆಜ್ಜೆ ಮುಂದೆ ಇಟ್ಟು ಆನ್‌ಲೈನ್‌ನಿಂದ ಬಂದ ಪ್ಲಾಸ್ಟಿಕ್ ಕವರ್‌ನಲ್ಲಿ ಪಾರ್ಸಲ್ ತಂದಿದ್ದು ಯಾರಿರಬಹುದು....? ಎಂಬುದರ ಮೂಲ ಕೆದಕುತ್ತ ಹೋದಾಗ ಅದು ಸಿಮ್ರನ್‌ಳ ಮನೆಯತ್ತ ಬೆಟ್ಟು ಮಾಡಿತ್ತು. ಆಗ ತಡ ಮಾಡದೇ ಸಿಪಿಐ ಶಿವಾನಂದ ಗುಡಗನಟ್ಟಿ, ಪಿಎಸ್‌ಐ ಪ್ರವೀಣ ಗಂಗೋಳ ಅದಾಗಲೇ ಸಿಮ್ರನ್‌ಳ ಕುರಿತು ರೋಚಕ ಸಂಗತಿಗಳನ್ನು ಅಂಗೈಯಲ್ಲಿರಿಸಿಕೊಂಡಿದ್ದರು. ಆಗ ತಡಮಾಡದೇ ವಿಚಾರಣೆಗಾಗಿ ಸಿಮ್ರನ್‌ಳನ್ನು ಠಾಣೆಗೆ ಕರೆಸಿದಾಗಲೇ ನಿಜಸಂಗತಿ ಹೇಳಿ ಪೊಲೀಸರೆ ಒಂದರೆ ಕ್ಷಣ ದಂಗಾಗಿ ಹೋದರು.



ಪಿಎಸ್‌ಐ ಪ್ರವೀಣ ಗಂಗೋಳ

**ಹೆಣ್ಣುಮಗು ನಂದೇ... ಕೊಂದಿರುವೆ...**

ಸಿಮ್ರನ್‌ಳು ತನಿಖಾಧಿಕಾರಿ ಶಿವಾನಂದ ಗುಡಗನಟ್ಟಿ, ಪಿಎಸ್‌ಐ ಪ್ರವೀಣ ಗಂಗೋಳರನ್ನು ದಿಕ್ಕು ತಪ್ಪಿಸಲು ಪ್ರಯತ್ನಿಸಿದ್ದಳು. ಇಲ್ಲಿ ತನಿಖಾಧಿಕಾರಿಗಳ ನಿರ್ದೇಶನದಂತೆ ಕಿತ್ತೂರು ಪೊಲೀಸ್ ಠಾಣೆಯ ಮುಖ್ಯ ಮಹಿಳಾ ಪೇದೆ ಜಿ.ಆರ್. ಸಾಲಿಮಠ ಸಿಮ್ರನ್‌ಳ ಬಾಯಿ ಬಿಡಿಸಿದರು. ಆಗ ಸಿಮ್ರನ್ ಸಾಹೇಬ್ರ ಆ... ಮಗು ನಂದೇ... ನಾನೇ ಅದನ್ನು ಕೊಲೆ ಮಾಡಿರುವೆ. ಈ ಮಗುವಿನ ಜನ್ಮಕ್ಕೆ ನನ್ನ ಪ್ರಿಯಕರ ಮಹಾಬಳೇಶ ರುದ್ರಪ್ಪ ಕಾಮೋಜಿ ಕಾರಣ' ಎಂದಳು.

**ಮಹಾಬಳೇಶ-ಸಿಮ್ರನ್ ಬಂಧನ...**

ಹೆಣ್ಣು ಮಗುವಿನ ಕೊಲೆಗೆ ಕಾರಣರಾಗಿದ್ದ ಮಹಾಬಳೇಶ ಮತ್ತು ಸಿಮ್ರನ್‌ಳನ್ನು ಬಂಧಿಸಿದ ಸಿಪಿಐ ಶಿವಾನಂದ ಗುಡಗನಟ್ಟಿ ದೋಷಾರೋಪಣ ಪತ್ರದೊಂದಿಗೆ ನ್ಯಾಯಾಧೀಶ ಮುಂದೆ ಹಾಜರುಪಡಿಸಿದಾಗ ನ್ಯಾಯಾಧೀಶರು ಆರೋಪಿಗಳಿಬ್ಬರನ್ನು ಜೈಲಿಗೆ ಕಳಿಸಿದ್ದಾರೆ. ಪ್ರಪಂಚವನ್ನೇ ನೋಡದ ಹಸುಳೆಯನ್ನು ಪೈಶಾಚಿಕವಾಗಿ ಕೊಲೆಗೈದ ಹಂತಕರಿಬ್ಬರು ಇಂದು ಜೈಲು ಸೇರಿ ತಂಗಳು ಮುರಿಯುತ್ತಿದ್ದಾರೆ. ಸಿಪಿಐ ಶಿವಾನಂದ ಗುಡಗನಟ್ಟಿ ಅವರಿಗೆ ತನಿಖೆಯಲ್ಲಿ ಪಿಎಸ್‌ಐಗಳಾದ ಪ್ರವೀಣ ಗಂಗೋಳ, ಪ್ರವೀಣ ಕೋಟಿ, ಸಿಬ್ಬಂದಿಗಳಾದ ಶ್ರೀಮತಿ ಜಿ.ಆರ್. ಸಾಲಿಮಠ, ಅದೃಶ್ಯ ಚಿಕ್ಕೇರಿ, ಶರೀಫ್ ದಫೇದಾರ ನೆರವಾಗಿದ್ದಾರೆ.

## ಎರಡು ತಿಂಗಳಲ್ಲಿ ಸಿಮ್ರನ್‌ಳ ಮದುವೆ...

ಮಹಾಬಳೇಶ ರುದ್ರಪ್ಪ ಕಾಮೋಜಿಯ ಜತೆಗೆ ಎರಡು ವರ್ಷಗಳಿಂದ ಪ್ರೀತಿ-ಪ್ರೇಮದ ಹೆಸರಿನಲ್ಲಿ ಗುಟ್ಟಾಗಿ ಅನೈತಿಕ ಸಂಬಂಧವಿರಿಸಿಕೊಂಡು ಓಡಾಡಿದ್ದ ಸಿಮ್ರನ್‌ಳಿಗೆ ಅವರ ಪೋಷಕರು ತಮ್ಮ ಧರ್ಮದಲ್ಲಿ ಮದುವೆ ತಯಾರಿ ನಡೆಸಿದ್ದರು. ಆದರೆ ಪಾಪಿ ಸಿಮ್ರನ್ ತನ್ನ ಗರ್ಭದಲ್ಲಿ ಒಂಬತ್ತು ತಿಂಗಳು ಬೆಳೆಸಿದ್ದ ಪಿಂಡದ ಬಗ್ಗೆ ತನ್ನ ಹೆತ್ತವರಿಗೆ ಒಂಚೂರು ಮಾಹಿತಿ ನೀಡಿರಲಿಲ್ಲ. ಇದೀಗ ಸಿಮ್ರನ್‌ಳು ಶಿಶು ಹತ್ಯೆ ಮಾಡಿರುವುದನ್ನು ಕಂಡು ಪೋಷಕರು ಊರಲ್ಲಿ ಮುಖ ಎತ್ತದಂತಾಗಿದೆ.


## ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!

ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟ ಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಛೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲ. 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.

**ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ**

**ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ,**

**ಬೆಂಗಳೂರು-560 079. ಮೊ : 9513892666**

ಕ್ರೈಂ ಪ್ರಪಂಚ

# ಕಿಲ್ಲಿಂಗ್ ಕಬಾಬ್

ಮಗಳು ಒಂದು ದಿನಪೂರ್ತಿ ಮನೆಯಲ್ಲಿ ಇರಲಿಲ್ಲ. ಅವಳು ಮನೆಯಿಂದ ಹೋಗಿದ್ದು ಗುರುವಾರ ಮಧ್ಯಾಹ್ನ.

ಬಂದಿದ್ದು ಯಾವಾಗ? ಶುಕ್ರವಾರ ರಾತ್ರಿ ಹತ್ತು ಗಂಟೆ ಆಗಿತ್ತು.

ಆಟೋದಲ್ಲಿ ಬಂದ ಕೂಡಲೇ ಮನೆಯ ಗೇಟಿನ ಹತ್ತಿರ ಇಳಿದು ''ಡ್ರೈವರ್... ಮನೆಗೆ ಹೋಗಿ ಹಣ ತಗೊಂಡು ಬರ್ತೀನಿ ಅಂತ ಹೇಳಿದಾಗ ಆಟೋ ಡ್ರೈವರ್‌ಗೆ ಆಶ್ಚರ್ಯ ಉಂಟಾಗಿತ್ತು ಎಂದು ಹೇಳಬಹುದು.

ಅವಳ ತಲೆಕೂದಲು ಕೆದರಿತ್ತು.

ಮುಖ ವ್ಯಗ್ರವಾಗಿತ್ತು.

ತುಂಬಾ ಟೆನ್ಷನ್‌ಗೆ ಒಳಗಾಗಿದ್ದಳು.

ಅವಳು ಯಾವುದೋ ಸರ್ಕಲ್ ಹತ್ತಿರ ಬಂದು, ಖಾಲಿ ಬರುತ್ತಿದ್ದ ಆಟೋ ಹತ್ತಿ 'ಬೇಗ ಹೊರಡಿ ಡ್ರೈವರ್' ಎಂದಿದ್ದಳು.

''ಎಲ್ಲಿಗೆ ಮೇಡಂ.''

''ಸರಸ್ವತಿಪುರಂಗೆ.''

''ಮೀಟರ್ ಮೇಲೆ ಡಬ್ಬಲ್ ಚಾರ್ಜ್ ಆಗುತ್ತೆ. ಅಂದರೆ ಈಗ ರಾತ್ರಿ ಹತ್ತು ಗಂಟೆ ಆಗಿದೆ.''

''ಎಷ್ಟಾದರೂ ಕೊಡ್ತೀನಿ. ಈಗ ಬೇಗ ಹೊರಡಪ್ಪ'' ಎಂದು ಆತುರ, ಉದ್ವೇಗದಿಂದ ಹೇಳಿದ್ದಳು.

ಮನೆಯೊಳಗೆ ದಿಢೀರನೆ ಬಂದ ಮಗಳನ್ನು ಕಂಡು ತಂದೆ-ತಾಯಿ ಮತ್ತು ತಮ್ಮ, ಅಣ್ಣ ಎಲ್ಲರೂ ಆನಂದ-ಆಶ್ಚರ್ಯಗೊಂಡಿದ್ದರು. ಅವಳಿರುವ ಸ್ಥಿತಿಯನ್ನು ಕಂಡು ಗಾಬರಿಯಾಗಿ ಪ್ರಶ್ನೆಗಳನ್ನು ಕೇಳಲು ಬಾಯಿ ತೆರೆದಾಗ ಅವಳು ರೇಗುತ್ತಾ ''ಬೇಗ ಯಾರಾದರೂ ಐನೂರು ರೂಪಾಯಿ ಕೊಡಿ'' ಎಂದಳು.

ಅಣ್ಣ ಕೂಡಲೇ ಹಣ ತೆಗೆದುಕೊಡುತ್ತಾ ಅವಳ ಜೊತೆ ಹೊರಗೆ ಬಂದನು.

ಆಟೋ ಚಾರ್ಜ್‌ಗಿಂತ ನೂರು ರೂಪಾಯಿ ಜಾಸ್ತಿ ಕೊಟ್ಟಳು.

ಅವಳು ಪದ್ಮಿನಿ ಪಾರಿಜಾತ! ಪ್ರಾಯ ಇಪ್ಪತ್ತೆರಡು. ಫೈನಲ್ ಈಯರ್ ಡಿಗ್ರಿ ಪರೀಕ್ಷೆ ಬರೆದು ಈಗ ಫಲಿತಾಂಶಕ್ಕಾಗಿ ಕಾಯುತ್ತಿದ್ದಾಳೆ.

ಅವಳ ತಂದೆ - ದಾಮೋದರ ರಾವ್, ತಾಯಿ - ನೇತ್ರಾವತಿ, ಅಣ್ಣ- ಶ್ರೀಕಾಂತ, ತಮ್ಮ- ಚಂದ್ರಕಾಂತ, ತಂಗಿ - ಪಲ್ಲವಿ ಇವರುಗಳ ಒಡನಾಟದಲ್ಲಿ ಬೆಳೆದಿದ್ದಾಳೆ ಈ ಪದ್ಮಿನಿ ಪಾರಿಜಾತ.

ಅವಳು ಮಂಕಾಗಿ ಕುಳಿತಿದ್ದಾಳೆ. ತಾಯಿ ನೇತ್ರಾವತಿ ಅವಳಿಗೆ ಕುಡಿಯಲು ಬಿಸಿ ಬಾದಾಮಿ ಹಾಲು ಕೊಟ್ಟರು. ಜೊತೆಗೆ ಬಿಸ್ಕತ್ ಮತ್ತು ಬಾಳೆಯ ಹಣ್ಣನ್ನು ಕೊಟ್ಟರು.

ಅವಳಲ್ಲಿ ಚೈತನ್ಯ ಬಂದಿದೆ.

ತಂದೆ ದಾಮೋದರ ಅವರು ಮಗಳ ತಲೆ ಸವರುತ್ತಾ ''ಪದ್ಮಿನಿ.... ಗುರುವಾರ ಮಧ್ಯಾಹ್ನದಿಂದ ಶುಕ್ರವಾರ ರಾತ್ರಿಯತನಕ ಎಲ್ಲಿಗಮ್ಮಾ ಹೋಗಿದ್ದೆ?''

ಅವಳು ಎಲ್ಲರ ಮುಖ ನೋಡಿದ ನಂತರ ತುಂಬಾ ಮೆಲ್ಲಗೆ ''ನಾನಾಗಿಯೇ ಹೋಗಿರಲಿಲ್ಲ'' ಎಂದಳು.

''ಬೇರೆ ಯಾರಾದರೂ ಕರೆದುಕೊಂಡು ಹೋಗಿದ್ರಾ?''

ಅವಳು ತಲೆಯಾಡಿಸಿದಳು.

''ಫೋನ್ ಯಾಕೆ ಮಾಡಲಿಲ್ಲ?''

ಅವಳಿಂದ ಉತ್ತರ ಬರಲಿಲ್ಲ.

ಅಣ್ಣ ಶ್ರೀಕಾಂತ ''ನಾವು ಫೋನ್ ಮಾಡಿದಾಗ ನೀನು ಅಟೆಂಡ್ ಮಾಡಲಿಲ್ಲ'' ಎಂದನು.

ತಂಗಿ ಪಲ್ಲವಿ ''ಆಮೇಲೆ ನಿನ್ನ ಮೊಬೈಲ್ ಫೋನ್ ಸ್ವಿಚ್ ಆಫ್ ಆಗಿತ್ತು'' ಎಂದಳು.

ತಾಯಿ ನೇತ್ರಾವತಿ ಆತಂಕದಿಂದ ''ನಿನ್ನನ್ನು ಯಾರೋ ಕರೆದುಕೊಂಡು ಹೋಗಿದ್ದು ಅಂತ ಹೇಳ್ದೆ. ಯಾರಮ್ಮ ಅವರು?''

ತಮ್ಮ ಚಂದ್ರಕಾಂತ 'ನಿನಗೆ ಗರ್ಲ್ ಫ್ರೆಂಡ್ ತುಂಬಾ ಇದ್ದಾರೆ. ಅವರೆಲ್ಲಾ ತುಂಬಾ ತರ್ಲೆ ಆಟ ಆಡ್ತಾರೆ' ಎಂದನು.

''ಗರ್ಲ್ ಫ್ರೆಂಡ್ಸ್ ಅಲ್ಲ.''

''ನಿನಗ್ಯಾರು ಬಾಯ್ ಫ್ರೆಂಡ್ಸ್ ಇಲ್ಲವಲ್ಲ.''

''ಇಲ್ಲ... ಯಾರೂ ಇಲ್ಲ.''

ತಂದೆ ದಾಮೋದರ ಅವರು ಬೇಸರ, ಅಸಹನೆಯಿಂದ ''ಹಾಗಾದರೆ ನಿನ್ನನ್ನು ಕರ್ಕೊಂಡು ಹೋಗಿದ್ದು ಯಾರು ಅಂತ ನೇರವಾಗಿ ಹೇಳಮ್ಮ. ನಮ್ಮ ಟೆನ್ಷನ್ ಜಾಸ್ತಿ ಮಾಡ್ಬೇಡ.'

''ಚಂದನ್ ರೆಡ್ಡಿ...!''

ಈ ಹೆಸರನ್ನು ಕೇಳಿದ ಕೂಡಲೇ ಮನೆಯವರೆಲ್ಲಾ ಬೆಚ್ಚಿಬಿದ್ದರು.

ಚಂದನ್ ರೆಡ್ಡಿ...!

●●●

ಮೈಸೂರಿನ ಹೊರವಲಯದ ಪ್ರಾಂತ್ಯ ಅಂದರೆ, ನಂಜನಗೂಡಿಗೆ ಹೋಗುವ ಮಾರ್ಗದಲ್ಲಿದೆ 'ಗೆಜ್ಜಗಳ್ಳಿ' ಎಂಬ ಗ್ರಾಮ.

ಅಲ್ಲೊಂದು ಒಂಟಿ ಮನೆ ಇದೆ.

ಆ ಮನೆಯಲ್ಲಿ ದೀಪ ಬೆಳಗುತ್ತಿದೆ ಮತ್ತು ಫ್ರಂಟ್ ಡೋರ್ ಓರೆಯಾಗಿ ತೆರೆದುಕೊಂಡಿದೆ. ಅದು ಮುಖ್ಯರಸ್ತೆ ಆಗಿರೋದ್ರಿಂದ ವಾಹನಗಳ ಸಂಚಾರ ರಾತ್ರಿ ವೇಳೆ ಸಹ ಇರುತ್ತದೆ.

ನಾಯಿಯೊಂದು ಬೊಗಳುತ್ತಿದೆ. ಆ ನಾಯಿ ಬಂದಿತು. ಆ ಮನೆಯ ಬಾಗಿಲು ಓರೆಯಾಗಿ ತೆರೆದುಕೊಂಡಿದ್ದರಿಂದ ಒಳಗೆ ಹೋಯಿತು. ಎರಡು ನಿಮಿಷಗಳಾಯಿತು. ನಾಯಿ ಹೊರಗೆ ಬಂದಿತು. ಅದರ ಮೂತಿ ರಕ್ತಮಯವಾಗಿದೆ. ರಕ್ತ ಅಂಟಿಕೊಂಡಿದೆ. ನಾಲಿಗೆಯಿಂದ ಆ ರಕ್ತ ನೆಕ್ಕುತ್ತಾ ಹೊರಟು ಹೋಯಿತು.

ಆ ಮನೆಯಲ್ಲಿ ನಿಶ್ಶಬ್ದತೆ ಆವರಿಸಿದೆ. ಅಲ್ಲಿ ಯಾರೂ ಇರಲಿಲ್ಲ ಅಂತ ಹೇಳಬಹುದು. ಯಾರಾದರೂ ಇದ್ದಿದ್ದರೆ ಈ ರೀತಿ ಬಾಗಿಲು ತೆರೆದು, ಲೈಟ್ ಆಫ್ ಮಾಡುತ್ತಿರಲಿಲ್ಲವೆ?

ಪ್ರಶ್ನೆ ಶೇಷವಾಗಿದೆ.

ಆ ನಾಯಿ ಮನೆಯೊಳಗಿಂದ ಬಂದಾಗ ಅದರ ಮೂತಿಗೆ ರಕ್ತ ಅಂಟಿಕೊಂಡಿತ್ತು....!

ಈ ಪ್ರಶ್ನೆಗೆ ಉತ್ತರ ಹೇಳಲು ಅಲ್ಲಿ ಯಾರೂ ಇರಲಿಲ್ಲ.

●●●

ಪದ್ಮಿನಿ ಪಾರಿಜಾತ! ಆ ವರ್ಷ ಕಾಲೇಜಿನಲ್ಲಿ ನಡೆದಿದ್ದಂತಹ ಸೌಂದರ್ಯ ಸ್ಪರ್ಧೆಯಲ್ಲಿ ವಿಜೇತಳಾಗಿದ್ದಳು.

ಕ್ವೀನ್ ಆಫ್ ಕಾಲೇಜ್. ಬ್ಯೂಟಿ ಡಾಲ್! ಈ ರೀತಿಯಾಗಿ ಅವಳ ಸೌಂದರ್ಯವನ್ನು ಆ ಕಾಲೇಜಿನ ಯುವಕರು ಮಾತ್ರವಲ್ಲ, ಲೆಕ್ಚರರ್‌ಗಳು ಸಹ ಆರಾಧಿಸುತ್ತಿದ್ದರು.

ಪಡ್ಡೆಯುವಕರಂತು ಇವಳ ನಗುವಿನ ಕೃಪೆಗಾಗಿ ಸರ್ಕಸ್ ಮಾಡುತ್ತಿದ್ದರು. ಅವಳ ಪ್ರೀತಿಗಾಗಿ ಹಂಬಲಿಸಿದ್ದರು.

ಪದ್ಮಿನಿ ಪಾರಿಜಾತ ಪ್ರತಿಕ್ರಿಯೆ ನೀಡುತ್ತಿರಲಿಲ್ಲ. ಯಾವ ಯುವಕರನ್ನೂ ಪ್ರಚೋದಿಸುತ್ತಿರಲಿಲ್ಲ. ಮುಖ್ಯವಾಗಿ ಕಾಲೇಜಿನ ಯುವಕರ ಜೊತೆ 'ಹಲೋ' ಹೇಳಿ ತಲೆ ತಗ್ಗಿಸಿಕೊಂಡು ಹೋಗುತ್ತಿದ್ದಳು.

ಚೆಲ್ಲಾಟ ಯುವತಿ ಅಲ್ಲ. ಪ್ರತಿಭಾವಂತ ವಿದ್ಯಾರ್ಥಿನಿ. ಚರ್ಚಾಸ್ಪರ್ಧೆ, ಹಾಡುಗಾರಿಕೆ, ಭರತನಾಟ್ಯ ಎಲ್ಲಾ ಕಲಿತಿದ್ದಳು ಮತ್ತು ಕಾಲೇಜಿನ ಕಾರ್ಯಕ್ರಮಗಳಲ್ಲಿ ಸ್ಪರ್ಧಿಸಿ ಬಹುಮಾನ ಪಡೆದಿದ್ದಳು.

ಅವಳು ಆಲ್ ಇನ್ ವನ್! ಪ್ರತಿಭಾವಂತೆ... ಬುದ್ಧಿವಂತೆ. ಮುಖ್ಯವಾಗಿ ಗುಣವಂತೆ.

ಇವಳ ಜೊತೆಗಿನ ಗೆಳತಿಯರು ಚೆಲ್ಲು, ಚೆಲ್ಲಾಗಿ ಆಡುತ್ತಾ, ಪಡ್ಡೆ ಯುವಕರನ್ನು ರೇಗಿಸುತ್ತಿದ್ದರೆ ಇವಳು ಸೈಲೆಂಟ್ ಆಗಿ ಇರುತ್ತಿದ್ದಳು ಮತ್ತು ಅವರಿಂದ ದೂರ ಇರುತ್ತಿದ್ದಳು.

ಇದೇ ಅವಳ ವಿಶೇಷತೆ!

ರಾತ್ರಿ ಹನ್ನೊಂದೂವರೆ ಆಗಿದೆ.

ಅವಳು ಮಲಗಿದ್ದಾಳೆ.

ಆದರೆ ನಿದ್ದೆ ಬಂದಿಲ್ಲ.

ಆಗ ಅವಳ ತಂದೆ-ತಾಯಿ, ಅಣ್ಣ, ತಮ್ಮ ಮತ್ತು ತಂಗಿ ಎಲ್ಲಾ ಬಂದರು. ಇವಳು ಎಲ್ಲರ ಕಡೆ ಒಂದು ಸಲ ನೋಡಿದಳು.

''ನಮಗೆ ಸತ್ಯ ಹೇಳಮ್ಮ.''

ತಾಯಿ ಗೋಗರೆಯುವ ರೀತಿಯಲ್ಲಿ ಅವಳನ್ನು ಕೇಳಿದರು.

ತಂದೆ 'ಚಂದನ್‌ರೆಡ್ಡಿ ನಿನಗೆ ಎಲ್ಲಿ ಸಿಕ್ಕಿದ್ದ? ನೀನ್ಯಾಕೆ ಅವನ ಜೊತೆ ಹೋದೆ'' ಎಂದು ಕೇಳಿದರು.

''ನಾನಾಗಿಯೇ ಹೋಗಲಿಲ್ಲ.'

ಅಣ್ಣ ''ಅಂದರೆ ನಿನ್ನನ್ನು ಹೆದರಿಸಿ ಕಿಡ್ನಾಪ್ ಮಾಡಿ ಕರ್ಕೊಂಡು ಹೋದ್ನ?''

ಅವಳು ಮೆಲ್ಲಗೆ ''ಇಲ್ಲ'' ಎಂದಳು.

ತಂಗಿ ಪಲ್ಲವಿ ''ಹಾಗಾದರೆ ನಿಜವಾಗಿ ನಡೆದದ್ದು ಏನು'' ಎಂದು ಕೇಳಿದಳು.

ಪದ್ಮಿನಿ ಪಾರಿಜಾತ ಹೇಳುತ್ತಿದ್ದಾಳೆ.

ಫ್ಲ್ಯಾಶ್‌ಬ್ಯಾಕ್ ಘಟನೆ.

★★★

ಗುರುವಾರ ಮಧ್ಯಾಹ್ನ!

ಪದ್ಮಿನಿ ಆಗ ತಾನೇ ಊಟ ಮಾಡಿ ತನ್ನ ರೂಮಿಗೆ ಬಂದಿದ್ದಳು.

ಫೋನ್ ಕಾಲ್ ಬಂದಿತು.

ಗೆಳತಿ ಪ್ರಿಯಾಂಕ ಮಾಡಿದ್ದಾಳೆ.

''ಹಲೋ ಪದ್ಮಿನಿ... ನೀನು ಈಗಲೇ ಸರ್ಕಲ್ ಹತ್ತಿರ ಬರ್ತೀಯಾ?''

''ಈಗ ಯಾಕೆ?''

''ನನ್ನನ್ನು ಮದುವೆ ಆಗಲಿರುವ ಹುಡುಗ ಬಂದಿದ್ದಾನೆ. ಅವನು ನನಗೆ ಸ್ಪೆಷಲ್ ಬರ್ತ್‌ಡೇ ಗಿಫ್ಟ್ ಕೊಡ್ತಾನಂತೆ.''

''ತುಂಬಾ ಸಂತೋಷ. ಆದರೆ ನಾನ್ಯಾಕೆ ಸರ್ಕಲ್‌ಗೆ ಬರಬೇಕು.''

''ಏ... ನನ್ನ ವುಡ್‌ಬೀ ನಿಂಗೆ ಪರಿಚಯ ಮಾಡಿಕೊಡ್ತೀನಿ. ಅವನು ಶ್ರೀಮಂತ ಕುಟುಂಬದವನು. ನನಗೆ ತುಂಬಾ ಬೆಲೆಬಾಳುವ ಗಿಫ್ಟ್ ಕೊಡಿಸುತ್ತಾನಂತೆ. ಅವರ ಸೆಲೆಕ್ಷನ್‌ಗೆ ನೀನು ಬರಲೇಬೇಕು.''

ಅವಳು ಚಡಪಡಿಸಿದಳು.

''ಪ್ಲೀಸ್ ಪದ್ಮಿನಿ... ಪ್ಲೀಸ್...''

''ಓಕೆ ಬರ್ತೀನಿ. ಆದರೆ ನಾನು ಸಂಜೆ ಐದು ಗಂಟೆ ಒಳಗೆ ವಾಪಸ್ ಬರ್ಬೇಕು. ಇವತ್ತು ಭರತನಾಟ್ಯದ ಕ್ಲಾಸ್ ಇದೆ.''

''ಆಗಲಿ ಬೇಗ ಬಂದು ಬಿಡೋಣ ನನ್ನ ವುಡ್‌ಬೀ ಇನೋವಾ ಕಾರಲ್ಲಿ ಸರ್ಕಲ್‌ನಲ್ಲಿ ಕಾಯುತ್ತಿದ್ದಾರೆ.''

''ಸಮವಟ್ ಅನ್ ನ್ಯಾಚುರಲ್. ಯಾಕೆ ಅವರು ನಿನ್ನ ಮನೆಗೆ ಬಂದು ಕರ್ಕೊಂಡು ಹೋಗಲ್ವ?''

''ಅವರು ಬಿಜಿನೆಸ್‌ಗಾಗಿ ಬೆಂಗಳೂರಿಗೆ ಬಂದಿದ್ದಾರೆ. ಮನೆಗೆ ಬರಲು ಟೈಂ ಇಲ್ಲ. ಅದಕ್ಕೆ ಸರ್ಕಲ್‌ಗೆ ಬರ್ತಾರೆ.''

ಪದ್ಮಿನಿ ಪಾರಿಜಾತ ರೆಡಿಯಾಗಿ ರೂಮಿನಿಂದ ಹೊರಗೆ ಬಂದಳು.

ತಂದೆ, ಅಣ್ಣ, ತಮ್ಮ, ತಂಗಿ ಯಾರೂ ಸಹ ಇರಲಿಲ್ಲ. ತಾಯಿ ರೂಮಿಗೆ ಹೋಗಿ ''ಮಮ್ಮಿ... ಫ್ರೆಂಡ್ ಮನೆಗೆ ಹೋಗ್ತಾ ಇದೀನಿ'' ಎಂದಾಗ ತಾಯಿ ನೇತ್ರಾವತಿ ''ಏ... ಇವತ್ತು ಡ್ಯಾನ್ಸ್ ಕ್ಲಾಸ್ ಇದೆ.''

''ಐದು ಗಂಟೆ ಒಳಗೆ ಬರ್ತೀನಿ.''

ರಾಮಸ್ವಾಮಿ ಸರ್ಕಲ್.

ಸ್ಥಳ - ಮೈಸೂರು.

ಈಗ ಪದ್ಮಿನಿ ಪಾರಿಜಾತ ಅಲ್ಲಿಗೆ ಬಂದಿದ್ದಾಳೆ. ಎಲ್ಲಾ ಕಡೆ ನೋಡುತ್ತಿದ್ದಾಳೆ.

ಗೆಳತಿ ಕಂಡು ಬರಲಿಲ್ಲ. ಪ್ರಿಯಾಂಕ ಎಲ್ಲಿ? ಅವಳ್ಯಾಕೆ ಬಂದಿಲ್ಲ? ಆಗ ಇನೋವಾ ಕಾರು ತುಂಬಾ ವೇಗವಾಗಿ ಬಂದು ಇವಳ ಸಮೀಪದಲ್ಲೇ ನಿಂತಾಗ ಗಾಬರಿಯಿಂದ ದೂರ ಸರಿದಳು.

ಪ್ರಿಯಾಂಕ ವಿಂಡೋ ಮೂಲಕ ತಲೆ ತೂರಿಸಿ ಕೈ ಆಡಿಸುತ್ತಾ ''ಏ ಪದ್ಮಿನಿ ಬಾರೇ'' ಎಂದು ಕೂಗಿದಳು.

ಪದ್ಮಿನಿ ಪಾರಿಜಾತ ಈಗ ಕಾರಿನ ಬ್ಯಾಕ್ ಡೋರ್ ತೆಗೆದಳು.

ಅಲ್ಲಿ ಪದ್ಮಿನಿ ಕುಳಿತಿದ್ದಾಳೆ. ಇವಳ ಪ್ರಿಯತಮ ಡ್ರೈವಿಂಗ್ ಸೀಟಲ್ಲಿ ಕುಳಿತಿದ್ದಾನೆ. ಅವನ ಕಡೆ ನೋಡಿದಳು. ಇದ್ಯಾಕೆ ಹೀಗಿದ್ದಾನೆ? ಕೂಲಿಂಗ್ ಗ್ಲಾಸ್ ಹಾಕಿದ್ದಾನೆ. ಮಂಕಿ ಕ್ಯಾಪ್ ಧರಿಸಿದ್ದಾನೆ.

ಲಾಂಗ್ ಕೋಟ್ ಶರೀರ ಆವರಿಸಿದೆ. ಅವಳು ಚಡಪಡಿಸಿದಳು.

ಕಾರು ಚಲಿಸಿತು. ಗೆಳತಿಯ ವುಡ್‌ಬೀ ಇವಳ ಕಡೆ ತಿರುಗಿ ನೋಡಲಿಲ್ಲ. ಹಲೋ ಹೇಳಲಿಲ್ಲ. ಇಷ್ಟೇ ಅಲ್ಲ, ಆ ಗೆಳತಿ ಪ್ರಿಯಾಂಕ ಸಹ ಅವನ ಪರಿಚಯ ಮಾಡಿಸಲಿಲ್ಲ.

ಕಾರು ಚಲಿಸುತ್ತಿದೆ. ಯಾರೊಬ್ಬರೂ ಮಾತಾಡುತ್ತಿಲ್ಲ. ಆ ಕ್ಷಣಗಳಲ್ಲಿ ಪ್ರಿಯಾಂಕ ''ಏ ಪದ್ಮಿನಿ... ಈ ಕಡೆ ನೋಡು'' ಎಂದಳು.

ಪದ್ಮಿನಿ ತಿರುಗಿದಳು.

ಪ್ರಿಯಾಂಕ ಸರ್ರನೆ ಅವಳತ್ತಬಾಗಿ ತಲೆ ಹಿಡಿದುಕೊಂಡು, ಮತ್ತೊಂದು ಕೈಯಿಂದ ದಪ್ಪ ಗಾತ್ರದ ಹತ್ತಿ ಉಂಡೆಯನ್ನು ಮೂಗಿನ ಹತ್ತಿರ ಒತ್ತಿ ಹಿಡಿದಳು.

ಕೆಟ್ಟ ರಾಸಾಯನಿಕ ವಾಸನೆ!

ಉಸಿರಿನ ಜೊತೆ ಸೇರಿತು.

ಆ ಕ್ಷಣಗಳಲ್ಲಿ ಬದಲಾವಣೆ ಆಯಿತು.

ಅವಳು ಕುಳಿತಲ್ಲೇ ತೇಲುಗಣ್ಣು ಮಾಡುತ್ತಾ ತೂರಾಡುತ್ತಿರುವ ರೀತಿ ಅಲ್ಲಾಡುತ್ತಾ ಗೆಳತಿಯ ಮೇಲೆ ವಾಲಿಕೊಂಡಳು.

ಎಚ್ಚರವಾಗಿದ್ದು ಯಾವಾಗ?

ಸಮಯ ಗೊತ್ತಿಲ್ಲ.

ಮುಖದ ಮೇಲೆ ನೀರಿನ ಹನಿಗಳ ಸ್ಪರ್ಶ ಆಗಿದ್ದರಿಂದ ಮತ್ತು ಜೋರಾಗಿ ಗಾಳಿ ಬೀಸುತ್ತಿರುವುದರಿಂದ ಎಚ್ಚರಗೊಂಡಳು.

ಅವಳು ಮಂಕಾಗಿದ್ದಾಳೆ.

ತಿರುಗುತ್ತಿರುವ ಫ್ಯಾನ್ ನೋಡುತ್ತಿದ್ದಾಳೆ.

ಅವಳಿಗೆ ವಾಸ್ತವಿಕತೆ ಬಂದಿಲ್ಲ.

ತುಂಬಾ ಹೊತ್ತಿನ ನಂತರ ಸಹಜ ಸ್ಥಿತಿಗೆ ಬಂದು ಗಾಬರಿಯಿಂದ ಎದ್ದು ಕುಳಿತಳು.

ಆಗ ಆ ದೃಶ್ಯ ಕಂಡಿತು.

ಸ್ವಲ್ಪ ದೂರದಲ್ಲಿ ರಿವಾಲ್ವಿಂಗ್ ಚೇರ್‌ನಲ್ಲಿ ಯಾರೋ ಕುಳಿತಿದ್ದಾರೆ.

ಬೆನ್ನು ಮಾತ್ರ ಕಾಣುತ್ತಿದೆ.

ಅವಳಿಗೆ ಗಾಬರಿಯಾಯಿತು.

ನಿಧಾನವಾಗಿ ಎಲ್ಲಾ ನೆನಪಾಗುತ್ತಿದೆ.

ಅವಳು ಎದ್ದು ನಿಲ್ಲಲು ಪ್ರಯತ್ನಿಸುತ್ತಾ ''ಯಾರು... ಯಾರದು? ನನ್ನನ್ನು ಇಲ್ಲಿಗ್ಯಾಕೆ ಕರ್ಕೊಂಡ್ ಬಂದಿದ್ದೀರ? ಎಲ್ಲಿ... ಎಲ್ಲಿ ಆ ಪ್ರಿಯಾಂಕ ಎಲ್ಲಿ?''

ಗಡುಸು ಧ್ವನಿಯಲ್ಲಿ ''ಪ್ರಿಯಾಂಕ ತನ್ನ ಮನೇಲಿ ಇದ್ದಾಳೆ'' ಎಂದನು.

ಆ ಧ್ವನಿ ಗುರುತಿಸಿದಳು. ದೃಶ್ಯ ಬದಲಾಯಿತು. ವೀಲ್ ಚೇರ್ ಈಗ ರಿವ್ವನೆ ತಿರುಗಿತು. ಆಗ ಅವಳಿಗೆ ಮುಖ ಕಂಡಿತು.

ಚಂದನ್ ರೆಡ್ಡಿ....!

●●●

ಬೆಡ್‌ರೂಮಿನಲ್ಲಿ ಇವಳ ಸುತ್ತಲು ಕುಳಿತಿದ್ದವರು

☞10

# ಉದ್ಯಮಿ ಲೋಕನಾಥ್ ಸಿಂಗ್ ಕೊಲೆಗೆ ಹೆಣ್ಣು ಕೊಟ್ಟ ಅತ್ತೆಯೇ ಕತ್ತು ಸೀಳಿ ಹತ್ಯೆ!

**ರಿಯಲ್ ಎಸ್ಟೇಟ್ ಉದ್ಯಮಿ, ಶಾಸಕ ಎಚ್.ಸಿ. ಬಾಲಕೃಷ್ಣ ಆಪ್ತ ಲೋಕನಾಥ್ ಸಿಂಗ್ ಕೊಲೆ ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿದೆ. ಸ್ವತಃ ಹೆಣ್ಣು ಕೊಟ್ಟ ಅತ್ತೆಯೇ ಪಾರ್ಟಿ ಆಯೋಜಿಸಿ ಪಕ್ಕಾ ಪ್ಲ್ಯಾನ್ ಮಾಡಿಯೇ ಲೋಕನಾಥ್ ಸಿಂಗ್‌ನನ್ನು ಬರ್ಬರವಾಗಿ ಹತ್ಯೆ ಮಾಡಿದ್ದಾಳೆ. ಮಗಳೊಂದಿಗೆ ಸೇರಿಕೊಂಡು ಕುತ್ತಿಗೆ ಸೀಳಿ ಕೊಲೆ ಮಾಡಿದ್ದಾಳೆ. ಮಗಳೊಂದಿಗೆ ಸೇರಿ ಅತ್ತೆಯೇ ಅಳಿಯನ್ನು ಈ ರೀತಿ ಭೀಕರವಾಗಿ ಕೊಲೆ ಮಾಡಿದ್ದೇಕೆ ಅಂತೀರಾ? ಇಲ್ಲಿದೆ ನೋಡಿ.**



ಕೊಲೆಯಾದ ಲೋಕನಾಥ್ ಸಿಂಗ್



ಆರೋಪಿ ಹೇಮಾ

ಕಳೆದ ಮಾರ್ಚ್ 22ರಂದು ಬೆಂಗಳೂರಿನ ಹೆಸರುಘಟ್ಟ ಬಳಿಯ ಬಿಜಿಎಸ್ ಲೇಔಟ್ ಬಳಿ ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಆಪ್ತ ಉದ್ಯಮಿ ಲೋಕನಾಥ್ ಸಿಂಗ್‌ನ ಕೊಲೆಯಾಗಿತ್ತು. ಇದೀಗ ಕೊಲೆ ಮಾಡಿದ್ದು ಹಳೇ ದುಷ್ಮನ್‌ಗಳು, ಯಾವುದೇ ರೌಡಿಶೀಟರ್‌ಗಳಲ್ಲ. ಲೋಕಸನಾಥ್ ಸಿಂಗ್‌ನನ್ನು ಅತ್ತೆಯೇ ಕೊಲೆ ಮಾಡಿದ್ದಾಳೆ. ಇನ್ನು ಅಚ್ಚರಿ ಅಂದ್ರೆ, ತನ್ನ ಗಂಡನ ಕೊಲೆಗೆ ಹೆಂಡ್ತಿಯೇ ಅಮ್ಮನ ಜೊತೆ ಕೈ ಜೋಡಿಸಿರುವುದು ಬೆಳಕಿಗೆ ಬಂದಿದೆ. ಸದ್ಯ ಸೋಲದೇವನಹಳ್ಳಿ ಪೊಲೀಸರು ಅಮ್ಮ, ಮಗಳನ್ನು ಬಂಧಿಸಿ ವಿಚಾರಣೆಗೊಳಪಡಿಸಿದ್ದಾರೆ.



ಡಿಸಿಪಿ ಸೇದುಲ್ಲ ಅದಾವತ್

ಕಳೆದ ಡಿಸೆಂಬರ್‌ನಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ಕೃಷ್ಣ ಸಿಂಗ್ ಹಾಗೂ ಹೇಮ ದಂಪತಿಯ ಮಗಳು ಎಂಬಿಎ ವ್ಯಾಸಂಗ ಮಾಡುತ್ತಿದ್ದ 24 ವರ್ಷದ ಯಶಸ್ವಿನಿಯನ್ನು 37 ವರ್ಷದ ಲೋಕನಾಥ್ ಸಿಂಗ್ ಕುಣಿಗಲ್‌ಗೆ ಕರೆದೊಯ್ದು ರಿಜಿಸ್ಟರ್ ಮದುವೆಯಾಗಿದ್ದ. ಆದರೆ ಮದುವೆ ವಿಚಾರ ಹುಡುಗಿ ಕುಟುಂಬಕ್ಕೆ ಪೋಷಕರಿಗೆ ಇಷ್ಟ ಇಲ್ಲದ ಕಾರಣ, ಕುಣಿಗಲ್ ರಿಜಿಸ್ಟರ್ ಕಚೇರಿಯಲ್ಲಿ ಮದುವೆಯಾಗಿ, ಪತ್ನಿಯನ್ನ ಅವರ ಪೋಷಕರ ಜೊತೆಯೇ ಬಿಟ್ಟಿದ್ದ. ಕೆಲ ದಿನಗಳ ಬಳಿಕ ಲೋಕನಾಥ್ ಸಿಂಗ್‌ನ ವ್ಯವಹಾರ, ಅಕ್ರಮ ಸಂಬಂಧಗಳ ಬಗ್ಗೆ ಪತ್ನಿ ಯಶಸ್ವಿನಿಗೆ ತಿಳಿದಿದೆ. ಈ ಬಗ್ಗೆ ಪ್ರಶ್ನೆ ಮಾಡಿದ ಪತ್ನಿ ಜೊತೆ ಜಗಳ ಕೂಡ ಆಗಿದೆ. ಎರಡು ವಾರದ ಹಿಂದೆ ಪತ್ನಿಯ ಕುಟುಂಬಕ್ಕೆ ಮದುವೆಯಾಗಿರೋ ವಿಚಾರ ಗೊತ್ತಾಗಿದೆ. ಈ ವೇಳೆ ಪತ್ನಿ ಕುಟುಂಬಸ್ಥರು ಜೊತೆ ಲೋಕನಾಥ್ ಸಿಂಗ್‌ಗೆ ಗಲಾಟೆಯಾಗಿದೆ.

ಬಳಿಕ ಲೋಕನಾಥ್ ಪತ್ನಿ ಯಶಸ್ವಿನಿ ಕುಟುಂಬಕ್ಕೆ ಬೆದರಿಕೆ ಹಾಕಿದ್ದಾನೆ. ಮಗಳ ಭವಿಷ್ಯ ಹಾಗೂ ಕುಟುಂಬದ ಮರ್ಯಾದೆಗೆ ಅಂಜಿ ನೊಂದ ಯಶಸ್ವಿ ತಾಯಿ ಹೇಮ, ಇವನಿಗೆ ಒಂದು ಗತಿ ಕಾಣಿಸಬೇಕು ಎಂದು ಮುಹೂರ್ತ ಫಿಕ್ಸ್ ಮಾಡಿದ್ದಳು. ಹೇಮ ಹಾಗೂ ಮಗಳು ಯಶಸ್ವಿನಿ ಪಕ್ಕಾ ಪ್ಲ್ಯಾನ್ ಮಾಡಿಕೊಂಡಿದ್ದರು. ಅದರಂತೆ ಯಶಸ್ವಿನಿ ನಿನ್ನ ಜೊತೆ ಮಾತನಾಡಬೇಕೆಂದು ಲೋಕನಾಥನನ್ನು ಚಿಕ್ಕಬಾಣವರದ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿದ್ದಳು. ಇವರ ಹಿಂದೆಯೇ ಯಶಸ್ವಿನಿ ತಾಯಿ ಹೇಮ ಸಹ ಆಟೋದಲ್ಲಿ ಕಾರನ್ನು ಫಾಲೋ ಮಾಕೊಂಡು ಹೋಗಿದ್ದಳು. ಬಳಿಕ ನಿರ್ಜನ ಪ್ರದೇಶದಲ್ಲಿ ನಿದ್ದೆ ಮಾತ್ರೆ ಬೆರೆಸಿದ್ದ ಊಟವನ್ನು ತಿನ್ನಿಸಿದ್ದಾಳೆ. ಹಾಗೇ ಪತಿಗೆ ಮದ್ಯ ಕುಡಿಸಿದ್ದಾಳೆ. ನಂತರ ಲೋಕನಾಥ್ ಮತ್ತಿನಲ್ಲಿ ತೇಲಾಡಿದ್ದಾನೆ. ಆಗ ಹೇಮ ಲೋಕನಾಥನ ಕತ್ತು ಸೀಳಿ ಬರ್ಬರವಾಗಿ ಕೊಲೆ ಮಾಡಿದ್ದಾಳೆ.

ಚೆನ್ನಾಗಿ ಎಣ್ಣೆ ಹೊಡೆದು ಟೈಟ್ ಆಗಿದ್ದ ಅಳಿಯ ಲೋಕನಾಥ್ ಸಿಂಗ್‌ಗೆ ಅತ್ತೆ ಹೇಳಿಕೊಟ್ಟಿದ್ದ ಪ್ರೀಪ್ಲಾನ್‌ನಂತೆ ಮಗಳು ಊಟದಲ್ಲಿ ನಿದ್ದೆ ಮಾತ್ರೆ ಹಾಕಿದ್ದಳು. ಯಾವಾಗ ನಿದ್ರೆಗೆ ಜಾರಿದನೋ ಆಗ ಹರಿತವಾದ ಆಯುಧದಿಂದ ಅತ್ತೆ ಹೇಮ ಕುತ್ತಿಗೆ ಕುಯ್ದಿದ್ದಾಳೆ. ಕೂಡಲೇ ಅಲ್ಲಿಂದ ಕಾಲ್ಕಿತ್ತ ಇಬ್ಬರು ಖಾಸಗಿ ವಾಹನದಲ್ಲಿ ಬೆಂಗಳೂರಿಗೆ ಬಂದು ತಲೆಮರೆಸಿಕೊಂಡಿದ್ದರು. ಸದ್ಯ ಅಮ್ಮ, ಮಗಳನ್ನ ಸೋಲದೇವನಹಳ್ಳಿ ಪೊಲೀಸರು ಅರೆಸ್ಟ್ ಮಾಡಿ ವಿಚಾರಣೆ ನಡೆಸಿದ್ದಾರೆ.

**ಹಂತಕರ ಪ್ಲ್ಯಾನ್ ಬಿಚ್ಚಿಟ್ಟ ಉತ್ತರ ವಿಭಾಗ ಡಿಸಿಪಿ**

ಇನ್ನು ಈ ಬಗ್ಗೆ ಉತ್ತರ ವಿಭಾಗ ಡಿಸಿಪಿ ಸೈದುಲ್ಲ ಅದಾವತ್ ಮಾಹಿತಿ ನೀಡಿದ್ದು, ಮಾರ್ಚ್ 22ರಂದು ಸಂಜೆ 5:30ಕ್ಕೆ ಲೋಕನಾಥ್ ಎಂಬಾತನ ಕೊಲೆಯಾಗಿದ್ದು, 112 ಗೆ ಕರೆ ಮಾಡಿ ಸ್ಥಳೀಯರ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋದಾಗ ಲೋಕನಾಥ್ ಸಿಂಗ್ 37 ವರ್ಷದ ವ್ಯಕ್ತಿ ಕೊಲೆಯಾಗಿರೋದು ಗೊತ್ತಾಗಿದೆ. ಅವರ ಸಹೋದರನ ದೂರಿನ ಮೇಲೆ ಮರ್ಡರ್ ಕೇಸ್‌ನಲ್ಲಿ ಎಫ್‌ಐಆರ್ ದಾಖಲಾಗಿದ್ದು, ಬಳಿಕ ತನಿಖೆ ಮಾಡಿ ಇಬ್ಬರು ಮಹಿಳೆಯರು ಬಂಧಿಸಲಾಗಿದೆ. ಆರೋಪಿಗಳು ಆತನ ಪತ್ನಿ ಮತ್ತು ಅತ್ತೆಯೇ ಆಗಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.



ಆರೋಪಿ ಯಶಸ್ವಿನಿ

ಪತ್ನಿ ಯಶಸ್ವಿನಿಯನ್ನು ಎರಡು ವರ್ಷದಿಂದ ಪ್ರೀತಿಸಿ ಕಳೆದ ಡಿಸೆಂಬರ್‌ನಲ್ಲಿ ಕುಣಿಗಲ್‌ನ ರಿಜಿಸ್ಟರ್ ಕಚೇರಿಯಲ್ಲಿ ಮದುವೆಯಾಗಿದ್ದಾರೆ. ಆದರೆ ಈ ವಿಚಾರ ಪತ್ನಿ ಕುಟುಂಬಸ್ಥರಿಗೆ ಗೊತ್ತಿರಲಿಲ್ಲ. ಮದುವೆ ಬಳಿಕ ಹುಡುಗಿಯನ್ನ ಪೋಷಕರ ಜೊತೆಯೇ ಬಿಟ್ಟು ಹೋಗಿರುತ್ತಾನೆ. ಮಗಳನ್ನ ಪ್ರೀತಿಸುತ್ತಿದ್ದಾಗ ವಯಸ್ಸು ಅಂತರಕ್ಕೆ ಪೋಷಕರು ಮದುವೆಗೆ ಒಪ್ಪಿರಲಿಲ್ಲ. ಅದೇ ಕಾರಣಕ್ಕೆ ಕುಣಿಗಲ್‌ನಲ್ಲಿ ರಿಜಿಸ್ಟರ್ ಮ್ಯಾರೇಜ್ ಆಗಿರುತ್ತಾರೆ. ಆದರೆ ಕೆಲ ದಿನಗಳಲ್ಲಿ ಈತನ ವ್ಯವಹಾರ ಅಕ್ರಮ ಸಂಬಂಧ, ವ್ಯವಹಾರಗಳ ಬಗ್ಗೆ ಗೊತ್ತಾಗುತ್ತೆ. ಆಗ ಗಂಡ ಹೆಂಡತಿ ಇಬ್ಬರ ನಡುವೆ ಜಗಳವಾಗಿದ್ದು, ಡಿವೋರ್ಸ್ ಗೆ ಮಾತುಕತೆ ಆಗಿದೆ. ಎರಡು ವಾರದ ಹಿಂದೆ ಕುಟುಂಬಕ್ಕೆ ಮದುವೆ ಆಗಿರೋದು ಗೊತ್ತಾಗುತ್ತೆ. ಆಗ ಲೋಕನಾಥ್, ಹುಡುಗಿ ಕುಟುಂಬದ ಮೇಲೆ ಬೆದರಿಕೆ ಹಾಕಲು ಮುಂದಾಗ್ತಾನೆ. ಇದರಿಂದ ಈತನನ್ನ ಕೊಲೆ ಮಾಡಲು ಅತ್ತೆ, ಪತ್ನಿ ಪ್ಲ್ಯಾನ್ ಮಾಡುತ್ತಾರೆ. ಪ್ಲ್ಯಾನ್ ಮಾಡಿ ಊಟದಲ್ಲಿ ನಿದ್ದೆ ಮಾತ್ರೆ ಹಾಕಿ ನಿರ್ಜನ ಪ್ರದೇಶದಲ್ಲಿ ಕಾರಿನಲ್ಲೇ ಕತ್ತಿಯಿಂದ ಕುತ್ತಿಗೆ ಚುಚ್ಚಿ ಕೊಲೆ ಮಾಡಿದ್ದಾರೆ ಎಂದು ತಿಳಿಸಿದರು. ಪತ್ನಿಯೇ ಲೋಕನಾಥ್‌ನನ್ನ ಮಾತನಾಡಬೇಕು ಅಂತ ಚಿಕ್ಕಬಾಣವರಕ್ಕೆ ಕರೆಸಿಕೊಂಡು, ಅಲ್ಲಿಂದ ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗುತ್ತಾರೆ. ಆಗ ಹಿಂದೆಯಿಂದ ಆಟೋದಲ್ಲಿ ತಾಯಿ ಕೂಡ ಫಾಲೋ ಮಾಡಿಕೊಂಡು ಹಿಂದೆ ಹೋಗಿ ಪ್ಲ್ಯಾನ್ ಮಾಡಿ ಮರ್ಡರ್ ಮಾಡಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಆಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

**ನಮ್ಮ ವಿಳಾಸ :**

8884452699 policenewsreporter@gmail.com 080-23588510

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079

**ಮನೆ ಮುಂದೆ ಓಡಾಡುವ ಸಣ್ಣ ಓಣಿಯ ವಿಚಾರಕ್ಕೆ ಅಕ್ಕಪಕ್ಕದ ಮನೆಯವರ ನಡುವೆ ನಡೆಯುತ್ತಿದ್ದ ಜಗಳ ವೈಷಮ್ಯಕ್ಕೆ ತಿರುಗಿ ಒಬ್ಬನ ಕೊಲೆಯಲ್ಲಿ ಅಂತ್ಯ ಕಂಡರೆ, ಇನ್ನಿಬ್ಬರು ಜೈಲು ಸೇರಿರುವ ಘಟನೆ ಕ್ಯಾಸಂಬಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.**

# ಓಣಿಯ ಜಾಗಕ್ಕಾಗಿ ಜಗಳ, ಕೊಲೆಯಲ್ಲಿ ಅಂತ್ಯ ಇಬ್ಬರು ಕೊಲೆಪಾತಕರನ್ನು ಬಂಧಿಸಿದ ಪೊಲೀಸರು


**ಕೋಲಾರ**


✍ ಕೋಲಾರ ಮಂಜು


ಮಂಜುನಾಥ ಬದುಕಿದ್ದಾಗ


ಕೋಲಾರ ಜಿಲ್ಲೆ, ಕೆಜಿಎಫ್ ತಾಲ್ಲೂಕಿನ ಬೇತಮಂಗಲ ಹೋಬಳಿಗೆ ಸೇರಿದ ಕ್ಯಾಸಂಬಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವ ಕಣ್ಣೂರು ಗ್ರಾಮದ ವಾಸಿ ವೆಂಕಟರಾಮಪ್ಪನವರ ಮಗ ಲಾರಿ ಚಾಲಕ ಮಂಜುನಾಥ್ ರವರು ಕಳೆದ 17 ವರ್ಷಗಳ ಹಿಂದೆ ಹೂವರಸನಹಳ್ಳಿಯ ಅಶ್ವಿನಿ ಎನ್ನುವವರನ್ನು ಮದುವೆಯಾಗಿದ್ದು, ಇವರಿಗೆ


ಎಸ್ಪಿ ಶಾಂತರಾಜು


ಸಿಪಿಐ ರಂಗಶ್ಯಾಮಯ್ಯ


ಪಿಎಸ್ಐ ಸಂಗಮೇಶ್ ಕೊಲ್ಹಾರ್


ಇಬ್ಬರು ಗಂಡು ಮಕ್ಕಳಿರುತ್ತಾರೆ. ಮಂಜುನಾಥ್‌ರವರು ಲಾರಿ ಡ್ರೈವರ್ ಕೆಲಸಕ್ಕೆ ಬೆಂಗಳೂರಿಗೆ ಹೋದರೆ ತಿಂಗಳಿಗೊಮ್ಮೆ ಮನೆಗೆ ಬಂದು ಹೋಗುತ್ತಿದ್ದರು. ಮಂಜುನಾಥ್ ಲಾರಿ ಡ್ರೈವರ್ ಆಗಿರುವುದರಿಂದ ಬೆಂಗಳೂರಿನಿಂದ ಸರಕುಗಳನ್ನು ದೂರದ ಊರುಗಳಿಗೆ ಸಾಗಿಸಬೇಕಾಗಿರುವುದರಿಂದ ವಾರಗಟ್ಟಲೇ ಪ್ರಯಾಣ ಮಾಡಿ ತೆಗೆದುಕೊಂಡು ಹೋಗಿದ್ದ ಸರಕನ್ನು ಅಲ್ಲಿ ಕೊಟ್ಟು ಅಲ್ಲಿನ ಸರಕುಗಳನ್ನು ಬೆಂಗಳೂರಿಗೆ ತರುತ್ತಿದ್ದರು. ಈ ರೀತಿ ಕೆಲಸದ ಒತ್ತಡ ಇದ್ದುದರಿಂದ ಮಂಜುನಾಥ್ ಊರಿಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕೆ ಹೆಂಡತಿ, ಮಕ್ಕಳನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಬಾಡಿಗೆ ಮನೆ ಮಾಡಿ ಒಟ್ಟಿಗೆ ಎಲ್ಲರು ವಾಸಿಸುವ ಪ್ಲಾನ್ ಮಾಡಿಕೊಂಡಿದ್ದನು. ಆದರೆ ಮಂಜುನಾಥ್ ಸರಕು ತುಂಬಿಕೊಂಡು ಬೆಂಗಳೂರಿಂದ ಡೆಲ್ಲಿವರೆಗೂ ಹೋಗಿ ಬರುವುದರಿಂದ ಮನೆಗೆ ಬರುವುದೇ ತಿಂಗಳಿಗೊಮ್ಮೆ ಸಂಸಾರ ಬೆಂಗಳೂರಿನಲ್ಲಿದ್ದರೇನು, ಗ್ರಾಮದಲ್ಲಿದ್ದರೇನು. ಅದಕ್ಕೆ ಪತ್ನಿ ನೀವು ಕೆಲಸ ಮಾಡಿಕೊಂಡು ತಿಂಗಳಿಗೊಮ್ಮೆ ಊರಿಗೆ ಬಂದುಬಿಡಿ. ಬೆಂಗಳೂರಿನಲ್ಲಿ ಮನೆ ಮಾಡುವುದು ಬೇಡ. ನಾನು ಸಹ ದಿನವು ಬಂಗಾರಪೇಟೆ ರೈಲ್ವೆ ನಿಲ್ದಾಣದಿಂದ ರೈಲಿನಲ್ಲಿ ಬೆಂಗಳೂರಿಗೆ ಹೋಗಿ ಖಾಸಗಿ ಕಂಪನಿಯಲ್ಲಿ ಕೆಲಸ ಮುಗಿಸಿಕೊಂಡು ಎಂದಿನಂತೆ ರೈಲಿನಲ್ಲಿ ಪ್ರಯಾಣ ಮಾಡಿ ಮನೆ ಸೇರಿಕೊಳ್ಳುತ್ತೇನೆಂದು ಹೇಳಿ ಪತ್ನಿ ಅಶ್ವಿನಿಯವರು ದಿನವು ಬೆಂಗಳೂರಿಗೆ ಕೆಲಸಕ್ಕೆ ಬರುತ್ತಿದ್ದರು. ಗಂಡ ಮಂಜುನಾಥ್ ಸಹ ಗ್ರಾಮಕ್ಕೆ ಬಂದು ಹೋಗುತ್ತಿದ್ದರು. ಈಗ್ಗೆ ಒಂದು ವರ್ಷದ ಹಿಂದೆ ಅಶ್ವಿನಿಯವರು ತನ್ನ ಇಬ್ಬರು ಮಕ್ಕಳೊಂದಿಗೆ ಹೂವರಸನಹಳ್ಳಿಯಲ್ಲಿರುವ ತನ್ನ ತವರುಮನೆಯಲ್ಲಿ ಇದ್ದುಕೊಂಡು ನಿತ್ಯವು ಕೆಲಸಕ್ಕೆ ಬೆಂಗಳೂರಿಗೆ ಹೋಗಿ ಬರುತ್ತಿದ್ದರು.


ಕೊಲೆಯಾದ ಮಂಜುನಾಥ

**ಓಣಿ ಜಾಗಕ್ಕೆ ಜಗಳ**

ಮಂಜುನಾಥ್‌ರವರ ಪತ್ನಿ ಅಶ್ವಿನಿ (37)ರವರು ಫೆಬ್ರವರಿ 17ರಂದು ಕ್ಯಾಸಂಬಳ್ಳಿ ಪೊಲೀಸ್ ಠಾಣೆಗೆ ಹಾಜರಾಗಿ ನನ್ನ ಗಂಡ ಮಂಜುನಾಥ್ (39)ರವರು ತಿಂಗಳಿಗೊಂದು ಸಾರಿ ನಮ್ಮನ್ನು ನೋಡಲು ಹೂವರಸನಹಳ್ಳಿಗೆ ಬಂದು ಹೋಗುವಾಗ ತನ್ನ ಹುಟ್ಟೂರಾದ ಕಣ್ಣೂರಿಗೆ ಹೋಗಿ ಒಂದು ದಿನ ಇದ್ದು ಮತ್ತೆ ಬೆಂಗಳೂರಿಗೆ ಹೋಗುತ್ತಿದ್ದರು. ಗ್ರಾಮದ ಮುನಿವೆಂಕಟಪ್ಪ ಅಲಿಯಾಸ್ ಅಪ್ಪಿ ಎನ್ನುವವರು ನಮ್ಮ ಮನೆ ಪಕ್ಕದಲ್ಲಿ ವಾಸವಿದ್ದು ಮನೆಯ ಮುಂದೆ ಇರುವ ಐದು ಅಡಿ ಅಗಲದ ಓಣಿಯ ವಿಚಾರವಾಗಿ ನನ್ನ ಗಂಡನೊಂದಿಗೆ ಆಗಾಗ ಜಗಳ ತೆಗೆದು ತೊಂದರೆ ಕೊಡುತ್ತಿದ್ದರು. ಈ ಬಗ್ಗೆ ದೂರನ್ನೂ ಸಹ ನೀಡಿರುತ್ತೇವೆ. ಅಧಿಕಾರಿಗಳು ಸ್ಥಳಕ್ಕೆ ಹಾಜರಾಗಿ ಇದು ಸಾರ್ವಜನಿಕರು ಓಡಾಡುವ ಓಣಿಯಾಗಿದ್ದು ಈ ರಸ್ತೆಯನ್ನು ಇಬ್ಬರು ಉಪಯೋಗಿಸಿಕೊಳ್ಳುವಂತೆ ಹೇಳಿದರಲ್ಲದೆ ಇದು ಯಾರ ಸ್ವಂತ ರಸ್ತೆಯಾಗಿರುವುದಿಲ್ಲವೆಂದು ಹೇಳಿದ್ದರು. ಈ ಓಣಿ ಸ್ವಂತ ನನಗೆ ಸೇರಿದ್ದು ನಿಮ್ಮನ್ನು ಓಡಾಡಲು ಬಿಡುವುದಿಲ್ಲವೆಂದು ಹೇಳಿಕೊಂಡಿದ್ದ ಮುನಿವೆಂಕಟಪ್ಪನಿಗೆ ಇದರಿಂದ ಅವಮಾನವಾಗಿ ನಮ್ಮ ಮೇಲೆ ದ್ವೇಷ ಸಾಧಿಸುತ್ತಿದ್ದನು. ಹೀಗಿರುವಾಗ ನನ್ನ ಗಂಡ ಮಂಜುನಾಥ್ ರವರು ಮೂರು ದಿನಗಳ ಹಿಂದೆ ನಮ್ಮ ತಾಯಿ ಮನೆಗೆ ಬಂದು ಬೆಂಗಳೂರಿಗೆ ಹೋಗುತ್ತೇನೆಂದು ಹೇಳಿ ಹೋದವರು ಕಣ್ಣೂರು ಗ್ರಾಮಕ್ಕೆ ಹೋಗಿರುವ ಬಗ್ಗೆ ನನಗೆ ವಿಚಾರ ಗೊತ್ತಾಗಿರುತ್ತದೆ.

ಇಂದು ಬೆಳಿಗ್ಗೆ ಸುಮಾರು 7.30 ಗಂಟೆಯಲ್ಲಿ ನನ್ನ ಗಂಡ ಮಂಜುನಾಥ್‌ರವರ ಚಿಕ್ಕಪ್ಪನಾದ ಹರೀಶ್‌ರವರು ನನ್ನ ಮೊಬೈಲ್ ಫೋನ್‌ಗೆ ಕರೆ ಮಾಡಿ ನಿನ್ನ ಗಂಡ ಮಂಜುನಾಥ್ ನಿಮ್ಮ ಹಳೆಯ ಮನೆ ಮುಂದೆ ಬಿದ್ದು ತಲೆಗೆ ಗಾಯವಾಗಿ ಮೃತಪಟ್ಟಿರುವುದಾಗಿ ತಿಳಿಸಿದರು. ನಂತರ ಸ್ವಲ್ಪ ಸಮಯದ ನಂತರ ನನ್ನ ಗಂಡನ ತಮ್ಮ ಭಾಸ್ಕರ್ ರವರು ನನ್ನ ಮೊಬೈಲ್ ಫೋನ್‌ಗೆ ಕರೆ ಮಾಡಿ ತಿಳಿಸಿದ ವಿಚಾರವೇನೆಂದರೆ ಓಣಿಯ ವಿಚಾರವಾಗಿ ಪೊಲೀಸ್ ಠಾಣೆಗೆ ದೂರು ಕೊಟ್ಟು ನ್ಯಾಯ ಪಂಚಾಯಿತಿ ಮಾಡಿಕೊಂಡು ರಾಜಾರೋಷವಾಗಿ ರಸ್ತೆಯಲ್ಲಿ ಓಡಾಡುತ್ತಿರುವ ಬಗ್ಗೆ ಅಪ್ಪಿ ನಮ್ಮ ಅಣ್ಣನ ಮೇಲೆ ದ್ವೇಷ ಸಾಧಿಸುತ್ತಿದ್ದನು ಜೊತೆಗೆ ಸಮಯ ಸಿಕ್ಕಾಗಲೆಲ್ಲ ಜಗಳ ತೆಗೆಯುತ್ತಿದ್ದನು. ಒಂದು ತಿಂಗಳ ಹಿಂದೆ ಅಣ್ಣ ಊರಿಗೆ ಬಂದಿದ್ದಾಗ ಮುನಿವೆಂಕಟಪ್ಪ ಅಲಿಯಾಸ್ ಅಪ್ಪಿ ಮತ್ತು ರಾಜೇಶ್‌ರವರುಗಳು ಸೇರಿಕೊಂಡು ಗಲಾಟೆ ಮಾಡಿ ಹಲ್ಲೆ ಮಾಡಲು ಮುಂದಾಗಿದ್ದು, ಆಗ ಗ್ರಾಮದ ಕೆಲವರು ಸೇರಿಕೊಂಡು ಜಗಳ ಬಿಡಿಸಿದರು. ಆದರೆ ನೆನ್ನೆ ದಿನ ರಾತ್ರಿ ಸುಮಾರು 8.30 ಗಂಟೆಯಲ್ಲಿ ಅಣ್ಣ ಮಂಜುನಾಥ್‌ರವರನ್ನು ಯಾವುದೋ ಒಂದು ಆಯುಧದಿಂದ ತಲೆಯ ಮೇಲೆ ಹೊಡೆದು ಸಾಯಿಸಿರುತ್ತಾರೆಂದು ತಿಳಿಸಿದರು. ಕೂಡಲೇ ನನ್ನ ತಮ್ಮ ನಾಗೇಂದ್ರಬಾಬು, ತಾಯಿ ವೆಂಕಟೇಶಮ್ಮರವರೊಂದಿಗೆ ಕಣ್ಣೂರು ಗ್ರಾಮಕ್ಕೆ ಹೋಗಿ ನೋಡಿದಾಗ ನನ್ನ ಗಂಡ ಮಂಜುನಾಥ್‌ರವರ ಶವವನ್ನು ನನ್ನ ಮೈದುನ ಭಾಸ್ಕರ್‌ರವರ ಮನೆಯ ಬಳಿ ಮಲಗಿಸಿದ್ದರು. ಆಗ ನಾನು ಮೃತದೇಹದ ಹತ್ತಿರಕ್ಕೆ ಹೋಗಿ ಕೂಲಂಕುಶವಾಗಿ ಪರಿಶೀಲಿಸಲಾಗಿ ಗಂಡ ಮಂಜುನಾಥ್‌ರವರ ತಲೆಯ ಬಲಭಾಗದ ಕಿವಿಯ ಬಳಿ ತೀವ್ರವಾಗಿ ರಕ್ತಗಾಯವಾಗಿರುತ್ತದೆ ಮತ್ತು ಬಲಕಿವಿಯಲ್ಲಿ ರಕ್ತಸ್ರಾವವಾಗಿರುತ್ತದೆ. ಎಡ ಮೊಣಕೈ ಮೇಲೆ ತರುಚಿದ ಗಾಯಗಳಾಗಿರುತ್ತದೆ ಹಾಗೂ ಗುಪ್ತಾಂಗದ ಬಳಿಯೂ ಸಹ ರಕ್ತಗಾಯವಾಗಿರುತ್ತದೆ. ಅಲ್ಲಿಂದ ನಾನು ನಮ್ಮ ಹಳೆಯ ಮನೆ ಬಳಿ ಹೋಗಿ ನೋಡಿದಾಗ ನಮ್ಮ ಮನೆಯ ಮುಂದೆ ಇರುವ ಕಾಲಿ ಜಾಗದಲ್ಲಿ ರಕ್ತ ಕಲೆಯಾಗಿರುತ್ತದೆ. ನಮ್ಮ ಗ್ರಾಮದ ವಾಸಿ ರಾಮಚಂದ್ರನ ಮಗ ಮುನಿವೆಂಕಟಪ್ಪ ಅಲಿಯಾಸ್ ಅಪ್ಪಿ ಮತ್ತು ತಮ್ಮಯ್ಯನವರ ಮಗ ರಾಜೇಶ್ ಸೇರಿದಂತೆ ಇಬ್ಬರು ಸೇರಿಕೊಂಡು ಓಣಿಯ ಜಾಗದ ವಿಚಾರವಾಗಿ ಜಗಳ ತೆಗೆದು ಹಲ್ಲೆ ಮಾಡಿ ಯಾವುದೋ ಆಯುಧದಿಂದ ತಲೆಯ ಮೇಲೆ ಹೊಡೆದು ಸಾಯಿಸಿ ಪರಾರಿಯಾಗಿರುವ ಇಬ್ಬರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ದೂರು ನೀಡಿದ ಮೇರೆಗೆ ಠಾಣಾಧಿಕಾರಿಗಳು ಕ್ರಮ ತೆಗೆದುಕೊಂಡಿರುತ್ತಾರೆ.


ಪ್ರಮುಖ ಆರೋಪಿ ಮುನಿವೆಂಕಟಪ್ಪ

**ಓಣಿಯ ಜಾಗಕ್ಕಾಗಿ ಕೊಲೆ**

ಕಣ್ಣೂರಿಗೆ ಕೆಜಿಎಫ್ ಪೊಲೀಸ್ ವರಿಷ್ಠಾಧಿಕಾರಿ ಶಾಂತರಾಜು ಬೇತಮಂಗಲ ಪೊಲೀಸ್ ಠಾಣೆಯ ಪಿಐ ರಂಗಸ್ವಾಮಯ್ಯ, ಪಿಎಸ್ಐ ಸಂಗಮೇಶ್ ಕೊಲ್ಹಾರ, ಸಿಬ್ಬಂದಿ ವರ್ಗ, ಬೆರಳಚ್ಚು ತಜ್ಞರು ಮತ್ತು ಶ್ವಾನದಳದೊಂದಿಗೆ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದ ಮೇಲೆ ಮೃತದೇಹವನ್ನು ಕೆಜಿಎಫ್‌ನ ಸಿವಿಲ್ ಆಸ್ಪತ್ರೆಗೆ ಸಾಗಿಸಲಾಯಿತು. ಮರುದಿನ ಬೆಳಿಗ್ಗೆ ಶವಗಾರದಲ್ಲಿದ್ದ ಮಂಜುನಾಥ್ ರವರ ಮೃತದೇಹವನ್ನು ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಶವಪರೀಕ್ಷೆ ನಡೆಸಿದ ನಂತರ ಮೃತದೇಹವನ್ನು ವಾರಸುದಾರರಿಗೆ ನೀಡಲಾಯಿತು.


ಆರೋಪಿ ರಾಜೇಶ್

ಡ್ರೈವರ್ ಮಂಜುನಾಥ್‌ರವರನ್ನು ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿಗಳ ಪತ್ತೆಗಾಗಿ ಎಸ್ಪಿ ಶಾಂತರಾಜುರವರ ಮಾರ್ಗದರ್ಶನದಲ್ಲಿ ಪಿಐ ರಂಗಶ್ಯಾಮಯ್ಯನವರ ನೇತೃತ್ವದಲ್ಲಿ ಪಿಎಸ್ಐ ಸಂಗಮೇಶ್ ಕೊಲ್ಹಾರ್, ತನಿಖಾ




ಮಂಜುನಾಥ ಕೊಲೆಯಾದ ಸ್ಥಳ

ಸಹಾಯಕ ಬಿ. ಮಹೇಂದ್ರ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಆರೋಪಿಗಳಾದ ಎ1 ಮುನಿವೆಂಕಟಪ್ಪ ಅಲಿಯಾಸ್ ಅಪ್ಪಿ ಎ2 ರಾಜೇಶ್‌ರವರನ್ನು ಕೆಜಿಎಫ್ ಬಳಿ ಬಂಧಿಸಿ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಮಂಜುನಾಥ ಮತ್ತು ನಾನು ಒಂದೇ ಓಣಿಯಲ್ಲಿ ವಾಸವಾಗಿದ್ದು, ಮನೆ ಮುಂದೆ ಓಡಾಡುವ 5 ಅಡಿ ಜಾಗಕ್ಕಾಗಿ ನಾವಿಬ್ಬರು ಜಗಳವಾಡುತ್ತಿದ್ದೆವು. ಮತ್ತೆ ಸರಿ ಹೋಗಿ ಆ ಓಣಿಯಲ್ಲಿಯೇ ಓಡಾಡಿಕೊಂಡಿದ್ದೆವು. ಊರಿನ ಕೆಲವರ ಮಾತು ಕೇಳಿಕೊಂಡ ಮಂಜುನಾಥ್ ನನ್ನ ವಿರುದ್ಧ ಕ್ಯಾಸಂಬಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದರು. ಪೊಲೀಸರು ನನ್ನನ್ನು ಠಾಣೆಗೆ ಕರೆಸಿ ಓಣಿಯು ಸಾರ್ವಜನಿಕ ಸ್ವತ್ತು ಅದಕ್ಕೆ ಇಬ್ಬರು ಓಡಾಡಿಕೊಂಡಿರಬೇಕು. ಏನಾದರು ಮಂಜುನಾಥನ ವಿರುದ್ಧ ತಗಾದೆ ತೆಗೆದರೆ ಕಾನೂನು ಕ್ರಮ ಜರುಗಿಸಬೇಕಾಗುವುದೆಂದು ಎಚ್ಚರಿಕೆ ಕೊಟ್ಟು ಕಳುಹಿಸಿದರು. ಠಾಣೆಗೆ ಹೋಗಿ ಬಂದ ನಂತರ ಮಂಜುನಾಥನು ಓಣಿಯಲ್ಲಿ ಓಡಾಡುತ್ತಾ ನನ್ನ ಮುಂದೆ ಬಿಗುತ್ತಿದ್ದನು. ಇದರಿಂದ ನನಗೆ ಅವನ ಮೇಲೆ ದ್ವೇಷ ಬೆಳೆಯುತ್ತಾ ಹೋಯಿತು. ಮಂಜುನಾಥ ಕೆಲಸಕ್ಕೆಂದು ಬೆಂಗಳೂರಿಗೆ ಹೋದರೆ ಒಂದು-ಎರಡು ತಿಂಗಳ ನಂತರ ಹೆಂಡತಿ, ಮಕ್ಕಳನ್ನು ನೋಡಲು ಹೂವರಸನಹಳ್ಳಿಯ ಅವರ ಹೆಂಡತಿ ತವರುಮನೆಗೆ ಬಂದು ಎರಡು ದಿನ ಇದ್ದು ನಂತರ ಕಣ್ಣೂರಿನಲ್ಲಿರುವ ಅವರ ಹಳೇಯ ಮನೆಗೆ ಬಂದು ಇಲ್ಲಿಯೂ ಎರಡು ದಿನಗಳ ಕಾಲ ಇದ್ದು ನಂತರ ಬೆಂಗಳೂರಿಗೆ ಹೊರಟು ಬಿಡುತ್ತಿದ್ದನು. ಅವರು ಈ ಮನೆಗೆ ಬರುವವರೆಗೂ ಓಣಿಯನ್ನು ನಾನೊಬ್ಬನೆ ಉಪಯೋಗಿಸಿಕೊಳ್ಳುತ್ತಿದ್ದೆನು. ಕಳೆದ ಒಂದು ತಿಂಗಳ ಹಿಂದೆ ಮಂಜುನಾಥ ಕಣ್ಣೂರಿಗೆ ಬಂದಿದ್ದಾಗ ಓಣಿ ಜಾಗದಲ್ಲಿ ನನಗೆ ಸೇರಿದ ವಸ್ತುಗಳನ್ನು ಇಟ್ಟಿದ್ದೆನು. ಅದಕ್ಕೆ ನನ್ನ ಮೇಲೆ ಜಗಳ ತೆಗೆದು ವಸ್ತುಗಳನ್ನು ತೆಗೆಯುವಂತೆ ಹೇಳಿದನು. ಆಗ ಗ್ರಾಮದ ಕೆಲವರು ಬಂದು ಜಗಳ ಬಿಡಿಸಿದರು.

ಫೆಬ್ರವರಿ 17ರಂದು ರಾತ್ರಿ 8 ಗಂಟೆ ಸಮಯದಲ್ಲಿ ನಮ್ಮ ಮನೆಯ ಓಣಿಯಲ್ಲಿ ಕುಳಿತಿದ್ದಾಗ ಅದೇ ಸಮಯಕ್ಕೆ ಮಂಜುನಾಥನು ಊರಿನಿಂದ ಬಂದವನು ನಮ್ಮನ್ನು ನೋಡಿ ಏನು ಮಾತನಾಡದೆ ಮನೆ ಬಳಿಗೆ ಹೋಗಿ ನೋಡಲಾಗಿ ಮನೆ ಮುಂದೆ ಮತ್ತು ಬಾಗಿಲ ಮುಂದೆಯೇ ಸೌದೆ ಸೇರಿದಂತೆ ಹಲವು ವಸ್ತುಗಳನ್ನು ಇಟ್ಟಿದ್ದು ಕೋಪಗೊಂಡ ಮಂಜುನಾಥ ನಮ್ಮ ಮನೆ ಮುಂದೆ ಯಾರು ಈ ವಸ್ತುಗಳನ್ನು ಇಟ್ಟಿದ್ದು ಮನೆ ಒಳಕ್ಕೆ ಹೋಗೋದಾದ್ರು ಹೇಗೆ ಬೇಗ ತೆಗೆಯಿರಿ ಎಂದು ಹೇಳಿದನು. ಆಗ ನಾನು ಅವನ ಮುಂದೆ ಬಂದು ನಿಂತುಕೊಂಡು ಈಗ ತೆಗೆಯುವುದಕ್ಕೆ ಆಗುವುದಿಲ್ಲ ನಿನ್ನ ಕೈಯಲ್ಲಿ ಏನಾಗುವುದೋ ಮಾಡಿಕೋ ಎಂದು ಹೇಳಿದಕ್ಕೆ ಅವನು ಮೊಬೈಲ್ ಫೋನ್ ತೆಗೆದುಕೊಂಡು ಯಾರಿಗೋ ಫೋನ್ ಮಾಡಿ ಮನೆಯ ಮುಂದೆ ಇದ್ದ ವಸ್ತುಗಳನ್ನು ಓಣಿಗೆ ತಳ್ಳಿದನು. ಇದರಿಂದ ಕೋಪ ಬಂದು ಅಲ್ಲಿಯೇ ಇದ್ದ ಕಬ್ಬಿಣದ ಹಾರೆಯನ್ನು ತೆಗೆದುಕೊಂಡು ಮಂಜುನಾಥನ ತಲೆಗೆ ಬಲವಾಗಿ ಹೊಡೆದೆನು. ಆಗ ರಾಜೇಶ್ ಸಹ ಒಂದು ದೊಣ್ಣೆಯನ್ನು ತೆಗೆದುಕೊಂಡು ಬಂದು ತಲೆ ಮತ್ತು ಕೈಕಾಲುಗಳ ಮೇಲೆ ಹೊಡೆದನು. ತಕ್ಷಣ ಮಂಜುನಾಥ ನೋವಿನಿಂದ ಚೀರುತ್ತಾ ಕೆಳಗೆ ಬಿದ್ದು ಒದ್ದಾಡುತ್ತಿದ್ದನು. ಆಗ ನಾವಿಬ್ಬರು ಅಲ್ಲಿಂದ ಪರಾರಿಯಾಗಿ ರಾತ್ರಿ ತಲೆಮರೆಸಿಕೊಂಡಿದ್ದೆವು. ನಂತರ ಆಂಧ್ರ ಅಥವಾ ತಮಿಳುನಾಡಿನ ಕಡೆಗೆ ಹೋಗಲು ಕೆಜಿಎಫ್‌ನಲ್ಲಿ ಬಸ್ಸಿಗಾಗಿ ಕಾದಿದ್ದಾಗ ಸಿಕ್ಕಿಬಿದ್ದ ಬಗ್ಗೆ ಹೇಳಿದನು.


ತನಿಖಾ ಸಹಾಯಕ ಬಿ. ಮಹೇಂದ್ರ

ಪೊಲೀಸರು ರಾಜೇಶ್‌ನಿಂದ ಹೇಳಿಕೆ ಪಡೆದ ಮೇಲೆ ಇಬ್ಬರನ್ನು ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳ ಪರಿಶೀಲಿಸಿದ ಮೇಲೆ ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ್ದ ಹಾರೆ ಮತ್ತು ದೊಣ್ಣೆಯನ್ನು ತೆಗೆದುಕೊಟ್ಟಿದ್ದು ಅವರಿಂದ ವಶಕ್ಕೆ ಪಡೆದ ಮೇಲೆ ಇಬ್ಬರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಒಟ್ಟಾರೆ ಮನೆ ಮುಂದಿನ ಸಣ್ಣ ಓಣಿ ಜಾಗದ ವಿಚಾರ ಇಲ್ಲಿ ವ್ಯಕ್ತಿಯೊಬ್ಬನ ಸಾವಿಗೆ ದಾರಿ ಮಾಡಿಕೊಟ್ಟಿದೆ. ವಿಷಯ ಸಣ್ಣದ್ದೇ ಆದರೂ ಇಲ್ಲಿ ದ್ವೇಷ ದೊಳೆದು ನಿಂತಿತ್ತು. ಹಾಗಾಗಿ ಕುಡಿದ ಮತ್ತಿನಲ್ಲಿ ನಡೆದ ಹೀನಕೃತ್ಯದಿಂದ ಎರಡು ಮನೆಗಿದ್ದ ಓಣಿಯ ಸಮಸ್ಯೆ ಬಗೆಹರಿಯುವ ಬದಲು ಒಬ್ಬ ಸಾವಿನ ದಾರಿ ಹಿಡಿದರೆ ಮತ್ತಿಬ್ಬರು ಜೈಲಿನ ದಾರಿ ಹಿಡಿಯುವಂತಾಯಿತು.


ಶವಗಾರದ ಮುಂದೆ ಸೇರಿರುವ ಸಂಬಂಧಿಕರು

# ಹವಾ ಕೊಡಲು ಹೋಗಿ ಅಂದರ್!

ಇನ್ಮುಂದೆ ನಮ್ದೇ ಹವಾ ಎಂದು ಬಿಂಬಿಸಲು ಹೋಗಿ, ಅದು ಪೊಲೀಸರ ಕಣ್ಣಿಗೆ ಬಿದ್ದು ಆರೋಪಿಗಳಾಗಿ, ಜೈಲು ಸೇರುವ ಹಂತಕ್ಕೆ ಇಬ್ಬರು ಬಿಗ್‌ಬಾಸ್ ಸ್ಪರ್ಧಿಗಳು ಮೈಮೇಲೆ ಎಳೆದುಕೊಂಡಿದ್ದಾರೆ.



ಈ ಬಾರಿಯ ಬಿಗ್ ಬಾಸ್ ಸ್ಪರ್ಧಿ ರಜತ್ ಹಾಗೂ ಈ ಹಿಂದೆ ಬಿಗ್‌ಬಾಸ್‌ನಲ್ಲಿ ಕಾಣಿಸಿಕೊಂಡಿದ್ದ ವಿನಯ್ ಹಾಗೆ ಪೊಲೀಸ್ ಸುಪರ್ದಿಗೆ ಬಂದಿರುವವರು. ಈಚಿನ ಎಲ್ಲಾ ಸಿನಿಮಾ ಪಾರ್ಟಿಗಳಿಗೆ ನಿಗಿ ನಿಗಿ ಅಂತ ಎಂಟ್ರಿ ಹಾಕುತ್ತಿದ್ದ ಇವರು ಮೈತುಂಬಾ ಟ್ಯಾಟೂ ಹಾಕಿಸಿಕೊಂಡು ಗಮನ ಸೆಳೆದಿದ್ದವರು. ಕೆಲ ದಿನಗಳ ಹಿಂದೆ ರಜತ್ ಹುಟ್ಟುಹಬ್ಬ ಇದ್ದಾಗ ಬಿಗ್ ಬಾಸ್ ನೆನಪಿನಲ್ಲಿ ಕಳೆದು ಹೋದವರೂ ಇದ್ದರು. ಮುಖ್ಯವಾಗಿ ವಿನಯ್ ಹಾಗೂ ರಜತ್ ಪರಮ ಸ್ನೇಹಿತರು. ಸಿನಿಮಾಗಳಲ್ಲಿ ದೊಡ್ಡ ಅವಕಾಶಕ್ಕಾಗಿ ಕಾಯುತ್ತಿದ್ದವರು ಕೂಡಾ. ಸಿನಿಮಾದವರು ಗಮನಿಸಲಿ ಎಂದು ಕೆಲ ದಿನಗಳ ಹಿಂದೆ ಬಸವೇಶ್ವರ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಬ್ಬರೂ ಜಂಟಿಯಾಗಿ ಒಂದು ಶೋ ಕೊಟ್ಟರು. ಇದಕ್ಕಾಗಿಯೇ ಒಂದೇ ರೀತಿಯ ಕಾಸ್ಟೂಮ್ಸ್ ಹೊಲಿಸಿಕೊಂಡು ಲಾಂಗ್ ಝಳಪಿಸುತ್ತಾ ಸ್ಟೆಪ್ ಹಾಕಿದ್ದರು. ಅದು ಯಾರ ಗಮನಕ್ಕೂ ಬರದೆ ನಡೆದು ಹೋಗಿದ್ದರೆ ಏನೂ ಆಗುತ್ತಿರಲಿಲ್ಲ, ಲೈಕ್‌ಗಾಗಿ ತಮ್ಮ ಲಾಂಗ್ ಹವಾವನ್ನು ಸೋಷಿಯಲ್ ಮೀಡಿಯಾಗೆ ಅಪ್‌ಲೋಡ್ ಮಾಡಿದರು. ಇದನ್ನು ವೀಕ್ಷಿಸಿದ ಒಂದಷ್ಟು ಮಂದಿ ಪೋಲೀಸರ ಗಮನಕ್ಕೂ ತಂದರು. ಯಾವಾಗ ಒತ್ತಡಗಳು ಪೊಲೀಸರಿಗೆ ಬರತೊಡಗಿತೋ ಅವರು ವಿನಯ್ ಮತ್ತು ರಜತ್‌ಗೆ ಸ್ಟೇಷನ್ನಿಗೆ ಬರುವಂತೆ ನೊಟೀಸ್ ಕೊಟ್ಟರು. ಆದರೆ ಇಬ್ಬರೂ ಸ್ಟೇಷನ್ ಮೆಟ್ಟಲು ಹತ್ತಲಿಲ್ಲ, ಈಗ ಪೋಲೀಸರು ಖಡಕ್ಕಾಗಿ ಇಬ್ಬರನ್ನೂ ಎತ್ತಾಕಿಕೊಂಡು ಹೋಗಿದ್ದಾರೆ. ರಜತ್ ಹಾಗೂ ವಿನಯ್ ಮಾಡಿದ ಶೋವನ್ನು ಹುಡುಗಾಟ ಅಂತ ಪೊಲೀಸರು ಭಾವಿಸಿದರೆ ಎಚ್ಚರಿಕೆ ಕೊಟ್ಟು ಕಳುಹಿಸಬಹುದು, ಗಂಭೀರ ಅಂತ ಭಾವಿಸಿದರೆ ಇಬ್ಬರನ್ನೂ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಿ ಜೈಲಿಗೂ ಕಳುಹಿಸಲೂಬಹುದು. ಒಟ್ಟಿನಲ್ಲಿ ಬಿಗ್‌ಬಾಸ್‌ನಲ್ಲಿ ಕಾಣಿಸಿಕೊಂಡಿದ್ದವರು ಸಮಸ್ಯೆ ತಗುಲಿಸಿಕೊಂಡು ಆರೋಪಿಗಳಾಗಿದ್ದಾರೆ. ಜನಪ್ರಿಯತೆಯ ಅಮಲು ಮತ್ತು ಭ್ರಮೆ ಏನೇನೋ ಮಾಡಿಬಿಡುತ್ತೆ ಎಂಬುದಕ್ಕೆ ಬೇಕಾದಷ್ಟು ಉದಾಹರಣೆಗಳು ಇವೆ.

ಕಿಟ್ಟಿ ಎನ್ನುವ ತರುಣ ಮೈಸೂರಿನಲ್ಲಿ ಗಾಡಿಯಲ್ಲಿ ತರಕಾರಿ ಮಾರಿಕೊಂಡಿದ್ದ. ಆತನೂ ಅದೊಂದು ಕಾಲದಲ್ಲಿ ಬಿಗ್‌ಬಾಸ್‌ನಲ್ಲಿದ್ದ. ಬಿಗ್‌ಬಾಸ್‌ನಿಂದ ಬಂದನಂತರ ಆತನ ದಿನಚರಿಯೇ ಬದಲಾಗಿಹೋಗಿತ್ತು. ತರಕಾರಿ ಮಾರುವುದನ್ನು ಬಿಟ್ಟ ಲೇವಾದೇವಿ ಮಾಡಲು ಶುರುಮಾಡಿದ. ಬಡ್ಡಿ ತಲುಪದಿದ್ದಾಗ ಸಾಲಗಾರರನ್ನು ಕಿಡ್ನಾಪ್ ಮಾಡುವ ಹಂತಕ್ಕೂ ಬಂದುಬಿಟ್ಟ. ಇದೆಲ್ಲಾ ಪೊಲೀಸ್ ಕೇಸ್ ಆಯಿತು. ಗಂಭೀರ ಆರೋಪದಲ್ಲಿ ಪೊಲೀಸರು ಕಿಟ್ಟಿಯನ್ನು ಜೈಲಿಗೂ ಕರೆತಂದುಬಿಟ್ಟರು. ಆದರೆ ಸಿನಿಮಾದವರು ಇಂಥವರನ್ನೇ ಹುಡುಕುವುದು. ಆತ ಅಭಿನಯಿಸಿರುವ ಕೋರ ಎನ್ನುವ ಚಿತ್ರ ಇನ್ನೇನು ಬಿಡುಗಡೆ ಕಾಣುವ ಹಂತಕ್ಕೆ ಬಂದಿದೆ.

ರ್‍ಯಾಪರ್ ಚಂದನ್ ಶೆಟ್ಟಿ ಹಾಗೂ ನಿವೇದಿತಾಗೌಡ ಇಬ್ಬರೂ ಬಿಗ್‌ಬಾಸ್‌ನಲ್ಲಿ ಇದ್ದು ಬಂದವರು. ಚಂದನ್ ಬಿಗ್‌ಬಾಸ್‌ನಲ್ಲಿ ಗೆದ್ದಿದ್ದೂ ಆಯಿತು. ಅಲ್ಲಿಂದ ಚಂದನ್ ಹಾಗೂ ನಿವೇದಿತಾ ನಡುವೆ ಪ್ರೇಮ ಆರಂಭ. ಮಲೆನಾಡಿನ ಹುಡುಗ ಚಂದನ್ ಹಾಗೂ ಬಯಲುಸೀಮೆಯ ನಿವೇದಿತಾ ಮದುವೆನೂ ಆದರು.



ಅದೊಂದು ರಿಯಾಲಿಟಿ ಶೋನಲ್ಲಿ ಚಂದನ್ ನಿವೇದಿತಾ ಮೇಲೆ ಪ್ರೇಮಕಾವ್ಯ ಬರೆದು, ಅದನ್ನು ತನ್ನ ಸ್ವರದಲ್ಲಿ ನಿವೇದಿಸಿಕೊಂಡಿದ್ದೂ ಉಂಟು. ಇದೆಲ್ಲಾ ಎಷ್ಟರಮಟ್ಟಿಗೆ ಜನಪ್ರಿಯತೆ ಪಡೆಯಿತು ಎಂದರೆ ದಂಪತಿಗಳೆಂದರೆ ಹೀಗಿರಬೇಕು ಎನ್ನುವ ಮಾತುಗಳೂ ಹರಡಿದ್ದಾಯಿತು. ಬದುಕಿನ ಅಮಲನ್ನು ಕ್ರಮೇಣ ಬಿಟ್ಟ ಈ ಜೋಡಿ ಈಗ ಡೈವೋರ್ಸ್ ಪಡೆದಿದ್ದಾರೆ.

ರಾಜೇಶ್ ಎನ್ನುವ ಎಚ್.ಡಿ. ಕೋಟೆ ಹಾಡಿಯ ಅಮಾಯಕ ಹುಡುಗ. ಪ್ಯಾಟಿ ಹುಡುಗೀರ ರಿಯಾಲಿಟಿ ಶೋನಲ್ಲಿ ಕಾಣಿಸಿಕೊಂಡಿದ್ದ. ಆತನ ಅಮಾಯಕತೆ ಇಲ್ಲಿ ಜನಪ್ರಿಯತೆ ತಂದುಕೊಟ್ಟಿತ್ತು. ಮೈಸೂರನ್ನೇ ನೋಡದ ಇವನ ಮೇಲೂ ಸಿನಿಮಾದವರ ಕಣ್ಣು ಬಿತ್ತು. ಲವ್ ಈಸ್ ಬ್ಯೂಟಿಫುಲ್ ಎನ್ನುವ ಸಿನಿಮಾದಲ್ಲೂ ರಾಜೇಶ್ ಅಭಿನಯಿಸಿದ. ಜನಪ್ರಿಯತೆಯ ಅಮಲು, ಹಾಡಿಯ ನೆನಪು ಆತನನ್ನು ನಿರಂತರ ಕಾಡತೊಡಗಿತು. ಮೈಸೂರಿನಲ್ಲಿ ಮನೆ ಮಾಡಿದ. ಗೊಂದಲಕ್ಕೆ ಬಿದ್ದ. ಅದೊಂದು ದಿನ ಮಹಡಿಯಿಂದ ಇಚ್ಛೆಪಟ್ಟು ಆತ್ಮಹತ್ಯೆ ಮಾಡಿಕೊಂಡ. ಅಲ್ಲಿಗೆ ಅಮಾಯಕನ ಬದುಕು ಮುಗಿಯಿತು, ಆತನ ತಾಯಿ ಮತ್ತೆ ಹಾಡಿಗೆ ಹಿಂತಿರುಗಿದರು.

ಇದೂ ಕೂಡಾ ಜನಪ್ರಿಯತೆಯ ಅಮಲಿನ ದುರಂತ ಬದುಕು.

ಬಿಗ್‌ಬಾಸ್‌ಗೆ ಎಂಟ್ರಿಹಾಕಿದ ಹೆಚ್ಚಿನ ಯುವತಿಯರು ಸಿನಿಮಾ ಕನಸನ್ನು ಇಟ್ಟುಕೊಂಡವರು. ಅವರನ್ನು ಆಕರ್ಷಿಸಿಕೊಳ್ಳಲು ಸೆಲೆಬ್ರಿಟಿ ಫಂಕ್ಷನ್‌ಗಳಿಗೆ ಬರುವುದುಂಟು. ಅವರ ವೇಷ ಜನಪ್ರಿಯ ನಟಿಯರನ್ನೂ ಮೀರಿಸಿಕೊಂಡು ಹೋಗುತ್ತದೆ; ಇದು ಈಚಿನ ಚಿತ್ರಜಗತ್ತಿನ ಆಗು ಹೋಗುಗಳು.

6 ☞

ಗಾಬರಿಯಿಂದ ''ಚಂದನ್ ರೆಡ್ಡಿನಾ... ಒಂದು ದಿನಕ್ಕಿಂತ ಜಾಸ್ತಿ ಸಮಯ ಅವನ ಬಂಧನದಲ್ಲಿ ಇದ್ದೆ ನಿಜ ತಾನೆ?''

ಪದ್ಮಿನಿ ತಲೆಯಾಡಿಸಿದಳು.

''ಅಂದರೆ... ಅಂದರೆ... ಅವನು ನಿನ್ನ ಮೇಲೆ ಅತ್ಯಾಚಾರ ಮಾಡಿದ್ದಾನೆ ಅಲ್ವ?

ಅಣ್ಣಶ್ರೀಕಾಂತ ''ತುಂಬಾ ದಿನಗಳಿಂದ ಅವನಿಗೆ ನಿನ್ನ ಮೇಲೆ ಆಸೆ ಇತ್ತು. ಅಂದ ಮೇಲೆ ನಿನ್ನನ್ನು... ಛೇ... ಛೇ...' ಎಂದು ಕೋಪದಿಂದ ಚಡಪಡಿಸಿದನು.

ಅವಳು ಗಡುಸಾಗಿ ''ಅವನು ಅತ್ಯಾಚಾರ ಮಾಡಲಿಲ್ಲ. ನಾನಿನ್ನೂ ಶೀಲವತಿಯಾಗಿದ್ದೇನೆ'' ಎಂದಳು.

ತಂದೆ ನೇತ್ರಾವತಿ ''ಹೇಗಮ್ಮ ನಂಬಲು ಸಾಧ್ಯ ? ಆರು ತಿಂಗಳಿನಿಂದ ನಿನಗಾಗಿ ಹಂಬಲಸುತ್ತಿದ್ದವನು ಈ ಅವಕಾಶ ಬಿಡಲು ಹೇಗೆ ಸಾಧ್ಯ ?''

ತಂಗಿ ಪಲ್ಲವಿ ''ನಿಜ ಹೇಳು ಅಕ್ಕ...'' ಕೂಡಲೇ ಪದ್ಮಿನಿ ಪಾರಿಜಾತ, ಸೀರೆ ಸೆರಗು ಸರಿಸಿ, ಮರೆಯಾಗಿದ್ದ ಅದನ್ನು ತೆಗೆದು ಅವರ ಮುಂದೆ ಹಿಡಿದಳು. ಎಲ್ಲರೂ ಬೆಚ್ಚಿಬಿದ್ದರು. ಅದು ಮಾಂಗಲ್ಯ ...!

ತಾಯಿ ನೇತ್ರಾವತಿ ಗಾಬರಿಯಿಂದ ''ಅಂದರೆ... ಅವನು ನಿನ್ನನ್ನು ಮದುವೆ ಮಾಡಿಕೊಂಡ್ನ?''

ಅವಳು ಕೋಪ, ಆಕ್ರೋಶದಿಂದ ''ಆ ಹುಚ್ಚ ಆರು ತಿಂಗಳಿನಿಂದ ನನ್ನನ್ನು ಪ್ರೀತಿಸುತ್ತಿದ್ದ ವಿಷಯ ನಿಮಗೆ ಗೊತ್ತಿದೆ. ನನ್ನನ್ನು ಲವ್ ಮಾಡು, ನಾವಿಬ್ಬರು ಮದುವೆ ಆಗೋಣ. ನೀನು ಒಪ್ಪಲೇಬೇಕು ಅಂತ ಕಾಡಿಸುತ್ತಿದ್ದ. ನಾನು ಇದನ್ನ ಹಲವಾರು ಸಲ ನಿಮಗೆ ಹೇಳಿದ್ದೆ. ಆದರೆ ನೀವು ಪೊಲೀಸರಿಗೆ ಹೇಳಲಿಲ್ಲ ಅಥವಾ ಅವನನ್ನು ಎದುರಿಸಿ ಮಾತಾಡಲಿಲ್ಲ. ಅವನೊಬ್ಬ ಮಹಾನ್ ರೌಡಿ ಅಂತ ಹೆದರಿಬಿಟ್ರಿ. ಅವನು ನನ್ನನ್ನು ಮದುವೆ ಮಾಡಿಕೊಂಡ. ಆ ಆಸೆ ತೀರಿಸಿಕೊಂಡ'' ಎಂದಳು.

ಅವಳು ಅಳುತ್ತಿದ್ದಾಳೆ. ಕಂಬನಿ ಜಾರುತ್ತಿದೆ. ಕಂಬನಿ ಕಣ್ಣುಗಳನ್ನು ಆಕ್ರೋಶ ಇದೆ. ತಮ್ಮ ಚಂದ್ರಕಾಂತ ಮದುವೆ ಮಾಡಿಕೊಂಡ ಮೇಲೆ ನಿನ್ನ ಜೊತೆ ಮೊದಲ ರಾತ್ರಿ ಅಂತ...'' ಎಂದು ರಾಗ ಎಳೆದನು.

ಅವಳು ಕೋಪದಿಂದ ''ನಾನು ಶೀಲ ಕಳೆದುಕೊಂಡಿದ್ದೇನೆ ಅಂತ ಅನುಮಾನ ಅಲ್ವ? ಆ ಹುಚ್ಚ ಮದುವೆ ಮಾಡಿಕೊಂಡ ಮೇಲೆ ಬೇಡಿಕೊಂಡ. ಅವನ ಆಸೆ ಏನು ಗೊತ್ತೆ ? ನಾನು ಹೆಂಡತಿಯಂತೆ ಸಂತೋಷದಿಂದ ಸಹಕರಿಸುತ್ತಾ ಸುಖ ಕೊಡಬೇಕು ಅಂತ ಅವನು ಬೇಡಿಕೊಂಡ. ನಾನು ಅತ್ತು ರಂಪ ಮಾಡಿ ಜಗಳ ಆಡಿದೆ. ಅವನು ಬೇಡಿಕೊಳ್ಳುತ್ತಿದ್ದನೇ ವಿನಹ ಅತ್ಯಾಚಾರ ಮಾಡಲಿಲ್ಲ.''

ಆಶ್ಚರ್ಯ... ಪರಮಾಶ್ಚರ್ಯ... ನಂಬಿಕೆ ಬರುತ್ತಿಲ್ಲ. ಇಂತಹ ಹುಚ್ಚರು ಇರುತ್ತಾರ?

ತಂಗಿ ಪಲ್ಲವಿ ''ಅದು ಸರಿ ಅಕ್ಕ... ನೀನು ಅಲ್ಲಿಂದ ಹೇಗೆ ಕಲ್ಪಿಸಿಕೊಂಡು ಬಂದೆ?''

ಅವಳು ನಿಟ್ಟುಸಿರುಬಿಡುತ್ತಾ ''ಮಾಂಗಲ್ಯ ಕಟ್ಟಿದ ಮೇಲೆ ಹಲವಾರು ಗಂಟೆಗಳ ಕಾಲ ಸತಿಯಾಗಿರುವ ನೀನು ರತಿಯಾಗಿ ಸಂತೋಷದಿಂದ ಸಹಕರಿಸು ಎಂದು ಬೇಡಿಕೊಳ್ಳುತ್ತಿದ್ದ. ಅವನು ಆಗಾಗ ಕುಡಿಯುತ್ತಿದ್ದ. ಅವನಿಗೆ ಕುಡಿತದ ಅಮಲು ಜಾಸ್ತಿ ಆಗಿತ್ತು. ಅವನು ಎದ್ದು ನಿಂತು ತೂರಾಡುತ್ತಾ ಹತ್ತಿರ ಬಂದಾಗ ಅವನನ್ನು ಬಲವಾಗಿ ತಳ್ಳಿ ಅಲ್ಲಿಂದ ತಪ್ಪಿಸಿಕೊಂಡೆ'' ಎಂದು ಹೇಳಿ ಕತ್ತಿನಲ್ಲಿದ್ದ ಆ ರೌಡಿ ಕಟ್ಟಿದ್ದ ಮಾಂಗಲ್ಯವನ್ನು ಕಿತ್ತು ಎಸೆದಳು. ತಾಯಿ ಅದನ್ನು ಬೇರೆಯವರಿಗೆ ಕಾಣದ ರೀತಿ ಸಾಗಿಸಿದಳು.

ಅಣ್ಣ'ನಿನಗೆ ಕಾರಲ್ಲಿ ಪ್ರಜ್ಞೆತಪ್ಪಿಸಿದವರು ಯಾರು?'' ಎಂದು ಕೇಳಿದನು.

ಪದ್ಮಿನಿ ಮುಖ ಬಿರುಸಾಯಿತು.

ಹಲ್ಲುಕಡಿಯುತ್ತಿದ್ದಾಳೆ.

''ಅವಳೇ... ಅವಳೇ ಆ ನಂಬಿಕೆ ದ್ರೋಹಿ, ವಂಚಕಿ ಗೆಳತಿ ಪ್ರಿಯಾಂಕ'' ಎಂದು ಆ ಪ್ರಕರಣದ ಬಗ್ಗೆ ಹೇಳಿದ ನಂತರ ''ಚಂದನ್ ರೌಡಿಗೆ ಹೆದರಿ ಅಥವಾ ಅವನು ಕೊಟ್ಟಿದ್ದ ಹಣದ ಆಸೆಯಿಂದ ಈ ಕೆಲಸ ಮಾಡಿರಬಹುದು'' ಎಂದಳು.

ತಮ್ಮ ಚಂದ್ರಕಾಂತ ಕೋಪದಿಂದ ಅಬ್ಬರಿಸುತ್ತಾ 'ಬೆಳಗಾದ ಕೂಡಲೇ ಅವಳ ಮನೆಗೆ ಹೋಗಿ ಕೆನ್ನೆ ಹೊಡೆದು ಬುದ್ಧಿ ಕಲಿಸುತ್ತೀನಿ'' ಎಂದು ಕೂಗಾಡಿದನು.

ಪದ್ಮಿನಿ ಪಾರಿಜಾತ ''ಏ... ಚಂದ್ರ... ನೀನು ರಂಪ ಮಾಡಿ ಗುಟ್ಟಾಗಿರೋದನ್ನ ಬಹಿರಂಗ ಮಾಡ್ಬೇಡ. ಅವಳಿಗೆ ಸೈಲೆಂಟ್ ಆಗಿ ಯಾವ ರೀತಿ ಟಾರ್ಚರ್ ಕೊಡಬೇಕು ಅಂತ ನನಗೆ ಗೊತ್ತಿದೆ. ಈ ವಿಷಯ ನಮ್ಮ ಸಂಬಂಧಿಕರಿಗೆ ತಿಳಿಯಬಾರದು.''

ತಂದೆ ''ಈಗ ಬೇರೊಂದು ಸಮಸ್ಯೆ ಎದುರಾಗಲಿದೆ'' ಎಂದರು.

ಎಲ್ಲರೂ ಗಾಬರಿಯಾದರು.

''ಏನು... ಏನದು?''

''ಬೆಳಗಾದ ಕೂಡಲೇ ಆ ರೌಡಿ ಮನೆಯ ಹತ್ತಿರ ಬಂದು ಪದ್ಮಿನಿ ನನ್ನ ಹೆಂಡತಿ ಅಂತ ರಂಪ ಮಾಡಿದರೇನು ಗತಿ?''

ತಂಗಿ ಪಲ್ಲವಿ ''ಅಕ್ಕ... ನಿನಗೆ ಮಾಂಗಲ್ಯ ಕಟ್ಟುತ್ತಿರೋದಿಕ್ಕೆ ಸಾಕ್ಷಿ ಇರುವುದೆ? ಅಂದರೆ ವೀಡಿಯೋ ಕವರೇಜ್ ಅಥವಾ ಫೋಟೋಗಳ ಸಾಕ್ಷಿ ಇರುವುದೆ?'' ಎಂದಳು.

''ಇಲ್ಲ... ಅದೆಲ್ಲಾ ಏನೂ ಇಲ್ಲ.''

''ನಿನಗೆ ಖಚಿತವಾಗಿ ಗೊತ್ತಿದೆ ತಾನೆ?''

''ಶ್ಯೂರ್... ನನಗೆ ಚೆನ್ನಾಗಿ ಗೊತ್ತಿದೆ.''

ಅಣ್ಣಮತ್ತುತಮ್ಮ ''ಆ ರೌಡಿ ನಾಳೆ ಬಂದು ಏನಾದರೂ ಗಲಾಟೆ ಮಾಡಿದರೆ ಪೊಲೀಸರಿಗೆ ಕಂಪ್ಲೆಂಟ್ ಕೊಡೋಣ'' ಎಂದರು.

ಆ ರಾತ್ರಿ ಕಳೆಯಿತು.

●●●

ಬೆಳಗಿನ ಎಂಟು ಗಂಟೆ.

ಎಲ್ಲರೂ ಎದ್ದು ನಿತ್ಯಕರ್ಮಗಳನ್ನು ಮಾಡುತ್ತಿದ್ದಾರೆ. ಆಗ ಕೇಳಿ ಬಂದಿತು ಪೊಲೀಸ್ ಸೈರನ್! ಈಗ ಆ ಜೀಪು ಇವರ ಮನೆಯ ಮುಂದೆ ಬಂದು ನಿಂತುಕೊಂಡಿತು.

ನೆರೆಹೊರೆಯ ಜನಗಳು.

ರಸ್ತೆಯಲ್ಲಿ ತಿರುಗುತ್ತಿರುವವರು.

ಆ ಬೀದಿಯ ವ್ಯಾಪಾರಿಗಳು ಈಗ ಕುತೂಹಲದಿಂದ ಈ ಮನೆ ಕಡೆ ಬರುತ್ತಿದ್ದಾರೆ. ಪೊಲೀಸರು ವಾಹನದಿಂದ ಇಳಿದು ಈಗ ಇವಳ ಮನೆಯ ಒಳಗೆ ಪ್ರವೇಶಿಸುತ್ತಿರುವಾಗಲೇ ಜನಗಳು ಗುಂಪುಗೂಡಿದರು. ಎಲ್ಲರೂ ಗಾಬರಿಯಾದರು!

ಚಂದನ್‌ರೆಡ್ಡಿ ಬಂದಿಲ್ಲ. ಅವನು ಪೊಲೀಸರಿಗೆ ಕಂಪ್ಲೆಂಟ್ ಕೊಟ್ಟಿದ್ದಾನೆ. ಮದುವೆ ಆಗಿರೋದಿಕ್ಕೆ ಸಾಕ್ಷಿ, ಆಧಾರ ಇಲ್ಲ. ಹಾಗಾಗಿ ಭಯ ಪಡುವ ಅಗತ್ಯ ಇಲ್ಲ ಎಂದುಕೊಂಡರು.

ಪೊಲೀಸ್ ಅಧಿಕಾರಿ ಶ್ರೀಶೈಲನ್ ಹತ್ತಿರ ಬಂದು ಗಡುಸಾಗಿ ''ಪದ್ಮಿನಿ ಪಾರಿಜಾತ ಎಲ್ಲಿ'' ಎಂದು ಕೇಳಿದರು.

ಅವಳು ಆಗ ತಾನೇ ಸ್ನಾನ ಮುಗಿಸಿ ರೂಮಿನಿಂದ ಹೊರಗೆ ಬಂದಳು.

ಅಣ್ಣ ಗಾಬರಿಯಿಂದ ''ಸಾರ್... ನಾವೇ ಕಂಪ್ಲೆಂಟ್ ಕೊಡಬೇಕು ಅಂತ ಅಂದುಕೊಂಡಿದ್ದೆವು'' ಎಂದನು.

''ಕಂಪ್ಲೆಂಟ್ ಯಾರ ಬಗ್ಗೆ?''

''ಚಂದನ್ ರೆಡ್ಡಿ ಬಗ್ಗೆ.''

ಪೊಲೀಸ್ ಅಧಿಕಾರಿ ಕೋಪದಿಂದ ''ಎಲ್ಲಾ ಸೇರಿ ಪೊಲೀಸರನ್ನ ಕಂಡ ಕೂಡಲೇ ನಾಟಕ ಆಡುತ್ತಿದ್ದೀರ? ಸತ್ತಿರುವ ವ್ಯಕ್ತಿಯ ಬಗ್ಗೆ ಕಂಪ್ಲೆಂಟ್ ಕೊಡ್ತೀರ?''

ಎಲ್ಲರೂ ಬೆಚ್ಚಿಬಿದ್ದರು.

ಪದ್ಮಿನಿ ನಡುಗಿಬಿಟ್ಟಳು.

ಮುಖ ಭಯದಿಂದ ಬಿಳುಚಿಕೊಂಡಿದೆ. ಪೊಲೀಸ್ ಅಧಿಕಾರಿ ಪದ್ಮಿನಿಯ ಹತ್ತಿರ ಬಂದು ''ಚಂದನ್‌ರೆಡ್ಡಿಯ ಕೊಲೆ ಮಾಡಿದ್ದೀಯ ಅನ್ನೋದಿಕ್ಕೆ ಸಾಕ್ಷಿ, ಆಧಾರ ಇದೆ. ಯೂ ಆರ್ ಅಂಡರ್ ಅರೆಸ್ಟ್'' ಎಂದು ಲೇಡಿ ಕಾನ್‌ಸ್ಟೇಬಲ್‌ಗಳ ಕಡೆ ನೋಡಿದನು.

ಮನೆಯವರು ಭಯ, ಗಾಬರಿಯಿಂದ ಮಾತಾಡುತ್ತಿದ್ದಾರೆ. ಆದರೆ ಪದ್ಮಿನಿಯನ್ನು ಅರೆಸ್ಟ್ ಮಾಡಿ ಹೊರಗೆ ನಿಂತಿರುವ ಜೀಬಿನ ಹತ್ತಿರ ಕರೆದುಕೊಂಡು ಹೋಗುತ್ತಿದ್ದಾರೆ. ಆ ಬಡಾವಣೆಯ ಜನಗಳಿಗೆ ಪೂರ್ತಿ ವಿಷಯ ತಿಳಿದಿಲ್ಲ. ಭಯಮಿಶ್ರಿತ ಕುತೂಹಲದಿಂದ ನೋಡುತ್ತಿದ್ದಾರೆ. ಮನೆಯವರೆಲ್ಲಾ ಗಾಬರಿ, ಉದ್ವೇಗ, ಭಯದಿಂದ ಆ ಜೀಪಿನ ಹತ್ತಿರ ಬರುತ್ತಿದ್ದಾರೆ. ಜೀಪು ವೇಗವಾಗಿ ಹೋಗುತ್ತಿದೆ.

ಸೈರನ್ ಮೊಳಗುತ್ತಿದೆ.

●●●

ಗೆಜ್ಜಗಳ್ಳಿ ಗ್ರಾಮ! ಮೈಸೂರಿನಿಂದ ನಂಜನಗೂಡಿಗೆ ಹೋಗುವ ಮಾರ್ಗದಲ್ಲಿ ಈ ಗ್ರಾಮ ಇದೆ. ಅಲ್ಲಿರುವ ನಿರ್ಜನ ಪ್ರದೇಶದ ಮನೆಯ (ಒಂಟಿ ಮನೆ) ಎದುರು ಹಳ್ಳಿಯ ಜನಗಳು ಸೇರಿದ್ದಾರೆ. ಸುದ್ದಿ ಮಧ್ಯಮದವರಿಗೆ ವಿಷಯ ತಿಳಿದ ಕೂಡಲೇ ಕ್ಯಾಮರಗಳೊಂದಿಗೆ ಹಾಜರಾಗಿದ್ದಾರೆ.

ಮನೆಯ ಒಳಭಾಗದ ದೃಶ್ಯ !

ಹಳೆಯ ಕಾಲದ ಮನೆಯನ್ನು ಇತ್ತೀಚೆಗೆ ಈ ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿದ್ದಾರೆ. ಎಲ್ಲಾ ರೀತಿಯ ಅನುಕೂಲಗಳಿವೆ.

ಆ ದೃಶ್ಯ ಕಂಡು ಬರುತ್ತಿದೆ. ಎರಡು ಹೂವಿನ ಹಾರಗಳು ನೆಲದ ಮೇಲೆ ಬಿದ್ದಿದೆ!

ಜೋಡಿ ದೀಪಗಳು ಮತ್ತು ಎರಡು ಮಣೆಗಳ ಮೇಲೆ ಕೆಂಪು ವಸ್ತ್ರ ಹಾಕಲಾಗಿದೆ ಮತ್ತು ಅರಿಶಿನ, ಕುಂಕುಮ ಮುಂತಾದ ಮಂಗಳ ದ್ರವ್ಯಗಳಿರುವ ನಾಲ್ಕು ಸ್ಟೀಲ್ ಬಟ್ಟಲುಗಳನ್ನು ಇಡಲಾಗಿದೆ.

ವಿಶೇಷತೆ ಏನು? ಕಬ್ಬಿಣದಿಂದ ಮಾಡಿರುವ ಹೋಮ ಕುಂಡ ಇದೆ. ಅದರಲ್ಲಿ ಈಗಲೂ ಸಹ ಬೆಂಕಿ ಹೊಗೆಯಾಡುತ್ತಿದೆ. ಅಲ್ಲಲ್ಲಿ ಬೂದಿ ಆವರಿಸಿದೆ.

ಫ್ರಂಟ್ ಹಾಲ್‌ನ ಸ್ವಲ್ಪ ದೂರದಲ್ಲಿರುವ ಟೇಬಲ್ ಇದೆ. ಅದರ ಬಲ ಭಾಗದ ನೆಲದ ಮೇಲೆ ಡೆಡ್‌ಬಾಡಿ ಬಿದ್ದಿದೆ. ಎದೆಭಾಗದಿಂದ ರಕ್ತದ ಕೋಡಿ ಹರಿದು ಹೆಪ್ಪುಕಟ್ಟಿದೆ.

ವಿಚಿತ್ರ ಏನು? ರಕ್ತದ ಕಲೆ ಇರುವ ಹೆಜ್ಜೆ ಗುರುತುಗಳು ಕಂಡು ಬರುತ್ತಿದೆ. ಪೊಲೀಸ್ ಅಧಿಕಾರಿಗೆ ನೋಟ ಮಾತ್ರದಿಂದ ಗೊತ್ತಾಯಿತು.

ಮನುಷ್ಯರ ಹೆಜ್ಜೆ ಗುರುತಲ್ಲ. ಪ್ರಾಣಿಯ ಹೆಜ್ಜೆ ಗುರುತು. ಫಿಂಗರ್ ಪ್ರಿಂಟ್‌ನವರು ಆ ಗುರುತುಗಳನ್ನು ತುಂಬಾ ಸೂಕ್ಷ್ಮವಾಗಿ ಗಮನಿಸಿದರು.

ಅವರ ಅಭಿಪ್ರಾಯ ಏನು?

ಅದು ನಾಯಿ ತಿರುಗಾಡಿರುವ ಮೂಡಿರುವ ಹೆಜ್ಜೆ ಗುರುತು.

ಫ್ರಂಟ್ ಡೋರ್ ಓಪನ್ ಆಗಿತ್ತು. ಆಗ ರಕ್ತ ಕಂಡಿದ್ದರಿಂದ ಡೆಡ್‌ಬಾಡಿ ಹತ್ತಿರ ಬಂದಿದೆ. ಬಹುಶಃ ಆ ನಾಯಿ ರಕ್ತ ನೆಕ್ಕಿರಬೇಕು ಎಂದರು.

ಫೋಟೋಗ್ರಾಫರ್, ಫಿಂಗರ್ ಪ್ರಿಂಟ್‌ನವರು ಮತ್ತು ಡಾಕ್ಟರ್ ತಮ್ಮ ಕೆಲಸ ಮಾಡುತ್ತಿದ್ದಾರೆ.

ಡಾಕ್ಟರ್ ಶವಪರೀಕ್ಷೆ ಮಾಡಿದ ನಂತರ ''ಸಾಯುವ ಮೊದಲು ವಿಪರೀತ ಕುಡಿದಿದ್ದಾನೆ. ಹರಿತವಾದ ಆಯುಧದಿಂದ ತಿವಿದು ಕೊಲೆ ಮಾಡಲಾಗಿದೆ. ಸಾವು ರಾತ್ರಿ ಹತ್ತರಿಂದ ಹನ್ನೊಂದು ಗಂಟೆ ಅವಧಿಯಲ್ಲಿ ಸಂಭವಿಸಿರಬಹುದು. ಸಾವಿಗೆ ಬೇರೆ ಏನಾದರೂ ಕಾರಣ ಇದ್ದರೆ ಪೋಸ್ಟ್‌ಮಾರ್ಟಮ್ ನಂತರ ಗೊತ್ತಾಗುತ್ತದೆ'' ಎಂದರು.

ಶವ ಬಿದ್ದಿರುವ ಜಾಗದಿಂದ ಎಡಭಾಗದಲ್ಲಿರುವ ಮಂಚದ ಅಡಿಯಲ್ಲಿ ಉದ್ದವಾದ ಚಾಕು ಬಿದ್ದಿದೆ. ಈ ಮೊದಲು ಅದನ್ನು ಗಮನಿಸಿರಲಿಲ್ಲ. ಅದರ ಮೇಲೆ ಕರ್ಚಿಫ್ ಹಾಕಿ ಎತ್ತಿಕೊಂಡು ಪರೀಕ್ಷೆ ಮಾಡಿದರು.

ಪೊಲೀಸರಿಗೆ ಸುದ್ದಿ ತಿಳಿದದ್ದು ಬೆಳಗಿನ ಆರು ಗಂಟೆ ಸಮಯದಲ್ಲಿ. ಗ್ರಾಮದಲ್ಲಿ ವಾಸವಾಗಿರುವ ಒಬ್ಬರು ಆ ಮನೆ ಇರುವ ರಸ್ತೆಯಲ್ಲಿ ಹೋಗುತ್ತಿದ್ದಾಗ, ಉರಿಯುತ್ತಿದ್ದ ವಿದ್ಯುತ್ ದೀಪ ಮತ್ತು ತೆರೆದಿರುವ ಬಾಗಿಲನ್ನು ಕಂಡು ಅನುಮಾನ ಬಂದು ಒಳಗೆ ಹೋಗಿ ನೋಡಿದ್ದರು.

ಕೂಡಲೇ ಪೊಲೀಸರಿಗೆ ಫೋನ್ ಮಾಡಿದ್ದನು. ಇಲ್ಲಿಗೆ ಬಂದಾಗ ಮೊದಲು ಸಿಕ್ಕಿದ್ದು ಪದ್ಮಿನಿಯ ಮೊಬೈಲ್ ಮತ್ತು ವ್ಯಾನಿಟಿ ಬ್ಯಾಗು. ಮೂಲೆಯಲ್ಲಿ ಅವಳ ಹೆಸರಿನ ಅಕ್ಷರಗಳಿದ್ದ ಕರ್ಚಿಫ್ ಸಹ ಬಿದ್ದಿತ್ತು. ಹಾಗಾಗಿ ಅವಳನ್ನು ಅರೆಸ್ಟ್ ಮಾಡಿದ್ದರು. ತನಿಖೆಯಿಂದ ತಿಳಿದದ್ದೇನು?

ಈ ರೌಡಿ ಪದ್ಮಿನಿಯನ್ನು ಪ್ರೀತಿಸಲು, ಮದುವೆ ಆಗಲು ವಿಪರೀತ ಕಾಟ ಕೊಡುತ್ತಿದ್ದ. ರೌಡಿಯ ಕಾರು ಮನೆಯ ಮುಂದೆ ನಿಂತಿತ್ತು. ಅದರೊಳಗೆ ಮತ್ತೊಬ್ಬಳು ಯುವತಿ ಪ್ರಿಯಾಂಕಳಿಗೆ ಸಂಬಂಧ ಪಡುವ ಸಾಕ್ಷಿ, ಆಧಾರಗಳು ಸಿಕ್ಕಿದ್ದವು.

ಅವಳನ್ನು ಬಂಧಿಸಿ ವಿಚಾರಣೆ ಮಾಡಿದಾಗ ಸತ್ಯ ಹೇಳಿದ್ದಳು. ಪದ್ಮಿನಿ, ಪ್ರಿಯಾಂಕರ ಬೆರಳು ಗುರುತುಗಳನ್ನು ಪಡೆಯಲಾಗಿದೆ. ಪದ್ಮಿನಿಯನ್ನು ನಗರದ ಪೊಲೀಸ್ ಲಾಕಪ್‌ನಲ್ಲಿ ಕೂರಿಸಲಾಗಿದೆ. ತನಿಖೆ ತೀವ್ರಗೊಂಡಿದೆ.

ಕೊಲೆಯ ಸುದ್ದಿ, ರೌಡಿಯ ಹುಚ್ಚು ಪ್ರೇಮ ಮತ್ತು ಪದ್ಮಿನಿಯನ್ನು ಹೆದರಿಸಿ ಮದುವೆ ಆಗಿದ್ದ ಸುದ್ದಿ ಸೋಷಿಯಲ್ ಮೀಡಿಯಾಗಳಲ್ಲಿ ವೈರಲ್ ಆಗಿದೆ. ಇದೇನು ಸಾಮಾನ್ಯ ಅಲ್ಲ.

ಚಂದನ್ ರೆಡ್ಡಿ ಪದ್ಮಿನಿನ ರಹಸ್ಯವಾಗಿ ಮದುವೆ ಆಗಲು ತನ್ನ ಸಹಾಯ ಬಯಸಿದ್ದು ಮತ್ತು ವಿವಾಹಕ್ಕೆ ಪೂರಕವಾಗಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದನ್ನು ಅವಳು ತಿಳಿಸಿದ್ದಳು.

ಪೊಲೀಸ್ ಅಧಿಕಾರಿ ಆ ಮನೆಯ ಸುತ್ತಲು ತಿರುಗುತ್ತಾ ಅಂಗುಲ, ಅಂಗುಲವನ್ನೂ ಎಚ್ಚರಿಕೆಯಿಂದ ಗಮನಿಸುತ್ತಿದ್ದಾನೆ. ಮನೆಯ ಮುಂಭಾಗದ ಹೊಸಿಲಿನ ಹತ್ತಿರ ಪರ್ಸ್ ಬಿದ್ದಿರೋದು ಕಂಡು ಬಂದಿತು.

ಡ್ರೈವಿಂಗ್ ಲೈಸೆನ್ಸ್. ವಿಸಿಟಿಂಗ್ ಕಾರ್ಡ್. ಎರಡು ಸಾವಿರ ಹಣ ಇದೆ.

ಡ್ರೈವರ್ ಹೆಸರು ಎನ್. ಡಿಸೋಜಾ, ವಿಳಾಸ ಮತ್ತು ಫೋನ್ ನಂಬರ್ ಇದೆ. ಅವನ ಬಗ್ಗೆ ಮಾಹಿತಿ ಸಂಗ್ರಹಿಸಲು ಪ್ರಾರಂಭಿಸಿದರು.

ಸಿನಿಮಾ ನಟಿ ಮಲ್ಲಿಕಾಳ ಡ್ರೈವರ್ ಕಮ್ ಬಾಡಿಗಾರ್ಡ್...!

ಮಲ್ಲಿಕಾಳನ್ನು ವಿಚಾರಣೆ ಮಾಡಿದಾಗ ಅವನು ಕೆಲಸಕ್ಕೆ ಬಂದಿಲ್ಲ ಎಂಬುದು ತಿಳಿಯಿತು. ಕಂಟ್ರೋಲ್ ರೂಮ್ ಮೂಲಕ ಮೆಸೇಜ್ ಪಾಸ್ ಆಯಿತು. ಪೊಲೀಸರು ಹದಿನೆಂಟು ಗಂಟೆಗಳ ಅವಧಿಯಲ್ಲಿ, ಚೆನ್ನೈನಲ್ಲಿದ್ದ ಅವನನ್ನು ಅರೆಸ್ಟ್ ಮಾಡಿದ್ದರು.

ಡಿಸೋಜಾನ ಫಿಂಗರ್ ಪ್ರಿಂಟ್ ಪಡೆದು ಪರಿಶೀಲನೆಗೆ ಕಳಿಸಲಾಯಿತು.

ಮೊದಲ ರಿಪೋರ್ಟ್ ಏನು?

ಕೊಲೆಗೆ ಬಳಸಿದ್ದ ಆಯುಧದ ಮೇಲೆ ಪದ್ಮಿನಿ ಪಾರಿಜಾತಳ ಬೆರಳು ಗುರುತು ಹೋಲಿಕೆ ಆಗಿರಲಿಲ್ಲ.

ಡಿಸೋಜಾ ಲಾಕಪ್‌ನಲ್ಲಿದ್ದಾನೆ. ತನಿಖೆ ತೀವ್ರಗೊಂಡಿದೆ. ಪೊಲೀಸರು ಲಾಠಿ ಸೇವೆ ಮಾಡಿದ ಮೇಲೆ ಸತ್ಯ ಹೊರಬಂದಿತು. ತಲೆಮರೆಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದ ಸಿನಿಮಾ ನಟಿ ಮಲ್ಲಿಕಾಳನ್ನು ಅರೆಸ್ಟ್ ಮಾಡಿದರು.

ಚಂದನ್‌ರೆಡ್ಡಿ ಈ ಸಿನಿಮಾ ನಟಿಯನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದನು. ಅವಳ ರಹಸ್ಯ ಪತ್ತೆ ಮಾಡಿ, ಸಾಕ್ಷಿ, ಆಧಾರ ಸಂಗ್ರಹಿಸಿ ಬ್ಲಾಕ್‌ಮೇಲ್ ಮಾಡಿ ಸಾಕಷ್ಟು ಹಣವನ್ನು ವಸೂಲಿ ಮಾಡಿದ್ದನು. ಅವನ ಕಾಟ ತಡೆಯಲಾರದೆ, ನಂಬಿಕಸ್ಥ ಡ್ರೈವರ್‌ನ ಮೂಲಕ ಕೊಲೆ ಮಾಡಿಸಿದ್ದಾಳೆ. ಚಂದನ್‌ರೆಡ್ಡಿಯ ದಿನನಿತ್ಯದ ಚಟುವಟಿಕೆಗಳು ಮತ್ತು ಪದ್ಮಿನಿಯ ಪ್ರಕರಣದ ಬಗ್ಗೆ ತಿಳಿದಿದ್ದರಿಂದ, ಆ ರಾತ್ರಿ ಪದ್ಮಿನಿ ಅಲ್ಲಿಂದ ತಪ್ಪಿಸಿಕೊಂಡು ಬಂದ ಮೇಲೆ, ಕುಡಿದು ತೂರಾಡುತ್ತಿದ್ದ ಅವನನ್ನು ಕೊಲೆ ಮಾಡಿದ್ದನು. ಫಿಂಗರ್ ಪ್ರಿಂಟ್ ರಿಪೋರ್ಟ್ ಪ್ರಕಾರ ಕೊಲೆಗೆ ಬಳಸಿದ್ದ ಆಯುಧದ ಮೇಲೆ ಅವನ ಬೆರಳು ಗುರುತುಗಳಿರೋದು ದೃಢವಾಗಿದೆ.

ಪದ್ಮಿನಿ ನಿರಪರಾಧಿ ಎಂಬುದು ನಿರೂಪಿತವಾಗಿದೆ. ಸಿನಿಮಾ ನಟಿ ಮಲ್ಲಿಕಾ ಮತ್ತು ಡ್ರೈವರ್‌ನನ್ನು ಅರೆಸ್ಟ್ ಮಾಡಲಾಗಿದೆ. ನ್ಯಾಯಾಲಯದಲ್ಲಿ ಈ ಕೇಸಿನ ವಿಚಾರಣೆ ನಡೆಯುತ್ತಿದೆ.

☯

# ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯರಾಗಿ ಚಿಕ್ಕೋಡಿ ಶೈ. ಜಿಲ್ಲೆಯ ಸುನೀಲ ಬಾಳಪ್ಪ ಮಗದುಮ್ಮ ನಾಮ ನಿರ್ದೇಶನ!



ರಾಜ್ಯ ಪರಿಷತ್ ಸದಸ್ಯರಾಗಿ ಸುನೀಲ ಬಾಳಪ್ಪ ಮಗದುಮ್ಮ

**ಬೆಳಗಾವಿ**
✍ ಮನ್ನಾಪೂರ

**ಚಿಕ್ಕೋಡಿ** ಶೈಕ್ಷಣಿಕ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ವಿಭಾಗೀಯ ಕಚೇರಿಯ ಸಹಾಯಕರಾಗಿರುವ ಹಾಗೂ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೋಳಿ ಅವರ ಆಪ್ತ ಸಹಾಯಕರಾಗಿರುವ ಸುನೀಲ ಬಾಳಪ್ಪ ಮಗದುಮ್ಮ ಅವರನ್ನು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯರಾಗಿ ನಾಮ ನಿರ್ದೇಶನಗೊಂಡಿದ್ದಾರೆ.

ದಿನಾಂಕ 25.03.2025ರಂದು ಬೆಂಗಳೂರಿನ ಕಬ್ಬನ್ ಪಾರ್ಕನಲ್ಲಿರುವ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದಲ್ಲಿ ರಾಜ್ಯಾಧ್ಯಕ್ಷರಾದ ಸಿ.ಎಸ್. ಷಡಾಕ್ಷರಿ ಅವರು ರಾಜ್ಯ ಸಂಘದ ಬೈಲಾ ನಿಯಮ ಹಾಗೂ ಸರ್ವ ಕಾರ್ಯಕಾರಿ ಸಮಿತಿಯ ನಿರ್ಣಯದಂತೆ ಸುನೀಲ ಬಾಳಪ್ಪ ಮಗದುಮ್ಮ ಅವರನ್ನು ರಾಜ್ಯ ಪರಿಷತ್ ಸದಸ್ಯರಾಗಿ ನಾಮ ನಿರ್ದೇಶನಗೊಳಿಸಿ ಮುಂದಿನ ಆದೇಶದವರೆಗೆ ಆಯ್ಕೆ ಮಾಡಿ ಪ್ರಮಾಣ ಪತ್ರ ವಿತರಿಸಿ ತಮ್ಮ ಕಾರ್ಯಕಾರಿ ಮಂಡಳಿಯೊಂದಿಗೆ ಸೇರಿ ಸತ್ಕರಿಸಿ ಅಭಿನಂದಿಸಿದ್ದಾರೆ.

ಸರಳ, ಸಜ್ಜನ ವ್ಯಕ್ತಿತ್ವದ ಸುನೀಲ ಬಾಳಪ್ಪ ಮಗದುಮ್ಮ ಅವರು ಸದಾ ಪಾದರಸದಂತೆ ಹರಿದಾಡುತ್ತ ದಕ್ಷತೆ ಮತ್ತು ಕ್ರಿಯಾಶೀಲ ಕಾರ್ಯ ನಿರ್ವಹಣೆಗೆ ಹೆಸರಾಗಿದ್ದಾರೆ. ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯಿಂದ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘಕ್ಕೆ ಎರಡನೇ ಬಾರಿಗೆ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ. ಕಳೆದ 16 ವರ್ಷಗಳಿಂದಲೂ ಚಿಕ್ಕೋಡಿಯ ಲೋಕೋಪಯೋಗಿ ಇಲಾಖೆಯ ಕಚೇರಿಯಲ್ಲಿ ಸಹಾಯಕರಾಗಿ ಸಾರ್ವಜನಿಕರು ಮತ್ತು ಸಹೋದ್ಯೋಗಿಗಳು, ಹಿರಿಯ ಅಧಿಕಾರಿಗಳ ಜತೆಗೆ ಅತ್ಯುತ್ತಮ ಸೌಹಾರ್ದಯುತ ಸಂಬಂಧವಿರಿಸಿಕೊಂಡು ಜನಾನುರಾಗಿ ಎನಿಸಿಕೊಂಡಿದ್ದಾರೆ.

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಚಿಕ್ಕೋಡಿ, ಹುಕ್ಕೇರಿ, ಗೋಕಾಕ, ಮೂಡಲಗಿ, ನಿಪ್ಪಾಣಿ, ರಾಯಭಾಗ, ಕಾಗವಾಡ, ಅಥಣಿ ತಾಲ್ಲೂಕುಗಳ ಸರಕಾರಿ ನೌಕರರ ಹಿತ ರಕ್ಷಣೆ ಮಾಡುವಲ್ಲಿ ಸುನೀಲ ಬಾಳಪ್ಪ ಮಗದುಮ್ಮ ಅವರು ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದಾರೆ. ಇವರ ಕಾರ್ಯಕ್ಕೆ ಚಿಕ್ಕೋಡಿ ಶೈಕ್ಷಣಿಕ ಜಿಲ್ಲಾಧ್ಯಕ್ಷರಾದ ಬಿ.ಎ. ಕುಂಬಾರ, ಖಜಾಂಚಿ ಎಸ್.ಎನ್. ಬೆಳಗಾವಿ ಮತ್ತು ಪದಾಧಿಕಾರಿಗಳು, ಲೋಕೋಪಯೋಗಿ ಇಲಾಖೆ ಚಿಕ್ಕೋಡಿಯ ಲೆಕ್ಕಾಧೀಕ್ಷಕರಾಗಿರುವ ಪ್ರಮೋದ ಮಾನೆ ಮತ್ತು ಹಿರಿಯ ಅಧಿಕಾರಿಗಳ ಸೂಕ್ತ ಬೆಂಬಲವಿದೆ.



ಲೋಕೋಪಯೋಗಿ ಸಚಿವ ಸತೀಶ ಜಾರಕಿಹೋಳಿ ಅವರ ಜತೆಗೆ ರಾಜ್ಯ ಪರಿಷತ್ ಸದಸ್ಯ ಸುನೀಲ ಬಾಳಪ್ಪ ಮಗದುಮ್ಮ ಹಾಗೂ ಚಿಕ್ಕೋಡಿ ಜಿಲ್ಲಾಧ್ಯಕ್ಷ ಬಿ.ಎ. ಕುಂಬಾರ, ಖಜಾಂಚಿ ಎಸ್.ಎನ್. ಬೆಳಗಾವಿ ಮತ್ತು ಪದಾಧಿಕಾರಿಗಳು



ಲೋಕೋಪಯೋಗಿ ನಿರ್ವಾಹಕ ಇಂಜನೀಯರ್ ಗಿರೀಶ್ ದೇಸಾಯಿ ಸುನೀಲ ಅವರನ್ನು ಸತ್ಕರಿಸುತ್ತಿರುವುದು

ಚಿಕ್ಕೋಡಿ ತಾಲ್ಲೂಕಿನ ಉಮರಾಣಿ ಗ್ರಾಮದಲ್ಲಿ ಬಾಳಪ್ಪ-ಶಾಂತವ್ವ ದಂಪತಿಗಳಿಗೆ ಎರಡನೇ ಪುತ್ರ ಸುನೀಲ ಲೋಕೋಪಯೋಗಿ ಇಲಾಖೆಗೆ ಸೇರಿದ್ದರೆ, ಹಿರಿಯ ಪುತ್ರ ಸಿದ್ದಣ್ಣ ಅಗ್ನಿಶಾಮಕ ಇಲಾಖೆಯಲ್ಲಿದ್ದಾರೆ. ಕುಟುಂಬದ ಸಹಕಾರದಿಂದ ಸುನೀಲ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದಲ್ಲಿ ಕ್ರಿಯಾಶೀಲರಾಗಿ ಬೆಳೆಯುತ್ತಿದ್ದಾರೆ. ಯಾವಾಗಲೂ ಶಿಕ್ಷಣ... ಸಂಘಟನೆ ಎಂದು ಚಿಂತಿಸುವ ಸುನೀಲ ಅವರು ಸಮಾಜಮುಖಿಯಾಗಿ ತನ್ನೂರಿನ ಬಡ ಸ್ನೇಹಿತರ ಕಷ್ಟ-ಸುಖಗಳಲ್ಲಿ ಭಾಗಿಯಾಗುವ ಸ್ನೇಹಜೀವಿ.

ಸುನೀಲ ಮಗದುಮ್ಮ ಅವರ ಕ್ರಿಯಾಶೀಲತೆಯನ್ನು ಕಂಡು ಈಗಾಗಲೇ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಚಿಕ್ಕೋಡಿ ಜಿಲ್ಲಾ ಸಂಘಟನಾ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಗಿದ್ದು, ಬೆಳಗಾವಿಯಲ್ಲಿರುವ ಲೋಕೋಪಯೋಗಿ ಮತ್ತು ನೀರಾವರಿ ಸಹಕಾರಿ ಬ್ಯಾಂಕ್‌ಗೆ ನಡೆದ ತುರುಸಿನ ಚುನಾವಣೆಯಲ್ಲಿ ಸುನೀಲ ಮಗದುಮ್ಮ ಅವರ ಸಂಘಟನಾ ಹಾಗೂ ಕ್ರಿಯಾಶೀಲ ಚಟುವಟಿಕೆಗಳನ್ನು ಕಂಡು ಚಿಕ್ಕೋಡಿ ಜಿಲ್ಲಾಧ್ಯಕ್ಷ ಬಿ.ಎ. ಕುಂಬಾರ, ಎಸ್.ಎನ್. ಬೆಳಗಾವಿ ಮತ್ತು ವಿವಿಧ ಪದಾಧಿಕಾರಿಗಳು, ಲೋಕೋಪಯೋಗಿ ಲೆಕ್ಕಾಧೀಕ್ಷರಾದ ಪ್ರಮೋದ ಮಾನೆ ಮುಂತಾದವರು ಸೇರಿಕೊಂಡು ರಾಜ್ಯ ಪರಿಷತ್ ಸದಸ್ಯರೆಂದು ನಾಮ ನಿರ್ದೇಶನ ಮಾಡುವಲ್ಲಿ ಶ್ರಮ ವಹಿಸಿದ್ದಾರೆ. ಸ್ವತಃ ರಾಜ್ಯಾಧ್ಯಕ್ಷರಾಗಿರುವ ಸಿ.ಎಸ್. ಷಡಾಕ್ಷರಿ ಅವರು ಕೂಡಾ ಸುನೀಲರ ಕಾರ್ಯ ವೈಖರಿ ಮೆಚ್ಚಿಕೊಂಡಿದ್ದಾರೆ.

ರಾಜ್ಯಪರಿಷತ್ ಸದಸ್ಯರಾಗಿ ನಾಮ ನಿರ್ದೇಶನಗೊಂಡಿರುವ ಸುನೀಲ ಬಾಳಪ್ಪ ಮಗದುಮ್ಮ ಅವರನ್ನು ರಾಜ್ಯ ಸರಕಾರಿ ನೌಕರರ ಸಂಘ ಚಿಕ್ಕೋಡಿ ಶೈಕ್ಷಣಿಕ ಜಿಲ್ಲಾ ಘಟಕದ ಎಲ್ಲಾ ತಾಲ್ಲೂಕಾ ಘಟಕದ ಪದಾಧಿಕಾರಿಗಳು ಅಭಿನಂದಿಸಿದ್ದಾರೆ. ತಮ್ಮನ್ನು ಆಯ್ಕೆ ಮಾಡಿದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರನ್ನು ಹಾಗೂ ಕಾರ್ಯಕಾರಿ ಮಂಡಳಿಯವರನ್ನು ಸದಾಕಾಲ ತಮಗೆ ಬೆಂಬಲ ನೀಡಿ ಅಗತ್ಯ ನಿರ್ದೇಶನಗಳನ್ನು ನೀಡುತ್ತಿರುವ ಜಿಲ್ಲಾಧ್ಯಕ್ಷ ಬಿ.ಎ. ಕುಂಬಾರ, ಖಜಾಂಚಿ ಎಸ್.ಎನ್. ಬೆಳಗಾವಿ, ಲೋಕೋಪಯೋಗಿ ಲೆಕ್ಕಾಧೀಕ್ಷರಾದ ಪ್ರಮೋದ ಮಾನೆ ಮತ್ತಿತರರಿಗೂ ಸುನೀಲ ಬಾಳಪ್ಪ ಮಗದುಮ್ಮ ಕೃತಜ್ಞತೆ ಸಲ್ಲಿಸಿದ್ದಾರೆ.


ಚಿಕ್ಕೋಡಿ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನೀಯರ್ ಗಿರೀಶ್ ದೇಸಾಯಿ ಸಹಾಯಕರಾದ ಹಿರೇಮಠ, ಕಚೇರಿ ಅಧೀಕ್ಷಕರಾದ ಪ್ರಶಾಂತ ಪಾಟೀಲ ಸೇರಿದಂತೆ ಎಲ್ಲ ಕಚೇರಿ ಸಿಬ್ಬಂದಿಗಳ ಬೆಂಬಲ ಮತ್ತು ನೆರವನ್ನು ರಾಜ್ಯ ಪರಿಷತ್ ಸದಸ್ಯರಾದ ಸುನೀಲ ಬಾಳಪ್ಪ ಮಗದುಮ್ಮ ಸ್ಮರಿಸುತ್ತಾರೆ. ಭವಿಷ್ಯದಲ್ಲಿ ಉತ್ತಮ ಭವಿಷ್ಯವಿರುವ ಕ್ರಿಯಾಶೀಲ ಯುವಕ ಸುನೀಲ ಮಗದುಮ್ಮ ಅವರಿಗೆ 'ಪೊಲೀಸ್ ನ್ಯೂಸ್' ಅಭಿನಂದಿಸುತ್ತದೆ. ☯



ಹುಟ್ಟೂರಾದ ಉಮರಾಣಿಯ ಗ್ರಾಮದ ಗಣ್ಯರು ಸುನೀಲ ಅವರನ್ನು ಸತ್ಕರಿಸುತ್ತಿರುವುದು



ಲೋಕೋಪಯೋಗಿ ಕಚೇರಿಯಲ್ಲಿ ಎಇಇ ಬೇಡಕಿಹಾಳ, ಲೆಕ್ಕ ಅಧೀಕ್ಷಕ ಪ್ರಮೋದ ಮಾನೆ, ತಾಂತ್ರಿಕ ಸಹಾಯಕರಾದ ಹಿರೇಮಠ, ಕಚೇರಿ ಅಧೀಕ್ಷಕ ಪ್ರಶಾಂತ ಪಾಟೀಲ, ಸುನೀಲರನ್ನು ಸತ್ಕರಿಸುತ್ತಿರುವುದು



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ
ಕಬ್ಬನ್ ಉದ್ಯಾನವನ, ಬೆಂಗಳೂರು – 560 001.

ನಾಮನಿರ್ದೇಶನ ಪ್ರಮಾಣ ಪತ್ರ

ಸಿ.ಎಸ್. ಷಡಾಕ್ಷರಿ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು ಆದ ನಾನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಬೈಲಾ ನಿಯಮ ಹಾಗೂ ರಾಜ್ಯ ಕಾರ್ಯಕಾರಿ ಸಮಿತಿಯ ನಿರ್ಣಯದಂತೆ ಶ್ರೀ/ ಸುನೀಲ್ ಮಗದುಮ್ಮ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರು ಕ.ರಾ.ಸ.ನೌ.ಸಂಘ, ಶೈಕ್ಷಣಿಕ ಜಿಲ್ಲೆ ಚಿಕ್ಕೋಡಿ ಇವರನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ "ರಾಜ್ಯಪರಿಷತ್ ಸದಸ್ಯರು" ಆಗಿ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿರುತ್ತೇನೆ.

(ಸಿ.ಎಸ್. ಷಡಾಕ್ಷರಿ)
ರಾಜ್ಯಾಧ್ಯಕ್ಷರು,
ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ,
ಬೆಂಗಳೂರು

ಸ್ಥಳ: ಬೆಂಗಳೂರು
ದಿನಾಂಕ: 25-03-2025

ರಾಜ್ಯ ಪರಿಷತ್ ಸದಸ್ಯರಾಗಿ ಆಯ್ಕೆಗೊಂಡ ಪ್ರಮಾಣ ಪತ್ರ




ರಾಜ್ಯ ಪರಿಷತ್ ಸದಸ್ಯರಾಗಿ ಆಯ್ಕೆಗೊಂಡಿರುವ ಸುನೀಲ ಬಾಳಪ್ಪ ಮಗದುಮ್ಮ ಅವರಿಗೆ ಸನ್ಮಾನಿಸಿ ಪ್ರಮಾಣ ಪತ್ರ ನೀಡುತ್ತಿರುವ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ



ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಎಲ್ಲಾ ಪದಾಧಿಕಾರಿಗಳು ಸೇರಿ ರಾಜ್ಯ ಪರಿಷತ್ ಸದಸ್ಯ ಸುನೀಲ ಮಗದುಮ್ಮ ಅವರನ್ನು ಸತ್ಕರಿಸುತ್ತಿರುವುದು

# ಬೀದರ : ವೈನ್‌ಶಾಪ್‌ನಲ್ಲಿ ಕ್ಷುಲ್ಲಕ ಕಾರಣಕ್ಕೆ ಕೊಲೆ! ವೈನ್‌ಶಾಪ್ ಪರವಾನಗಿ ರದ್ದುಪಡಿಸಲು ಪತ್ರ : ಎಸ್ಪಿ


ಕೊಲೆಯಾದ ಅಂಬರೀಷ


ಆರೋಪಿ ಅನಿಲ


ಆರೋಪಿ ರಾಜಕುಮಾರ

**ಬೀದರ**
✍ ವೀರಶೆಟ್ಟಿ ಕುಂಬಾರ

**ಯು**ವಕನೊಬ್ಬನ ತಲೆಗೆ ಕಲ್ಲಿನಿಂದ ಗಟ್ಟಿಯಾಗಿ ಹೊಡೆದು ಕೊಲೆ ಮಾಡಲಾದ ಘಟನೆ ಬೀದರ ನಗರದ ಹೃದಯ ಭಾಗವಾಗಿರುವ ಗಣೇಶ ಮೈದಾನದಲ್ಲಿ ಅಂದು ರಾತ್ರಿ 9 ಗಂಟೆಯ ಸುಮಾರಿಗೆ ಜರುಗಿದೆ.

ಬೀದರ ನಗರದ ಆದರ್ಶ ಕಾಲೋನಿಯ ನಿವಾಸಿ ಅಂಬರೀಷ ತಂದೆ ವಿಠಲ ಕೋಳಿ (28) ಕೊಲೆಯಾದ ಯುವಕ. ಅಂಬರೀಷನು ಬಾಡಿಗೆ ಇದೆ ಎಂದು ರಾತ್ರಿ 8 ಗಂಟೆಯ ಸುಮಾರಿಗೆ ಆಟೋ ತೆಗೆದುಕೊಂಡು ಮನೆಯಿಂದ ಹೋದರು. ರಾತ್ರಿ 10.30 ಗಂಟೆಯ ಸುಮಾರಿಗೆ ಅವನ ತಾಯಿಯಾದ ಲಲಿತಾಗೆ ಮಗನು ರಕ್ತವಾಂತಿಯಾಗಿ ಮೃತಪಟ್ಟಿದ್ದು ಎಡಗಡೆ ತಲೆಗೆ ಹಣೆಗೆ ಸಹ ಗಾಯವಾಗಿದ್ದು ಕಂಡು ಬಂದ ಮೇರೆಗೆ ತನ್ನ ಮಗನ ಸಾವಿನಲ್ಲಿ ಸಂಶಯವಿದೆ ಎಂದು ಬೀದರ ನಗರದ ನೂತನ ನಗರ ಠಾಣೆಗೆ ದೂರು ನೀಡಿದಳು.

ಅಂಬರೀಷನು ಗಣೇಶ ಮೈದಾನದ ಬಳಿ ಇರುವ ಶಾಯಿ ವೈನ್‌ಶಾಪ್‌ಗೆ ಸಾರಾಯಿ ಕುಡಿಯಲು ಹೋದಾಗ, ವೈನ್‌ಶಾಪ್‌ನಲ್ಲಿ ಸಾರಾಯಿ ಕುಡಿಯಲು ಬಂದಿದ್ದ ಅಪರಿಚಿತ ವ್ಯಕ್ತಿಗಳಿಬ್ಬರು ಅಂಬರೀಷನ ಜೊತೆ ಜಗಳ ಮಾಡಿದ್ದು ನಂತರ ಅಂಬರೀಷ ಮತ್ತು ಅವರಿಬ್ಬರ ಮಧ್ಯೆ ವಿಗ್ವಾದ ಬೆಳೆದು ಅವರಿಬ್ಬರು ಕೂಡಿಕೊಂಡು ಅಂಬರೀಷನಿಗೆ ಹೊಡೆದು ನಂತರ ಆತನ ಕುತ್ತಿಗೆ ಹಿಡಿದು ಎಳೆದುಕೊಂಡು ಗಣೇಶ ಮೈದಾನದಲ್ಲಿ ತಂದು ಯಾವುದೋ ಗಟ್ಟಿಯಾದ ವಸ್ತುವಿನಿಂದ ತಲೆಗೆ ಹೊಡೆದು ಕೊಲೆ ಮಾಡಿದ್ದಾರೆ. ಕಾರಣ ತನ್ನ ಮಗನಿಗೆ ಹೊಡೆದು ಕೊಲೆ ಮಾಡಿದ ಅಪರಿಚಿತ ವ್ಯಕ್ತಿಗಳ ವಿರುದ್ಧ ಕೊಲೆ ಕೇಸು ದಾಖಲಿಸಿ ನ್ಯಾಯ ಕೊಡಿಸಬೇಕೆಂದು ಮೃತನ ತಾಯಿ ದೂರಿನಲ್ಲಿ ಆರೋಪಿಸಿದಳು.


ಬೀದರ ನೂತನ ನಗರ ಠಾಣೆಯ ಅಪರಾಧ ಸಂಖ್ಯೆ 237/2024 ಕಲಂ 103(1) ಜೊತೆ 3(5) ಬಿಎನ್ ಎಸ್ ಪ್ರಕಾರ ಕೇಸು ದಾಖಲಿಸಿಕೊಂಡರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ, ಹೆಚ್ಚುವರಿ ಎಸ್ಪಿ ಚಂದ್ರಕಾಂತ ಪೂಜಾರಿ, ಡಿವೈಎಸ್ಪಿ ಶಿವನಗೌಡ ಪಾಟೀಲರವರ ಸೂಕ್ತ ಮಾರ್ಗದರ್ಶನದಲ್ಲಿ ಸಿಪಿಐ ವಿಜಯಕುಮಾರ್ ಬಾವುಗಿ, ಪಿಎಸ್‌ಐ ಪ್ರಭಾಕರ್ ಪಾಟೀಲ, ಹೆಚ್‌ಸಿ ಮೋಹನ್, ಸಿಬ್ಬಂದಿಗಳಾದ ನಿಂಗಪ್ಪಾ ಅಲ್ಲಾಪುರ, ಪ್ರಕಾಶ, ಭರತ, ನವೀನ್, ಗಂಗಾಧರ, ಸುಧಾಕರ, ಸಂಜಪ್ಪ ವಡ್ಡೆಯರ್, ರೇವಣಸಿದ್ದಪ್ಪ ಮತ್ತು ನಾಗರೆಡ್ಡಿಯವರನ್ನು ಒಳಗೊಂಡ ತನಿಖಾ ತಂಡ ಕೈಗೊಂಡರು.


ಎಸ್ಪಿ ಪ್ರದೀಪ ಗುಂಟಿ


ಹೆಚ್ಚುವರಿ ಎಸ್ಪಿ ಚಂದ್ರಕಾಂತ್ ಪೂಜಾರಿ


ಡಿವೈಎಸ್ಪಿ ಶಿವನಗೌಡ ಪಾಟೀಲ್


ಸಿಪಿಐ ವಿಜಯಕುಮಾರ್ ಬಾವುಗಿ


ಪಿಎಸ್‌ಐ ಪ್ರಭಾಕರ್ ಪಾಟೀಲ್

ಆರೋಪಿಗಳಾದ ರಾಜಕುಮಾರ ತಂದೆ ಬಸಪ್ಪಾ ಕಾರೆಮುಂಗಿ (28), ಸೆಂಟ್ರಿಂಗ್ ಕೆಲಸ, ಲೇಬರ್ ಕಾಲೋನಿ, ಶಹಾಗಂಜ ಬೀದರ ಮತ್ತು ಅನಿಲ ತಂದೆ ಹಣಮಂತ ರಾವ ಸೋನ ಕಾಂಬಳೆ, ಪೆಂಟಿಂಗ್ ಕೆಲಸ, ವಿದ್ಯಾನಗರ ಬೀದರರವರನ್ನು ಬಂಧಿಸಿದ್ದಾರೆ.

**ರದ್ದಿಗೆ ಪತ್ರ**

ಎಳಾಗಡ್ಡೆ ವೈನ್‌ಶಾಪ್‌ನಲ್ಲಿ ಸಾರಾಯಿ ಮಾರಾಟಕ್ಕೆ ಮಾತ್ರ ಅನುಮತಿ ಇದ್ದು ಆದರೆ ಪಕ್ಕದಲ್ಲಿಯೇ ಸಾರಾಯಿ ಕುಡಿಯಲು ಅನುಕೂಲ ಮಾಡಿಕೊಟ್ಟಿದ್ದ ಈ ವೈನ್‌ಶಾಪ್ ಪರವಾನಗಿ ರದ್ದುಪಡಿಸಬೇಕೆಂದು ಪತ್ರ ಬರೆಯಲಾಗುವುದು ಎಂದು ಎಸ್ಪಿ ಪ್ರದೀಪ್ ಗುಂಟಿಯವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬೀದರ ಜಿಲ್ಲೆಯಾದ್ಯಂತ ಎಲ್ಲಾ ವೈನ್‌ಶಾಪ್‌ಗಳಲ್ಲಿ ಪಾನ ಪ್ರಿಯರಿಗೆ ಕುಡಿಯಲು ವ್ಯವಸ್ಥೆ ಮಾಡಿರುತ್ತಾರೆ. ಈ ಎಲ್ಲಾ ವೈನ್‌ಶಾಪ್‌ಗಳ ಮೇಲೆ ಕಟ್ಟುನಿಟ್ಟಿನ ಕ್ರಮವನ್ನು ಅಬಕಾರಿ ಇಲಾಖೆ ಮತ್ತು ಪೊಲೀಸ್ ಇಲಾಖೆ ಕೈಗೊಳ್ಳಬೇಕೆಂದು 'ಪೊಲೀಸ್ ನ್ಯೂಸ್' ಆಗ್ರಹಿಸುತ್ತದೆ. ☯


## FORM IV

Statement about ownership and other particulars about News Paper

**'POLICE NEWS'**

| | | | |
|---|---|---|---|
| 1. | Place of publication | : | Bangalore |
| 2. | Periodicity of its publication | : | WEEKLY |
| 3. | Printer | : | SHRI OMKAR PRINTERS<br>Citizen of India<br>No. 4/1, Mahimappa Industrial Estate,<br>Near PIA Bhavan, 100ft Road,<br>Jalahalli Cross, Chokkasandra,<br>T. Dasarahalli Post, Bangalore-560 057 |
| 4. | Publisher | : | Mr. M. Rahul<br>Citizen of India<br>No. 4/1, Mahimappa Industrial Estate,<br>Near PIA Bhavan, 100ft Road,<br>Jalahalli Cross, Chokkasandra,<br>T. Dasarahalli Post, Bangalore-560 057 |
| 5. | Editor | : | Mr. M. Rahul<br>Citizen of India<br>No. 4/1, Mahimappa Industrial Estate,<br>Near PIA Bhavan, 100ft Road,<br>Jalahalli Cross, Chokkasandra,<br>T. Dasarahalli Post, Bangalore-560 057 |
| 6. | Names and addresses of individuals who own the news paper and partners or share | : | Mr. M. Rahul<br>Citizen of India<br>No. 4/1, Mahimappa Industrial Estate,<br>Near PIA Bhavan, 100ft Road,<br>Jalahalli Cross, Chokkasandra,<br>T. Dasarahalli Post, Bangalore-560 057 |

I, M. Rahul hereby declare that the particulars given above are true to the best of my knowledge and belief.

Sd/-

Date 31-3-2025

**M. Rahul**
Publisher

## ಪಾತಕ ಪ್ರಪಂಚ

# ಅವಳೇಕೆ ಈ ರೀತಿ...?

ವಿವಾಹಿತ ನವದಂಪತಿಗಳಲ್ಲಿ ಬರುವ ಮತ್ತು ಈ ಮಧುರವಾದ ಸುಖದ ಕ್ಷಣಗಳು ಜೀವನ ಪೂರ್ತಿ ನೆನಪಲ್ಲಿ ಉಳಿಯುವಂತ ಸನ್ನಿವೇಶವೇ ಮಧುಚಂದ್ರ.

ಹನಿಮೂನ್... ಹನಿಮೂನ್.

ಬಡಕುಟುಂಬದವರೇ ಆಗಲಿ, ಮಧ್ಯಮ ವರ್ಗದವರೇ ಆಗಲಿ, ಸಾಮಾನ್ಯರೇ ಆಗಿರಲಿ, ತಮ್ಮ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಸುಂದರವಾದ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಹೋಗುತ್ತಾರೆ.

ಮಧುಚಂದ್ರ ಮಧುರವಾಗಿರಲಿ ಮತ್ತು ಸುಖಕರವಾಗಿರಲಿ ಎಂದು ಸಂಬಂಧಿಕರು ಮತ್ತು ಆತ್ಮೀಯ ಗೆಳೆಯರು ಹಾರೈಸುತ್ತಾರೆ. ಆ ನವದಂಪತಿಗಳು ಸ್ವಂತ ವಾಹನ (ಆರ್ಥಿಕ ಸ್ಥಿತಿ ಉತ್ತಮವಾಗಿದ್ದರೆ)ದಲ್ಲಿ, ಇಲ್ಲದಿದ್ದರೆ ಸರ್ಕಾರದ ಬಸ್ಸುಗಳಲ್ಲಿ ಹೋಗುತ್ತಾರೆ. ಶ್ರೀಮಂತರು ಸ್ಟಾರ್ ಹೋಟೆಲ್‌ಗಳಲ್ಲಿ ರೂಮ್ ಬುಕ್ ಮಾಡುತ್ತಾರೆ.

ಇದು ನಿಜಜೀವನದ ಮತ್ತು ಮಧುಚಂದ್ರಕ್ಕೆ ಸಂಬಂಧ ಪಡುವ ವಾಸ್ತವ ಅಂಶಗಳು ಎಂದು ಹೇಳಬಹುದು. ಆದರೆ ಗುಜರಾತಿನ 'ಪಾಟೀಯಾಲ' ನಗರದಲ್ಲಿರುವ ಶ್ರೀಮಂತ ಯುವಕನ ಹನಿಮೂನ್ ತುಂಬಾ ವಿಚಿತ್ರ ಮತ್ತು ವಿಲಕ್ಷಣತೆಯಿಂದ ಕೂಡಿದೆ. ಈ ಜಗತ್ತಿನಲ್ಲಿ ಎಂತೆಂತಹ ವಿಚಿತ್ರ ತೆವಲಿನ ಜನಗಳು ಇರುತ್ತಾರೆ. ಸೂಚನೆ – ಹೆಸರು, ಪಾತ್ರ ಮತ್ತು ಘಟನೆಗಳು ಮತ್ತು ಸ್ಥಳಗಳ ಹೆಸರನ್ನು ಈ ನೆಲದ ನೇಟಿವೇಟಿಗೆ ತಕ್ಕಂತೆ ಬದಲಿಸಲಾಗಿದೆ.

●●●

ಅವಳು ತುಂಬಾ ಉದ್ವೇಗಗೊಂಡಿದ್ದಾಳೆ. ಅವಳ ಶರೀರ ಕಡಿಮೆ ಪ್ರಮಾಣದಲ್ಲಿ ಕಂಪಿಸುತ್ತಿದೆ.

ಕಾರಣ ಏನು? ಮನ್ಮಥರೂಪಿ ಶ್ರೀಮಂತ ಯುವಕನಿಂದ ಇನ್ನು ಕೆಲವೇ ನಿಮಿಷಗಳಲ್ಲಿ ಸಿಗಲಿರುವ ವಿಶಿಷ್ಟವಾದ ವಿಶೇಷವಾದ ಮಧುಚಂದ್ರದ ಸುಖ ಎಂಬುದು ನಿಜ.

ಅವಳ ಹೆಸರು ಚಂದ್ರಿಕ. ಪ್ರಾಯ ಇಪ್ಪತ್ತೊಂದು. ಫೈನಲ್ ಈಯರ್ ಡಿಗ್ರಿ ಓದುತ್ತಿದ್ದಾಳೆ. ಈ ಹಂತದಲ್ಲಿ, ಆ ಶ್ರೀಮಂತ ಯುವಕ ಶ್ರೀಗಂಧರಾಜ್ ಇವಳನ್ನು ನೋಡಲು ಆಗಾಗ ಬರುತ್ತಿದ್ದನು. ವಿಶೇಷತೆ ಏನು?

ಕಾಲೇಜಿನ ಯುವತಿಯರು ಇರುವಾಗ ಅಥವಾ ಪಬ್ಲಿಕ್ ಆಗಿ ಅವಳನ್ನು ಮೀಟ್ ಮಾಡಲು ಬರುತ್ತಿರಲಿಲ್ಲ. ಅವನ ಬಾಹ್ಯರೂಪದ ಆಕರ್ಷಣೆಗೆ ಇವಳು ಒಳಗಾಗಿದ್ದಳು. ಕಟ್ಟುಮಸ್ತಾದ ಶರೀರ. ಶ್ರೀಮಂತಿಕೆ ಲಕ್ಷಗಳಿರುವ ಆ ಯುವಕ ಬೆಲೆಬಾಳುವ ಡ್ರೆಸ್ ಧರಿಸುತ್ತಾನೆ. 'ಸ್ಯಾಂಟ್ರೋ ಮಾರ್ಕ್' ಎಂಬ ಹೊಸ ಮಾಡೆಲ್ ಕಾರಿನ ಬೆಲೆ ಇಪ್ಪತ್ತೆಂಟು ಲಕ್ಷಗಳು. ಆ ಕಾರಲ್ಲಿ ಇವಳನ್ನು ನೋಡಲು ಆಗಾಗ ಬರುತ್ತಿದ್ದನು.

ಅವಳಿಗೆ ಆಶ್ಚರ್ಯವಾಗಿತ್ತು. ಚಂದ್ರಿಕ ಸಾಮಾನ್ಯ ರೂಪಿನ ಯುವತಿ. ಬಡಕುಟುಂಬದವಳು. ಆದರೆ ಶ್ರೀಮಂತ ಮನ್ಮಥ ಯುವಕ. ನನ್ನನ್ನು ಯಾಕೆ ಮೆಚ್ಚಿಕೊಂಡ?

ಲವ್ ಈಸ್ ಬ್ಲೈಂಡ್! ಪ್ರೀತಿಗೆ ಬಾಹ್ಯರೂಪ ಮುಖ್ಯ ಅಲ್ಲ. ಬಡತನ-ಶ್ರೀಮಂತಿಕೆ ಮುಖ್ಯವಲ್ಲ. ಪ್ರೀತಿಗೆ ಪ್ರೀತಿನೇ ಮುಖ್ಯ.

ಇದು ಏನು ಸಾಮಾನ್ಯ ಪ್ರೀತಿ ಆಗಿರಲಿಲ್ಲ. ಅವಳ ಕುಟುಂಬದವರಿಗೆ ಧಾರಾಳವಾಗಿ ಹಣದ ಸಹಾಯ ಮಾಡಿದ್ದನು. ಅಗತ್ಯ ಇರುವ ಎಲ್ಲಾ ವಸ್ತುಗಳನ್ನು ಕೊಡಿಸಲು ಸ್ಟೋರ್ ಮಾಲೀಕರಿಗೆ, ಎಲೆಕ್ಟ್ರಿಕಲ್ ಸ್ಟೋರ್‌ನವರಿಗೆ ಹೇಳಿದ್ದನು.

ಎಲ್ಲವೂ ಮನೆ ತುಂಬಿತ್ತು.

ಚಂದ್ರಿಕಾಳಿಗೆ ಎಚ್ಚರಿಸಿದ್ದನು.

ಯಾವ ಕಾರಣದಿಂದಲೂ ನಮ್ಮಿಬ್ಬರ ಲವ್ ಬಗ್ಗೆ, ಮದುವೆ ಆಗಲಿರುವ ವಿಚಾರ ಮತ್ತು ನಾನು ಸಹಾಯ ಮಾಡಿರುವ ವಿಚಾರ ಬಹಿರಂಗ ಆಗಬಾರದು ಎಂದು ಎಚ್ಚರಿಸಿದ್ದನು. ಮನೇಲಿ ನಂಬುವರೆ? ಒತ್ತಾಯ ಮಾಡಿ ಕೇಳಿದ್ದರು. ಆಗ ಸುಳ್ಳು ಹೇಳಿದ್ದಳು. ನನ್ನನ್ನು ಶ್ರೀಮಂತ ಯುವಕ ಲವ್ ಮಾಡುತ್ತಿದ್ದಾನೆ. ಅವನು ಸಹಾಯ ಮಾಡಿದ್ದಾನೆ ಎಂದು ಹೇಳಿದ್ದಳೇ ವಿನಹ ಅವನ್ಯಾರು ಅಂತ ಹೇಳಿರಲಿಲ್ಲ.

ಅವಳ ಮೊಬೈಲ್‌ನಲ್ಲೇ ಆಗಲಿ ಮತ್ತು ಲಾಕರ್‌ನಲ್ಲೇ ಆಗಲಿ ಅವನ ಫೋಟೋ ಇರಲಿಲ್ಲ. ಆ ರೀತಿ ಇರಕೂಡದು. ಫೋಟೋ ಇಟ್ಟುಕೊಳ್ಳಬಾರದು ಎಂದು ಎಚ್ಚರಿಕೆ ನೀಡಿದ್ದರು.

ಇದು ತುಂಬಾ ಮುಖ್ಯವಾದ ಮತ್ತು ಗೌಪ್ಯತೆ ಕಾಪಾಡುವ ತಂತ್ರ ಆಗಿತ್ತು.

''ಚಂದ್ರಿಕ ಮೈಡಿಯರ್... ನಾನು ನಿನಗೆ ಫೋನ್ ಮಾಡಲ್ಲ. ನಿನಗೆ ನನ್ನ ನಂಬರ್ ಕೊಡಲ್ಲ. ಎಲ್ಲಿ, ಯಾವಾಗ ಮೀಟ್ ಮಾಡ್ಬೇಕು ಅಂತ ನಿನಗೆ ವಿಷಯ ತಿಳಿಸಲಾಗುತ್ತೆ.''

''ನೀವೇ ಮೀಟ್ ಮಾಡ್ತೀರ?''

''ನನ್ನ ಪರವಾಗಿ ಒಬ್ಬ ಬಂದು ಶ್ರೀಗಂಧರಾಜ್ ಕಡೆಯವನು ಅಂತ ಹೇಳಿ ಎಲ್ಲಾ ಹೇಳ್ತಾನೆ.''

ಅವಳು ಗಾಬರಿ, ಅನುಮಾನದಿಂದ ''ನೀವು ಇಷ್ಟೊಂದು ಹೆದರಲು ಕಾರಣ ಏನು'' ಎಂದು ಕೇಳಿದಳು.

''ಕಾರಣ ನನ್ನ ಡ್ಯಾಡಿ.''

''ಅಂದರೆ... ಅಂದರೆ...''

''ಅವರಿಗೆ ಪ್ರಭಾವಶಾಲಿ ರಾಜಕಾರಣಿಯ ಮಗಳ ಜೊತೆ ಮದುವೆ ಮಾಡಿಸಲು ಎಲ್ಲಾ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ನಿನ್ನನ್ನು ಲವ್ ಮಾಡುತ್ತಿರುವ ನಾನು ಬೇರೆ ಹೆಣ್ಣನ್ನು ಮದುವೆ ಆಗಲಾರೆ.''

''ಆದರೆ... ಆದರೆ...''

''ನೋಡು ಚಂದ್ರಿಕ... ನಾವಿಬ್ಬರು ರಹಸ್ಯವಾಗಿ ಮದುವೆ ಆಗಿ ಒಂದು ವಾರ ಹನಿಮೂನ್ ಆಚರಿಸೋಣ. ''ಆಮೇಲೆ ನಾನು ನಮ್ಮಿಬ್ಬರ ಮದುವೆ ಮತ್ತು ಹನಿಮೂನ್ ದೃಶ್ಯಗಳ ವೀಡಿಯೋ ಕ್ಲಿಪ್ ಕಳಿಸುತ್ತೇನೆ ಮತ್ತು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಮಾಡ್ತೀನಿ. ಆಗ ಡ್ಯಾಡಿ ಮದುವೆ ಸಂಬಂಧ ಒಪ್ಪಿಕೊಳ್ಳುತ್ತಾರೆ. ನೀನು ಸೊಸೆ ಆಗುತ್ತೀಯ.''

''ನಿನ್ನ ಡ್ಯಾಡಿ ಕೋಪ ಮಾಡಿಕೊಳ್ಳಲ್ವ?''

''ಅವರಿಗೆ ನಾನೊಬ್ಬನೇ ಮಗ. ನನ್ನ ಮೇಲೆ ತುಂಬಾ ಪ್ರೀತಿ ಇದೆ. ಎರಡು ದಿವಸ ಕೋಪ ಮಾಡಿಕೊಂಡಿರುತ್ತಾನೆ. ಆಮೇಲೆ ಎಲ್ಲಾ ಸರಿಯಾಗುತ್ತದೆ'' ಎಂದು ಹೇಳಿದನು.

ಆದರೂ ಅವಳಲ್ಲಿ ಆತಂಕ, ಭಯ ಕಾಡುತ್ತಿದೆ.

ಅವಳು ಮನೇಲಿ ಲವ್ ಮತ್ತು ಮದುವೆ ವಿಚಾರ ಹೇಳಿಲ್ಲ. ಹೆತ್ತವರಿಗೆ ಹೇಳದೆ ಗುಟ್ಟಾಗಿ ಮದುವೆ ಮಾಡಿಕೊಂಡರೆ ಅವರಿಗೂ ಸಹ ತುಂಬಾ ಬೇಜಾರಾಗುತ್ತದೆ.

ಏನು ಮಾಡಲಿ?

ಆದರೆ ಶ್ರೀಗಂಧರಾಜ್...! ಮನ್ಮಥ ರೂಪಿ ಶ್ರೀಮಂತ. ಅವನನ್ನು ಬಿಟ್ಟಿರಲಾರದೆ ಮನೇಲಿ ಸುಳ್ಳು ಹೇಳಿ ಹೊರಟಿದ್ದಳು.

●●●

ಹನಿಮೂನ್ ಎಲ್ಲಿ?

ಊಟಿ, ಕೊಡೈಕೆನಾಲ್ ಅಥವಾ ಇನ್ನಿತರ ಪ್ರಕೃತಿ ರಮಣೀಯ ಪ್ರದೇಶಗಳಲ್ಲಿ ಅಲ್ಲ.

ಗ್ರೇಟ್ ಗಾರ್ಡನ್ ಬಂಗಲೆ! 'ಬೈಲಾಪುರ' ಎಂಬ ಗ್ರಾಮದಲ್ಲಿರುವ ಪ್ರಕೃತಿ ಸೌಂದರ್ಯದ ನಡುವೆ ಬಂಗಲೆ ನಿರ್ಮಿಸಲಾಗಿದೆ. ಡೇ ಅಂಡ್ ನೈಟ್ ವಾಚ್ ಮಾಡಲು ಮತ್ತು ಈ ಶ್ರೀಮಂತನಿಗೆ ಬೇಕಾದ ಡ್ರಿಂಕ್ಸ್ ಮತ್ತು ನಾನ್ ವೆಜ್ ಐಟಂಗಳನ್ನು ಸಿದ್ಧಪಡಿಸಲು ಇವರು ಸಿದ್ಧರಾಗಿರುತ್ತಾರೆ. ಶ್ರೀಗಂಧರಾಜ್ ಎಚ್ಚರಿಕೆ ನೀಡಿದ್ದನು. ಅದು ಏನು ಗೊತ್ತೆ?

ಇಲ್ಲಿಗೆ ಯಾರೇ ಬರಲಿ, ಇಲ್ಲಿ ಏನೇ ನಡೆಯಲಿ ಬಹಿರಂಗ ಆಗಬಾರದು. ಎಚ್ಚರ ತಪ್ಪಿದರೆ ನಿಮ್ಮಿಬ್ಬರ ಪ್ರಾಣ ಉಳಿಯೋಲ್ಲ.

ಈ ಸೆಕ್ಯುರಿಟಿಯವರಿಗೆ ಬೇರೆಯವರಿಗೆ ಕೊಡುವುದಕ್ಕಿಂತ ಹತ್ತದಷ್ಟು ಜಾಸ್ತಿ ಸಂಬಳ ಮತ್ತು ಸ್ಪೆಷಲ್ ಬೋನಸ್ ಅಂತ ಆಗಾಗ ಕೊಡುವುದರಿಂದ ನಿಷ್ಠೆಯ ನಾಯಿಗಳಂತೆ ಸೇವೆ ಮಾಡಿಕೊಂಡಿದ್ದಾರೆ.

ಪ್ರೋಗ್ರಾಂ ಫಿಕ್ಸ್ ಆಗಿದೆ! ನಾಳೆ ಸಂಜೆ ಮದುವೆ. ರಾತ್ರಿ ಫಸ್ಟ್‌ನೈಟ್. ಆಮೇಲೆ ಹನಿಮೂನ್.

●●●

ಬೆಳಗಿನ ಒಂಭತ್ತು ಗಂಟೆ ಹೊತ್ತಿಗೆ ಅವಳು ಕಾಲೇಜಿಗೆ ಹೋಗಲು ಮನೆಯಿಂದ ಹೊರಗೆ ಬಂದಳು. ದೂರದಿಂದ ಅವಳನ್ನು ಫಾಲೋ ಮಾಡುತ್ತಿದ್ದ ವ್ಯಕ್ತಿ, ಸರ್ಕಲ್ ಹತ್ತಿರ ಬಂದ ಮೇಲೆ ಎಲ್ಲಾ ಕಡೆ ಒಂದು ಸಲ ನೋಡಿದ ನಂತರ ಬೇಗ ಬೇಗ ಹೆಜ್ಜೆ ಹಾಕುತ್ತಾ ವಳ ಹತ್ತಿರ ಬಂದು ತುಂಬಾ ಮೆಲುಧ್ವನಿಯಲ್ಲಿ ''ಮೇಡಂ... ನಾನು ಶ್ರೀಗಂಧರಾಜ್ ಅವ ಕಡೆಯವನು'' ಎಂದನು.

ಅವಳು ಹಿಂತಿರುಗಿದಳು.

ಮುಖದ ತುಂಬಾ ಗಡ್ಡ ಬೆಳೆಸಿಕೊಂಡಿರುವ ದಡೂತಿ ವ್ಯಕ್ತಿ ತುಂಬಾ ಹತ್ತಿರದಲ್ಲಿ ನಿಂತಿದ್ದಾನೆ. ಈಗಾಗಲೇ ನಾಲ್ಕು ಸಲ ಅವನನ್ನು ನೋಡಿದ್ದರಿಂದ ಗಾಬರಿ ಆಗಲಿಲ್ಲ.

''ಮೇಡಂ... ಸಂಜೆ ಐದು ಗಂಟೆಗೆ ನೀವು ಶಿವಾನಂದ ಸರ್ಕಲ್ ಹತ್ತಿರ ಬರಬೇಕಂತೆ. ನಮ್ಮ ಕಾರು ಅಲ್ಲಿಗೆ ಬರುತ್ತೆ. ನಿಮ್ಮನ್ನು ಸಾಹೇಬರು ಇರುವ ಜಾಗಕ್ಕೆ ಕರೆದುಕೊಂಡು ಹೋಗುತ್ತೇನೆ.''

''ಅಂದರೆ... ಅಂದರೆ...''

''ಇವತ್ತು ಸಂಜೆ ಮದುವೆ ಅಂತೆ. ನೀವು ಈ ವಿಚಾರನ ಮನೇಲಿ ಹೇಳದೆ ಬರಬೇಕು.''

''ಆದರೆಪಿ ನನ್ನ ಲಗೇಜ್...''

''ಅದರ ಅಗತ್ಯ ಏನಿಲ್ಲ. ಸಾಹೇಬರು ಎಲ್ಲಾ ರೆಡಿ ಮಾಡಿಸಿದ್ದಾರೆ.''

ಅವಳಿಗೆ ಚಡಪಡಿಕೆ ಉಂಟಾಗಿದೆ.

ಈ ಅನೂಹ್ಯತೆ ಯಾಕೆ?

ಅವಳು ಗಾಢವಾಗಿ ಚಿಂತಿಸುತ್ತಿದ್ದಾಳೆ.

''ಹಲೋ ಮೇಡಂ... ಕಾಲೇಜ್ ಗುಡ್‌ಬೈ ಹೇಳಿ ರೆಡಿಯಾಗಿ ಬನ್ನಿ. ನಿಮಗೆ ಮೇಕಪ್ ಸೆಟ್, ಡ್ರೆಸ್‌ಗಳು ಎಲ್ಲಾ ಅಲ್ಲೇ ಇದೆ. ನೀವು ಆರಾಮವಾಗಿ ಬನ್ನಿ.''

ಅವಳು ತಲೆಯಾಡಿಸಿದಳು.

ಆ ದಡೂತಿ ಗಂಭೀರವಾಗಿ ''ನೆಪಿರಲಿ ಮೇಡಂ. ಈ ಸಂಗತಿನ ಯಾರೊಬ್ಬರಿಗೂ ಹೇಳಬಾರದು. ಮದುವೆಯಾದ ಮೇಲೆ ಆ ವೀಡಿಯೋ ದೃಶ್ಯಗಳನ್ನು ವಾಟ್ಸಾಪ್, ಸ್ಟೇಟಸ್ ಮತ್ತು ಫೇಸ್‌ಬುಕ್‌ಗಳಲ್ಲಿ ಹಾಕುತ್ತಾನೆ. ಅಲ್ಲಿಯತನಕ ಇದು ಗೌಪ್ಯವಾಗಿರಬೇಕು.''

ಅವಳು ತಲೆಯಾಡಿಸಿದಳು.

ಆಂತರ್ಯದಲ್ಲಿ ಗಾಬರಿ ಕಾಡುತ್ತಿದೆ.

ಅವಳು ಆ ಕ್ಷಣಗಳಲ್ಲಿ ತೀರ್ಮಾನ ಮಾಡಿದಳು. ಶ್ರೀಗಂಧರಾಜ್ ಹತ್ತು ಲಕ್ಷ ಕೊಟ್ಟು ಭೋಗ್ಯಕ್ಕೆ ಮನೆ ಮಾಡಿಕೊಟ್ಟಿದ್ದಾನೆ. ಲಕ್ಷಗಳ ಲೆಕ್ಕದಲ್ಲಿ ಹಣ ಕೊಟ್ಟಿದ್ದಾನೆ.

ಅವನು ಪ್ರಾಯದ ಯುವಕ. ಬಾಹ್ಯರೂಪದಲ್ಲಿ ವಿಶೇಷ ಆಕರ್ಷಣೆ ಇದೆ. ಪ್ರಭಾವಶಾಲಿ ದೊಡ್ಡ ಕುಟುಂಬದ ಯುವಕ ಆಗಿರೋದ್ರಿಂದ ತಂದೆಗೆ ಹೆದರಿ ಗೌಪ್ಯವಾಗಿ ವ್ಯವಹಾರ ಮಾಡುತ್ತಿದ್ದಾನೆ ಎಂದು ಹೇಳಬಹುದು.

ಅವಳು ಕಾಲೇಜಿಗೆ ಬಂದಿದ್ದಾಳೆ. ಹೇಗೆ... ಹೇಗೆ ಸಾಧ್ಯ? ಅವಳ ಎರಡು ಪೀರಿಯಡ್ ಮುಗಿದ ಮೇಲೆ ಮನೆಗೆ ಬಂದಳು. ಅಪ್ಪ-ಅಮ್ಮ ಮತ್ತು ಒಡಹುಟ್ಟಿದವರಿಗೆ ಹೇಳದೆ ಗೌಪ್ಯವಾಗಿ ಮದುವೆ ಆಗುವ ಸನ್ನಿವೇಶ ಬಂದಿದೆಯಲ್ಲ ಎಂದು ಅವಳಿಗೆ ದುಃಖ ಆಗುತ್ತಿದೆ. ಅವಳಿಗೆ ಅಳು ಬರುತ್ತಿದೆ. ಅತ್ತರೆ ಮನೆಯವರಿಗೆ ಅನುಮಾನ ಬಂದು ಕಾರಣವನ್ನು ಕೇಳುತ್ತಾರೆ.

ಅವಳು ಕಂಟ್ರೋಲ್ ಮಾಡಿಕೊಂಡಳು.

ಸಂಜೆ ಐದು ಗಂಟೆ. ಫ್ರೆಂಡ್ ಮನೆಗೆ ಹೋಗಿ ಬರ್ತೀನಿ ಎಂದು ಹೇಳಿ ಅವಳು ಅಲ್ಲಿಂದ ಹೊರಟಳು.

●●●

ನಗರದ ಪೊಲೀಸ್ ಸ್ಟೇಷನ್. ಬೆಳಗಿನ ಹತ್ತೂವರೆ. ಪೊಲೀಸ್ ಅಧಿಕಾರಿ ಶ್ರೀಗಂಗ ಫೋನ್ ಮಾಡಿ ಮಾತಾಡುತ್ತಾ ಟೀ ಕುಡಿಯುತ್ತಿರುವಾಗ ಗಂಡ-ಹೆಂಡತಿ ಮತ್ತು ಅವರ ಸಂಬಂಧಿಕರು ಪೊಲೀಸ್ ಸ್ಟೇಷನ್‌ಗೆ ಬಂದರು. ಫೋನಿನ ಸಂಭಾಷಣೆ ಮುಗಿದ ನಂತರ ಮಾತಾಡಿದನು.

''ಹೇಳಿ ನನ್ನಿಂದ ಏನಾಗಬೇಕು?''

ತಂದೆ ದುಃಖದಿಂದ ''ಸಾರ್... ನನ್ನ ಹೆಸರು ರಾಮಯ್ಯ. ತರಗುಪೇಟೆಯಲ್ಲಿ ವಾಸ ಮಾಡುತ್ತಿದ್ದೇನೆ. ಎರಡು ದಿನಗಳಿಂದ ನನ್ನ ಮಗಳು ಮನೆಗೆ ಬಂದಿಲ್ಲ'' ಎಂದು ಹೇಳಿ ಅವಳ ಫೋಟೋ ಮತ್ತು ಮೊಬೈಲ್ ನಂಬರ್, ತಮ್ಮ ಮನೆಯ ವಿಳಾಸ ಮತ್ತು ಉಳಿದ ವಿವರಗಳನ್ನು ಹೇಳಿದಾಗ ಪಿ.ಸಿ. ದಾಖಲಿಸಿಕೊಂಡನು.

''ಮನೆಯಿಂದ ಹೋಗಿದ್ದು ಯಾವಾಗ?''

''ಗುರುವಾರ ಸಂಜೆ ಐದು ಗಂಟೆಗೆ.''

''ಹೂಂ... ಅವಳು ಮನೆಯಿಂದ ಹೋಗುವಾಗ ಹೇಗಿದ್ದಳು?''

ತಾಯಿ ''ಒಂದು ರೀತಿ ಸಪ್ಪಗಿದ್ದಳು. ಅವಳನ್ನ ಯಾವುದೋ ಗೊಂದಲ ಕಾಡುತ್ತಿತ್ತು. ಆದರೆ ತುಂಬಾ ಕಷ್ಟದಿಂದ ಕಂಟ್ರೋಲ್ ಮಾಡಿಕೊಂಡಿದ್ದಳು. ಅವಳು ಯಾವುದೋ ತೊಳಲಾಟಕ್ಕೆ ಸಿಕ್ಕಿಕೊಂಡಿದ್ದಳು ಸಾರ್'' ಎಂದರು.

''ಓಕೆ... ಓಕೆ. ಆಕೆ ಯಾರನ್ನಾದರೂ ಲವ್ ಮಾಡಿದ್ಲಾ?''

''ನಮಗೆ ತಿಳಿದಂತೆ ಇಲ್ಲ.''

''ನಿಮಗೆ ತಿಳಿಯದಂತೆ ಯಾಕೆ ಮಾಡಿರಬಾರದು. ನಿಮಗೆ ತಿಳಿದರೆ ವಿರೋಧಿಸುತ್ತೀರ ಎಂಬ ಕಾರಣದಿಂದ ಗೊಪ್ಯವಾಗಿ ಎಲ್ಲ ವ್ಯವಹಾರ ಮಾಡಿ ಮನೆ ಬಿಟ್ಟು ಹೋಗಿದ್ದಾಳೆ. ಅವಳ ರೂಮನ್ನು ನೀವೊಂದು ಸಲ ಚೆಕ್ ಮಾಡಿದ್ದೀರ?''

''ಇಲ್ಲ ಸಾರ್. ಯಾಕೆಂದರೆ ನಮಗೆ ಅಂತಹ ಅನುಮಾನವೇ ಬರಲಿಲ್ಲ.''

''ಓಕೆ. ನೀವು ಕಂಪ್ಲೆಂಟ್ ಬರೆದು ಕೊಡಿ. ನಾನು ಬಂದು ನಿಮ್ಮ ಮಗಳ ರೂಮನ್ನು ಚೆಕ್ ಮಾಡ್ತೀನಿ. ಅವಳ ಆತ್ಮೀಯ ಗೆಳತಿಯರನ್ನು ಕರೆಸಿ ವಿಚಾರಣೆ ಮಾಡ್ತೀನಿ.

●●●

ಬೆಡ್‌ರೂಮನ್ನು ಅರ್ಧ ಗಂಟೆ ತಡಕಾಡಿದರು. ಆದರೆ ಅವಳ ಲವ್ವರ್ ಬಗ್ಗೆ ಯಾವ ಸುಳಿವು ಸಹ ಸಿಗಲಿಲ್ಲ.

ಆದರೆ ತಂದೆ ''ಸಾರ್... ಇತ್ತೀಚೆಗೆ ಅವಳು ನಮಗೆ ತುಂಬಾ ಹಣದ ಸಹಾಯ ಮಾಡಿದ್ಲು'' ಎಂದು ಎಲ್ಲಾ ವಿವರವಾಗಿ ಹೇಳಿದಾಗ ಪೊಲೀಸ್ ಅಧಿಕಾರಿ ಗಡುಸಾಗಿ ''ಆ ರೀತಿ ಸಹಾಯ ಮಾಡಲು ನಿಮ್ಮ ಮಗಳ ಹತ್ತಿರ ಹಣ ಇರಲಿಲ್ಲ. ಅಂದ ಮೇಲೆ ಬೇರೆ ಯಾರೋ ಅವಳ ಲವ್‌ಗೆ ಬೆಲೆ ಕೊಟ್ಟು ಸಹಾಯ ಮಾಡಿದ್ದಾರೆ. ಆ ವ್ಯಕ್ತಿ ಯಾರು ಅಂತ ಕೇಳಿ ತಿಳಿದುಕೊಂಡಿದ್ದೀರ?''

ತಾಯಿ ಬೇಸರದಿಂದ ''ತುಂಬಾ ಒತ್ತಾಯ ಮಾಡಿದೆವು. ಆದರೆ ಬಾಯಿ ಬಿಡಲಿಲ್ಲ. ಕೊನೆಗೆ 'ನನ್ನನ್ನು ವಿವಾಹ ಆಗಲಿರುವ ಯುವಕ ನಮ್ಮ ಕುಟುಂಬದ ಬಡತನ ಕಂಡು ಧಾರಾಳವಾಗಿ ಸಹಾಯ ಮಾಡಿದ್ದಾನೆ' ಅಂತ ಹೇಳಿದ್ಲು.''

☞ 14

13 ☞

"ಅಂದರೆ ನಿಮ್ಮ ಮಗಳನ್ನು ಶ್ರೀಮಂತ ಕುಟುಂಬದ ವ್ಯಕ್ತಿ ಲವ್ ಮಾಡಿದ್ದಾನೆ ಅಂತ ಗೊತ್ತಾಗುತ್ತದೆ. ಓಕೆ. ಯಾವ ರೀತಿಯಲ್ಲಿ ಹಣದ ಸಹಾಯ ಮಾಡಿದ್ರ?"

"ಯಾವ ರೀತಿಯಲ್ಲಿ ಅಂದ್ರೇನು ಸಾರ್?"

"ಬ್ಯಾಂಕ್ ಮೂಲಕ ವ್ಯವಹಾರ ಮಾಡಿದ್ರಾ ಅಥವಾ ನಗದು ಕೊಟ್ಟಿದ್ರಾ?"

"ಅವನು ಯಾರು ಅಂತ ಗೊತ್ತಿಲ್ಲ. ನಮ್ಮ ಮಗಳು ತಂದು ಕೊಡುತ್ತಿದ್ಲು. ಹಾಗಾಗಿ ನಮಗೇನೂ ಗೊತ್ತಾಗುತ್ತಿರಲಿಲ್ಲ."

"ನಿಮ್ಮ ಮಗಳ ಪಾಸ್‌ಬುಕ್ ಕೊಡಿ" ಎಂದು ಕೇಳಿದಾಗ ತಂದೆ ಅದನ್ನು ತಂದುಕೊಟ್ಟರು. ಅವಳ ಖಾತೆಯಲ್ಲಿ ತುಂಬಾ ಕಡಿಮೆ ಹಣ ಇತ್ತು. ತಿಂಗಳಿಗೆ ಎರಡು ಅಥವಾ ಮೂರು ಸಾವಿರದ ವಿನಹ ಜಾಸ್ತಿ ವ್ಯವಹಾರ ಆಗಿರಲಿಲ್ಲ. ಬ್ಯಾಂಕ್ ವ್ಯವಹಾರ ಆಗಿದ್ದರೆ ಅವನ್ಯಾರು ಅಂತ ತಿಳಿಯಲು ಸುಳಿವು ಸಿಗುತ್ತಿತ್ತು. ಅದೂ ಸಹ ಇಲ್ಲದಂತಾಗಿದೆ.

ಆ ಮನೆಯಿಂದ ಹೊರಟ ಮೇಲೆ ಚಂದ್ರಿಕಾಳ ಆತ್ಮೀಯ ಗೆಳತಿಯರನ್ನೆಲ್ಲಾ ವಾಚಿರಿಸಿಕೊಂಡರು. ಆದರೆ ಅವರ‍್ಯಾರಿಗೂ ಅವಳ ಲವ್ ಬಗ್ಗೆ ಗೊತ್ತಿರಲಿಲ್ಲ.

ಆದರೆ ಒಬ್ಬಳು ಮಾತ್ರ ತಾನು ಕಂಡಿದ್ದನ್ನು ಹೇಳಿದ್ದಳು.

ಚಂದ್ರಿಕ ಸೌಮ್ಯ ಸ್ವಭಾವದ ಯುವತಿ. ಕಾಲೇಜಿನ ಯುವಕರ ಜೊತೆ ಹೆಚ್ಚು ಸೇರುತ್ತಿರಲಿಲ್ಲ. ಅವಳೇನು ರತಿ ವರ್ಚಸ್ಸಿನ ರೂಪವತಿ ಅಲ್ಲ. ಹಾಗಾಗಿ ಯುವಕರೂ ಸಹ ಅವಳ ಬಗ್ಗೆ ಅಷ್ಟೊಂದು ತೀವ್ರ ರೀತಿಯಲ್ಲಿ ಆಸಕ್ತಿ ತೋರಿಸುತ್ತಿರಲಿಲ್ಲ ಎಂದು ಹೇಳಬಹುದು.

ಆದರೆ... ಆದರೆ ನಗರದ ಬೇರೆ ಬೇರೆ ಕಡೆಗಳಲ್ಲಿ ಕಾರಲ್ಲಿ ಬರುತ್ತಿದ್ದ ಶ್ರೀಮಂತ ಯುವಕನ ಜೊತೆ ಮಾತಾಡಿದ್ದನ್ನು ಮತ್ತು ಅವನ ಜೊತೆ ಕಾರಲ್ಲಿ ತಿರುಗುತ್ತಿದ್ದದನ್ನು ಒಬ್ಬಳು ಯುವತಿ ನೋಡಿದ್ದಳು.

ಆ ಯುವಕರು ಯಾರು? ಹೀರೋ ಅಪಿಯರೆನ್ಸ್ ಇದ್ದ ಆಕರ್ಷಕ ರೂಪಿನವನು.

ಆ ಕ್ಷಣ ಅವಳಿಗೆ ಏನೋ ನೆನಪಿಗೆ ಬಂದು ತನ್ನ ಮೊಬೈಲ್ ತೆಗೆದಳು. ಫೋಟೋ ಗ್ಯಾಲರಿ ಓಪನ್ ಮಾಡಿ, ಆಕಸ್ಮಿಕವಾಗಿ ತೆಗೆದಿದ್ದ ಆ ಫೋಟೋಗಳನ್ನು ತೋರಿಸಿದಳು.

ಗುಲಾಬಿ ಬಣ್ಣದ ಸ್ಯಾಂಟ್ರೋ ಕಾರು.

ನಂಬರ್ ಪ್ಲೇಟ್ ಆಗುತ್ತಿದೆ.

ಅವರಿಬ್ಬರು ಕಾರಲ್ಲಿ ಕುಳಿತಿದ್ದಾರೆ. ರೆಡ್‌ಲೈಟ್ ಕಾರಣದಿಂದ ಟ್ರಾಫಿಕ್ ಜಾಮ್ ಆಗಿತ್ತು. ಈ ಯುವತಿ ಟೂ ವೀಲರ್‌ನಲ್ಲಿ ಹೋಗುತ್ತಿದ್ದಳು. ಆಕಸ್ಮಿಕವಾಗಿ ಆ ದೃಶ್ಯವನು ನನೋಡಿ ಮೊಬೈಲ್‌ನಲ್ಲಿ ಕ್ಲಿಕ್ ಮಾಡಿದಳು. ಪೊಲೀಸರಿಗೆ ಈ ಫೋಟೋಗಳನ್ನು ಫಾರ್ವರ್ಡ್ ಮಾಡಿದಳು. ಆ ಕ್ಷಣಗಳಲ್ಲಿ ಪೊಲೀಸ್ ಅಧಿಕಾರಿ ಆರ್ ಟಿಓಗೆ ಫೋನ್ ಮಾಡಿ ನಂಬರ್ ಕಾರ್‌ನ ಡೀಟೈಲ್ಸ್ ತಿಳಿಸಲು ಹೇಳಿದರು.

ಶ್ರೀಗಂಧರಾಜ್ ಎಂಬ ಹೆಸರಿನಲ್ಲಿ ಕಾರು ರಿಜಿಸ್ಟ್ರೇಷನ್ ಆಗಿದೆ ಮತ್ತು ವಿಳಾಸ, ಫೋನ್ ನಂಬರ್ ಎಲ್ಲಾ ಸಿಕ್ಕಿದೆ.

ಪೊಲೀಸರು ಕಾರ್ಯಾಚರಣೆ ಪ್ರಾರಂಭ ಮಾಡಿದರು.

●●●

ಪೊಲೀಸರಿಗೆ ಮಾಹಿತಿ ಬಂದಿತು. ಆ ಮಾಹಿತಿ ಏನು?

ಚಂದ್ರಿಕ ಮನೆಗೆ ಬಂದಿದ್ದಾಳೆ!

ಪೊಲೀಸರು ಶ್ರೀಗಂಧರಾಜ್‌ನನ್ನು ಮೀಟ್ ಮಾಡುವ ಪ್ರೋಗ್ರಾಂ ಅನ್ನು ಈಗ ಮುಂದೂಡಿದ್ದಾರೆ ಮತ್ತು ಮುಖ್ಯ ಅಧಿಕಾರಿಗಳು ಈಗ ಚಂದ್ರಿಕಾಳ ಮನೆಗೆ ಹೋಗಿದ್ದಾರೆ.

●●●

ಪೊಲೀಸರು ಬಂದಿದ್ದಾರೆ ಎಂದು ತಿಳಿದ ಕೂಡಲೇ ಅವರೆಲ್ಲಾ ಗಾಬರಿಯಾದರು. ಆದರೆ ಚಂದ್ರಿಕ ಧೈರ್ಯ ತಂದುಕೊಂಡು ರೂಮಿನಿಂದ ಹೊರಗೆ ಬಂದಳು.

ಪೊಲೀಸರು ಪ್ರಶ್ನೆ ಕೇಳುತ್ತಿದ್ದಾರೆ.

ಅವಳು ಧೈರ್ಯವಾಗಿ ಉತ್ತರಿಸುತ್ತಿದ್ದಾಳೆ.

ನಾನು ಒಬ್ಬ ಯುವಕನನ್ನು ಲವ್ ಮಾಡಿದ್ದೆ. ಅವನ ಜೊತೆ ಹೋಗಿದ್ದೆ. ನಾವಿಬ್ಬರು ಮದುವೆ ಮಾಡಿಕೊಂಡೆವು. ನಾಲ್ಕು ದಿವಸ ನಾನು ಸಂತೋಷದಿಂದ ಇದ್ದೆವು. ಆ ನಂತರ ಅವನು ನನಗೆ ಮೋಸ ಮಾಡಿ ಹೊರಟು ಹೋದ. ಹಾಗಾಗಿ ನಾನು ಮನೆಗೆ ಬಂದುಬಿಟ್ಟೆ. ಅಂತಹ ಪ್ರೇಮ ವಂಚಕನನ್ನು ನಂಬಿ ನಾನು ನನ್ನ ಬದುಕನ್ನು ಹಾಳು ಮಾಡಿಕೊಂಡೆ."

"ಅವನ್ಯಾರು ಅಂತ ಹೇಳಿ . ಅವನ ಫೋನ್ ನಂಬರ್ ವಿಳಾಸ ಕೊಡಿ ಅವನನ್ನು ಪತ್ತೆ ಮಾಡಿ ಕರೆತರುತ್ತೇವೆ."

"ಅದರ ಅಗತ್ಯ ಇಲ್ಲ. ಇದು ನನ್ನ ಸ್ವಂತ ವಿಚಾರ ನಿಮ್ಮ ಸಹಾಯದ ಅಗತ್ಯ ಇಲ್ಲ. ಆ ವಂಚಕನ ಜೊತೆ ಪುನಹ ಜೀವನ ಮಾಡಲಾರೆ. ನಮ್ಮ ಮದುವೆಗೆ ಯಾವ ಆಧಾರ, ದಾಖಲೆ ಇಲ್ಲ. ನ್ನಮ್ಮದು ಒಂದು ರೀತಿಯಲ್ಲಿ ಗಾಂಧರ್ವ ರೀತಿಯ ವಿವಾಹ. ಇದನ್ನು ದಯವಿಟ್ಟು ಪಬ್ಲಿಕ್ ಮಾಡಿ ನನ್ನ ಮುಂದಿನ ಭವಿಷ್ಯವನ್ನು ಹಾಳು ಮಾಡಬೇಡಿ" ಎಂದು ಗಂಭೀರವಾಗಿ ಹೇಳಿದಳು.

ಪೊಲೀಸ್ ಅಧಿಕಾರಿ "ಓಕೆ ಮೇಡಂ ನಾವು ಈ ವಿಚಾರವಾಗಿ ಬಲವಂತ ಮಾಡೋಲ್ಲ. ಆದರೆ ನೀವು ನಗರದ ಶ್ರೀಮಂತ ಉದ್ಯಮಿಯ ಮಗ ಶ್ರೀಗಂಧರಾಜ್ ಎಂಬ ಯುವಕನ ಜೊತೆ ಕಾರಲ್ಲಿ ಓಡಾಡಿದ್ದನ್ನು ನಿಮ್ಮ ಗೆಳತಿ ಫೋಟೋ ತೆಗೆದು ನಮಗೆ ಫಾರ್ವರ್ಡ್ ಮಾಡಿದ್ದಾಳೆ" ಎಂದು ಹೇಳಿ ಆ ಫೋಟೋಗಳನ್ನು ತೋರಿಸಿದರು.

ಅವಳು ಬೆಚ್ಚಿಬಿದ್ದಳು.

ಮುಖದ ರೀತಿ ಬದಲಾಯಿತು.

ಆದರೂ ಕೂಡಲೇ ಸಾವರಿಸಿಕೊಂಡು "ಹೌದು... ನನಗೆ ಮತ್ತು ನಾನು ನಂಬಿ ಮೋಸ ಹೋಗಿದ್ದ ಪ್ರಿಯತಮನಿಗೆ ಕೆಲಸ ಕೊಡಿಸಿ ಅಂತ ಕೇಳಲು ಹೋಗಿದ್ದೆ."

"ಅವರ ಜೊತೆ ಕೆಲವು ಸಲ ಕಾರಲ್ಲಿ ತಿರುಗಾಡಿದ್ದೀರ ಎಂಬ ಮಾಹಿತಿ ಬಂದಿದೆ."

"ಹೌದು... ನಿಜ... ತಿರುಗಾಡಿದ್ದೇನೆ. ಅದೇ ಅಪರಾಧನ? ಕಾರ್ಯವಾಸಿ ಕತ್ತೆ ಕಾಲು ಕಟ್ಟು ಅಂತ ನೀವು ಕೇಳಿಲ್ವ. ನಮ್ಮಿಬ್ಬರಿಗೆ ಕೆಲಸ ಸಿಗಲಿ ಅಂತ ಅವನ ಜೊತೆ ಆಗಾಗ ಹೋಗುತ್ತಿದ್ದೆ. ಸಾರ್... ನನಗೆ ವಿಪರೀತ ತಲೆನೋಯುತ್ತಿದೆ. ನೀವು ನಿಮ್ಮ ಪ್ರಶ್ನೆಗಳನ್ನು ನಾಳೆ ಕೇಳಿ. ಬಹುಶಃ, ಕೇಳುವಂತಹ ತಪ್ಪು ನನ್ನಿಂದ ನಡೆದಿಲ್ಲ. ತಾವು ಇನ್ನು ಹೊರಡಬಹುದು" ಎಂದು ಹೇಳಿ ಎದ್ದು ನಿಂತು ಕೈ ಮುಗಿದು ತನ್ನ ರೂಮಿಗೆ ಹೊರಟಳು.

●●●

ಅವಳು ನಿಜ ಹೇಳಿರಲಿಲ್ಲ.

ಹಿಂದೆ ನಡೆದದ್ದೇನು?

ಬದುಕಿರುವತನಕ ಎಂದೂ ಮರೆಯಲಾಗದಂತಹ ಅಸಹ್ಯಕರ ಘಟನೆಗಳು!

ಅವಳು ರೂಮಲ್ಲಿ ಮಲಗಿದ್ದಾಳೆ.

ಕಂಬನಿ ಜಾರುತ್ತಿದೆ.

ಕಂಬನಿ ಕಣ್ಣುಗಳಲ್ಲಿ ಆಕ್ರೋಶ ಇದೆ. ತಂದೆ-ತಾಯಿ ಮತ್ತು ತುಂಬಾ ಹತ್ತಿರದ ಇಬ್ಬರು ಸಂಬಂಧಿಗಳಿದ್ದಾರೆ. ಅವರು ಗಾಬರಿ, ದುಃಖ, ಆತಂಕದಿಂದ ಸಂತೈಸುತ್ತಿದ್ದಾರೆ.

ಅವಳು ಅಳುತ್ತಲೇ ಆಕ್ರೋಶದಿಂದ ತನ್ನ ಕೆಟ್ಟ ಕಹಿ ಅನುಭವವನ್ನು ಹೇಳಿಕೊಳ್ಳುತ್ತಿದ್ದಾಳೆ.

●●●

ಅವಳು ಮಿನಿ ಪ್ಯಾಲೇಸ್ ಬಂಗಲೆ ರೀತಿ ಇದ್ದ ವೈಭವಯುತವಾದ ಬಂಗಲೆಗೆ ಬಂದಳು. ಅವಳನ್ನು ಸೆಕ್ಯುರಿಟಿಯವನು ಕೂರಿಸಿ ಕುಡಿಯಲು ವಿಶೇಷವಾದ ಬಾದಾಮಿ ಹಾಲು ಕೊಟ್ಟನು.

ಫೋನ್ ಕಾಲ್ ಬಂದಿತು.

"ನನ್ನ ಪತ್ನಿ ಆಗಲಿರುವ ಚಂದ್ರಿಕ ಒಳಗೆ ಬಾ" ಎಂದು ಕೂಡಲೇ, ಅವಳನ್ನು ಎರಡನೇ ಮಹಡಿಯಲ್ಲಿರುವ ರೂಮಿಗೆ ಕರೆತರಲಾಯಿತು.

ಅಲ್ಲಿ ಕಂಡಿದ್ದೇನು?

ಮೀನುಗಳು, ಮಾಂಸದ ತುಂಡುಗಳಿಂದ ಮಾಡಿರುವ ಹಾರಗಳ ಅಲಂಕಾರ.

ಕುರಿ ತಲೆ ಕತ್ತರಿಸಲಾಗಿದೆ.

ಒಂದು ಬಕೆಟ್ ತುಂಬಾ ಸಗಣಿ ನೀರು. ಬೇರೆ ಬೇರೆ ಬಕೆಟ್‌ಗಳಲ್ಲಿ ಬಣ್ಣ, ಬಣ್ಣದ ನೀರುಗಳನ್ನು ತುಂಬಿಸಲಾಗಿದೆ. ಎಲ್ಲರೂ ತುಂಬಾ ವಿಚಿತ್ರವಾಗಿದೆ ಮತ್ತು ಭಯ ಉಂಟಾಗುವ ರೀತಿ ಇದೆ.

ಶ್ರೀಗಂಧರಾಜ್.

ಮನ್ಮಥ ರೂಪಿ ಯುವಕ ತುಂಬಾ ವಿಕೃತ ರೀತಿಯಲ್ಲಿ ವೇಷಧರಿಸಿಕೊಂಡು ಈಗ ಹುಚ್ಚನ ರೀತಿ ಕುಣಿಯುತ್ತಿದ್ದಾನೆ. ಅವಳ ಕೈ ಹಿಡಿದು ಎಳೆದು ಅವಳ ಸೀರೆ, ರವಿಕೆ ಎಲ್ಲಾ ಕಿತ್ತೆಸೆದು ಈಗ ಪೂರ್ಣ ಬೆತ್ತಲೆಗೊಳಿಸಿ ಮಾಂಗಲ್ಯ ಕಟ್ಟಿದನು.

ಎಂತಹ ಮಾಂಗಲ್ಯ?

ಮೂಳೆಗಳ ತುಂಡುಗಳನ್ನು ಸೇರಿಸಿ ಕಟ್ಟಿ ಮಾಡಿರುವ ಮತ್ತು ತುದಿಯಲ್ಲಿ ಸಣ್ಣ ಮಗುವಿನ ತಲೆಬುರುಡೆ ಇರುವ ರಕ್ತ ಲೇಪನದ ಮಾಂಗಲ್ಯ.

ಅವಳ ಸುತ್ತ ಕುಣಿಯುತ್ತಾ ಮೊದಲು ಮೂತ್ರ ತುಂಬಿರುವ ಗಡಿಗೆ ಎತ್ತಿ ಅವಳ ತಲೆ ಮೇಲೆ ಸುರಿದನು. ಆಮೇಲೆ ರಕ್ತ, ನಂತರ ಸಗಣಿ (ಹಸಿ) ಯಿಂದ ಅವಳ ಮೈ, ಮುಖ ಮೇಲೆಲ್ಲಾ ರಪ ರಪನೆ ಬಡಿದನು.

ಅವಳು ಪೂರ್ಣ ಬೆತ್ತಲಾಗಿದ್ದಾಳೆ. ತುಂಬಾ ವಿಲಕ್ಷಣವಾಗಿ ಕಾಣುತ್ತಿದ್ದಾಳೆ. ಇವನೂ ಸಹ ಬೆತ್ತಲಾಗಿ ಅವಳಿಗೆ ಮಾಂಗಲ್ಯ ಕಟ್ಟಿದನು. ನಂತರ ಏನಾಯಿತು?

ಅವಳ ಶರೀರದ ತುಂಬಾ ಬಣ್ಣ ಬಣ್ಣಗಳ ನೀರನ್ನು ಸುರಿದನು. ಅವಳನ್ನು ಎತ್ತಿಕೊಂಡು ಗಿರ್ರನೆ ತಿರುಗುತ್ತಾ ಹುಚ್ಚುಹುಚ್ಚಾಗಿ ಕುಣಿಯಲಾರಂಭಿಸಿದನು.

ಮದುವೆಗೆ ಸಂಬಂಧ ಪಡುವಂತ ಹಾಡನ್ನು ಹಾಕಿಕೊಂಡು ವಿಕೃತ-ವಿಲಕ್ಷಣವಾಗಿ ಡ್ಯಾನ್ಸ್ ಮಾಡಲಾರಂಭಿಸಿದನು.

ಶೃಂಗಾರದಾಟ ಆಡಲಿಲ್ಲ.

ಕಾಮ ಮಿಲನ ಆಗಲಿಲ್ಲ.

ನಾಲ್ಕು ತಿನಗಳ ಕಾಲ ಅವಳಿಗೆ ಚಿತ್ರ-ವಿಚಿತ್ರ ಹಿಂಸೆ ನೀಡುತ್ತಿದ್ದನು. ಇದು ಅವಳಿಗೆ ಪ್ರತ್ಯಕ್ಷ ನರಕ ದರ್ಶನ ಉಂಟಾಯಿತು. ಅವನಿಗೆ ಇದು ಬೇಜಾರಾಗಿದ್ದರಿಂದ ಇವಳ ಕತ್ತಿನಲ್ಲಿದ್ದ ಮಾಂಗಲ್ಯ ಕಿತ್ತು, ಬ್ಲಾಕ್‌ಮೇಲ್ ಬೆದರಿಕೆ ಹಾಕಿ ಬಿಡುಗಡೆ ಮಾಡಿದನು.

ಇದನ್ನು ಅವಳು ಕಂಬನಿ ಮಿಡಿಯುತ್ತಾ ತನ್ನವರಿಗೆ ಹೇಳಿದಳು.

ಇದು ರಹಸ್ಯವಾಗಿರಲಿ ಎಂದು ತನ್ನವರಿಗೆ ಎಚ್ಚರಿಕೆ ನೀಡಿದಳು.

●●●

ಶ್ರೀಗಂಧರಾಜ್ ವಿಕೃತ-ವಿಲಕ್ಷಣ ಚಪಲಗಾರ ಶ್ರೀಮಂತ. ಅವನ ದೃಷ್ಟಿಗೆ ಬಿದ್ದವಳು ಮಾಲತಿ...! ಬಡಕುಟುಂಬದವಳು. ಸ್ಥಳೀಯ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದಳು. ಮಾಲತಿಗೆ ಹಣದ ಆಕರ್ಷಣೆ ತೋರಿಸಿ ಬಲೆಗೆ ಹಾಕಿಕೊಂಡನು.

ಚಂದ್ರಿಕಾಳಿಗೆ ಮಾಡಿದಂತೆ ಇವಳ ಜೊತೆ ಸಹ ಹುಚ್ಚಾಟ ಆಡಿದನು. ಅವಳು ಆತ್ಮೀಯ ಗೆಳತಿ ಚಂದ್ರಿಕ ಎಲ್ಲವನ್ನೂ ಹೇಳಿದ್ದರಿಂದ, ನಾಲ್ಕಾರು ಪತ್ರಿಕೆಯ ವರದಿಗಾರರು ಮತ್ತು ಪೊಲೀಸರನ್ನು ರಹಸ್ಯವಾಗಿ ಜೊತೆಗೆ ಕರೆದುಕೊಂಡು ಹೋಗಿದ್ದಳು.

ರಹಸ್ಯ ಬಹಿರಂಗ ಆಗಿತ್ತು. ಬಲವಾದ ಸಾಕ್ಷಿ, ಆಧಾರಗಳ ಸಮೇತ ಸುದ್ದಿ ಮಾಧ್ಯಮಗಳಲ್ಲಿ ಅಬ್ಬರದ ಪ್ರಚಾರ ಪಡೆದಿದ್ದರಿಂದ ಮತ್ತು ಸ್ವಯಂ ಪೊಲೀಸರು ಸಹ ಪ್ರತ್ಯಕ್ಷವಾಗಿ ಕಂಡು ದಾಖಲಿಸಿಕೊಂಡಿದ್ದರಿಂದ ಶ್ರೀಗಂಧರಾಜ್‌ನನ್ನು ಬಂಧಿಸಲು ಸುಲಭವಾಯಿತು. ☯



ಬೆಲೆ : ರೂ. 300 +
ಕೊರಿಯರ್ ಚಾರ್ಜ್ - 100
ಒಟ್ಟು ರೂ. 400/-



ಬೆಲೆ : ರೂ. 125 +
ಕೊರಿಯರ್ ಚಾರ್ಜ್ - 100
ಒಟ್ಟು ರೂ. 225/-



ಬೆಲೆ : ರೂ. 200 +
ಕೊರಿಯರ್ ಚಾರ್ಜ್ - 100
ಒಟ್ಟು ರೂ. 300/-

ಪ್ರತಿಗಳಿಗೆ ಸಂಪರ್ಕಿಸಿ:
ನಂ. 165, 8ನೇ ಮುಖ್ಯರಸ್ತೆ,
ಬಿಇಎಂಎಲ್ ಬಡಾವಣೆ,
ಬಸವೇಶ್ವರನಗರ,
ಬೆಂಗಳೂರು-560 079
080-23588510





# ವಿದ್ಯಾಪತಿಗೆ ಧ್ರುವ ಸರ್ಜಾ ಸಾಥ್

ಕೋವಿಡ್ ಸಮಯದಲ್ಲಿ ನಡೆಯೋ ಕಥೆ ಇಟ್ಟುಕೊಂಡು ಇಕ್ಕಟ್ ಎಂಬ ಚಿತ್ರ ನಿರ್ದೇಶಿಸಿದ್ದ ಇಶಾಂ ಮತ್ತು ಹಸೀಂಖಾನ್ ಎಂಬ ಜೋಡಿ ನಿರ್ದೇಶಕರ ಮತ್ತೊಂದು ಚಿತ್ರ ವಿದ್ಯಾಪತಿ, ತನ್ನ ಕಂಟೆಂಟ್, ಸ್ಟಾರ್ ಕಾಸ್ಟ್‌ನಿಂದಲೇ ಹೆಚ್ಚು ಸದ್ದು, ಸುದ್ದಿ ಮಾಡುತ್ತಿರುವ ಈ ಚಿತ್ರ ಏಪ್ರಿಲ್ 10ಕ್ಕೆ ತೆರೆಗೆ ಬರುತ್ತಿದೆ. ಧನಂಜಯ್ ಅವರ ಡಾಲಿ ಪಿಕ್ಚರ್ಸ್ ಮೂಲಕ ನಿರ್ಮಾಣವಾಗುತ್ತಿರುವ ನಾಲ್ಕನೇ ಚಿತ್ರ ಇದಾಗಿದ್ದು, ಇದರಲ್ಲಿ ಟಗರು ಪಲ್ಯ ನಾಯಕ ನಾಗಭೂಷಣ್ ಅವರು ಒಬ್ಬ ಕರಾಟೆ ಪಟುವಾಗಿ ಅಭಿನಯಿಸಿದ್ದಾರೆ. ಕರಾಟೆ ಮಾಸ್ಟರ್ ಆಗಿ ಹಿರಿಯ ನಟ ರಂಗಾಯಣ ರಘು ಅಭಿನಯಿಸಿದ್ದಾರೆ. ಧನಂಜಯ ಅವರ ಡಾಲಿ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗುತ್ತಿರುವ 4ನೇ ಚಿತ್ರ ಇದಾಗಿದ್ದು, ಚಿತ್ರದ ನಾಯಕಿ ಸೂಪರ್ ಸ್ಟಾರ್ ವಿದ್ಯಾಳಾಗಿ ಅಧ್ಯಕ್ಷ ಖ್ಯಾತಿಯ ಮಲೈಕಾ ವಸುಪಾಲ್ ನಟಿಸಿದ್ದಾರೆ.

ಈಗಾಗಲೇ ನಾಗಭೂಷಣ್, ಮಲೈಕಾ ವಸುಪಾಲ್ ಅಭಿನಯದ ಓ ಮದನಾರಿ..ಮನಸು ಜಾರಿ ಎಂಬ ಪ್ರೇಮಗೀತೆ ಹಾಗೂ ವಿದ್ಯಾಪತಿಯ ತಲೆಹರಟೆ ಕಥೆ ತೆರೆದಿಡುವ ಅಯ್ಯೋ ವಿಧಿಯೇ ಎಂಬ ಹಾಡುಗಳು ಬಿಡುಗಡೆಯಾಗಿ ವೈರಲ್ ಆಗಿವೆ. ಸುಜಿತ್ ವೆಂಕಟರಾಮಯ್ಯ ಅವರ ಸಾಹಿತ್ಯ ಈ ಹಾಡುಗಳಿಗಿದ್ದು, ಡಾಸ್ಮೋಡ್ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ಇದೀಗ ವಿದ್ಯಾಪತಿ ಚಿತ್ರದ ಟ್ರೈಲರ್‌ನ್ನು ನಟ ಧ್ರುವ ಸರ್ಜಾ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದ್ದಾರೆ. ನಂತರ ಮಾತನಾಡಿದ ಅವರು ಈ ಚಿತ್ರವು ಕೆಆರ್‌ಜಿ ಸ್ಟುಡಿಯೋಸ್‌ನ ಯೋಗಿ , ಕಾರ್ತಿಕ್‌ರಂಥ ಸೇಫ್ ಹ್ಯಾಂಡ್ಸಲ್ಲಿದೆ. ಥಿಯೇಟರ್ ಸೆಟಪ್ ಪ್ರಾಮಿಸಿಂಗ್ ಆಗಿರುತ್ತದೆ. ಈ

ಈ ಸಿನಿಮಾದಲ್ಲಿ ಮನರಂಜನೆ ಖಂಡಿತ ಇದ್ದೇ ಇರುತ್ತದೆ. ನಾಗಭೂಷಣ್ ಅವರ ಹನಿಮೂನ್, ಇಕ್ಕಟ್ಟು, ಟಗರು ಪಲ್ಯ ಹೀಗೆ ಎಲ್ಲಾ ಸಿನಿಮಾಗಳನ್ನು ನಾನು ನೋಡಿದ್ದೇನೆ. ಅದರಲ್ಲಿಯೂ ಹನಿಮೂನ್ ಸಿಕ್ಕಾಪಟ್ಟೆ ಚೆನ್ನಾಗಿದೆ. ಈ ಚಿತ್ರದ ಟ್ರೇಲರ್ ಕೂಡ ಹಾಸ್ಯದಿಂದ ಕೂಡಿದೆ. ಇದು ಪಕ್ಕ ಎಂಟರ್‌ಟೈನರ್ ಆಗಿರಲಿದೆ. ಶ್ರೀವತ್ಸ, ಧರ್ಮ, ಪೂರ್ಣಚಂದ್ರ ಎಲ್ಲರೂ ಅದ್ಭುತವಾಗಿ ಅಭಿನಯಿಸಿದ್ದಾರೆ. ಕೆರೆ ನೀರನ್ನು ಕೆರೆ ಚೆಲ್ಲು ಎನ್ನುವಂತೆ ಧನಂಜಯ್ ಇಲ್ಲಿಯೇ ದುಡಿದು ಇಲ್ಲಿಗೆ ಇನ್ವೆಸ್ಟ್ ಮಾಡುತ್ತಿದ್ದಾರೆ. ಅವರಿಗೆ ಒಳ್ಳೆಯದಾಗುತ್ತದೆ ಎಂದು ಹೇಳಿದರು. ನಟ ಡಾಲಿ ಧನಂಜಯ್ ಮಾತನಾಡಿ, ವಿದ್ಯಾಪತಿ ಫ್ಯಾಮಿಲಿ ನೋಡುವ ಸಿನಿಮಾ. ಕುಟುಂಬ ಸಮೇತರಾಗಿ ಮಕ್ಕಳ ಜೊತೆ ಬಂದು ಎಲ್ಲರೂ ಚಿತ್ರ ನೋಡಿ. ಇನ್ನೊಂದಿಷ್ಟು ಸಿನಿಮಾಗಳಿಗೆ ಅದು ಸ್ಫೂರ್ತಿಯಾಗುತ್ತದೆ. ಪ್ರತಿಸಲ ನೀವು ಕೈಹಿಡಿಯುವುದು ಮುಖ್ಯ. ಮೊದಲ ಸಿನಿಮಾದಿಂದಲೇ ಧ್ರುವ ಸೂಪರ್ ಸ್ಟಾರ್. ಪೊಗರು ಚಿತ್ರದಲ್ಲಿ ಇಬ್ಬರೂ ಜೊತೆಯಲ್ಲಿ ಕೆಲಸ ಮಾಡಿದ್ದೇವೆ, ಕೆಆರ್‌ಜಿ ಸ್ನೇಹಿತರಾಗಿ ಸದಾ ನನ್ನಜೊತೆ ನಿಂತಿದ್ದಾರೆ ಎಂದು ತಿಳಿಸಿದರು.

ನಟ ನಾಗಭೂಷಣ್ ಮಾತನಾಡಿ, ನಾನು ಹೀರೋ ಆಗಬೇಕು ಎಂದು ಇಂಡಸ್ಟ್ರಿಗೆ ಬಂದವನಲ್ಲ. ಒಳ್ಳೊಳ್ಳೆ ಸಿನಿಮಾಗಳಲ್ಲಿ ಸಣ್ಣ ಪಾತ್ರಗಳನ್ನು ಮಾಡಿಕೊಂಡು ಹೋಗಬೇಕು ಎಂದುಕೊಂಡಿದ್ದೆ. ನನಗಿದು ಜೀವನದಲ್ಲಿ ಸಿಕ್ಕ ಬೋನಸ್, ನನ್ನ ನಂಬಿ ನಿರ್ದೇಶಕರು ವಿದ್ಯಾಪತಿ ಚಿತ್ರ ಕೊಟ್ಟರು. ಇಡೀ ತಂಡ ನನಗೆ ಬೆಂಬಲವಾಗಿ ನಿಂತಿದೆ. ನೀವು ಡಾಲಿ ಪಿಕ್ಚರ್ಸ್ ಬಿಟ್ಟು ಬೇರೆ ಕಡೆ ಸಿನಿಮಾ ಮಾಡೋಲ್ವಾ ಎಂದು ಕೆಲವರು ಕೇಳುತ್ತಾರೆ. ಆದರೆ ನನಗೆ ಸಿನಿಮಾ ಮಾಡಲು ಯಾರು ಮುಂದೆ ಬಂದಿದ್ದಾರೆ? ನಿನ್ನ ಮೇಲೆ ಐದಾರು ಕೋಟಿ ಇನ್ವೆಸ್ಟ್ ಮಾಡುತ್ತೇನೆ ಎಂದು ಈವರೆಗೆ ಯಾರೂ ಹೇಳಿಲ್ಲ, ಅದನ್ನು ನನ್ನ ಗೆಳೆಯ ಧನಂಜಯ್ ಮಾಡಿದ್ದಾನೆ ಎಂದು ಹೇಳಿದರು. ಈವರೆಗೆ ಪ್ರೇಕ್ಷಕರಿಗೆ ಕಾಮಿಡಿ ಕಿಕ್ ಕೊಡ್ತಿದ್ದ ನಾಗಭೂಷಣ್ ವಿದ್ಯಾಪತಿಯಲ್ಲಿ ಆಕ್ಷನ್‌ಸ್ಟಾರ್‌ಆಗಿದ್ದಾರೆ. ರಂಗಾಯಣ ರಘು ಪಾತ್ರವೂ ಇಲ್ಲಿ ವಿಶೇಷವಾಗಿದೆ. 2 ನಿಮಿಷ 49 ಸೆಕೆಂಡ್ ಇರುವ ಟ್ರೇಲರ್ ಬೊಂಬಾಟ್ ಆಗಿ ಮೂಡಿಬಂದಿದೆ. ಲವಿತ್ ಅವರ ಛಾಯಾಗ್ರಹಣ, ಡಾಸ್ಮೋಡ್ ಅವರ ಸಂಗೀತ, ಮುರಳಿ ಅವರ ನೃತ್ಯ ನಿರ್ದೇಶನ ಚಿತ್ರಕ್ಕಿದೆ. ಸುಜಿತ್ ವೆಂಕಟರಾಮಯ್ಯ ಅವರ ಸಾಹಿತ್ಯವಿದೆ.

# ಮೇ 9ಕ್ಕೆ, ಸೂತ್ರಧಾರಿ ಚಂದನ್ ಹಾಡು ಟ್ರೆಂಡಿಂಗ್‌ನಲ್ಲಿ!



ನನ್ನ ಡ್ಯಾಶ್ ಮಾಡ್ಕೊಳ್ಳೆ.... ರ್‍ಯಾಪರ್ ಚಂದನ್ ಶೆಟ್ಟಿ ಹಾಡಿರುವ ಈ ಹಾಡು ಇಪ್ಪತ್ತೇಳು ಲಕ್ಷ ಕೇಳುಗರನ್ನು ಮುಟ್ಟಿದೆ. ಬಟ್ಟಲುಗಣ್ಣಿನ, ನಗುಮುಖದ ಚೆಲುವೆ ಸಂಜನಾ ಆನಂದ್ ಈ ಹಾಡಿನಲ್ಲಿ ಚಂದನ್ ಶೆಟ್ಟಿ ಜತೆಗಿದ್ದಾರೆ. ಮುಖ್ಯವಾಗಿ ಅರೆಬಿಯನ್ ಶೈಲಿಯಲ್ಲಿ ಚಿತ್ರಣವಾದ ಈ ಹಾಡು ಚಿತ್ರದ ಟೈಟಲ್ ಸೂತ್ರಧಾರಿಯನ್ನು ಮತ್ತಷ್ಟು ಜನಪ್ರಿಯಗೊಳಿಸಿಕೊಂಡು ಹೋಗಬಹುದು ಅನಿಸಿತ್ತೆ. ಆದರೆ ಸೂತ್ರಧಾರಿಯ ಬಿಡುಗಡೆ ಯಾಕಿಷ್ಟು ತಡ? ಎನ್ನುವ ಮಾತುಗಳು ಹರಿದಾಡುತ್ತಲೇ ಇತ್ತು. ಈಗ ಚಿತ್ರ ಮೇ 9ರಂದು ತೆರೆಕಾಣುವುದು ಪಕ್ಕಾ ಆಗಿದೆ. ಮುಖ್ಯವಾಗಿ ಚಿತ್ರವನ್ನು ಹೇಗೆ ಆಕರ್ಷಿಸಬೇಕು ಎನ್ನುವ ತಂತ್ರವನ್ನು ನಿರ್ಮಾಪಕ ನವರಸನ್ ನಲವತ್ತು ದಿನಗಳ ಮೊದಲೇ ಆರಂಭಿಸಿದ್ದಾರೆ; ಇದು ಯಾವುದೇ ನಿರ್ಮಾಪಕ ಗಮನಿಸಬೇಕಾದ ಅಂಶ.

ನವರಸನ್ ನಟ, ನಿರ್ಮಾಪಕ, ನಿರ್ದೇಶಕ, ಆತ ಇನ್ನೂರಕ್ಕೂ ಹೆಚ್ಚು ಚಿತ್ರಗಳನ್ನು ವಿತರಿಸಿದ್ದಾರೆ. ಬೆಂಗಳೂರು ಜಿ.ಟಿ. ಮಾಲ್‌ನಲ್ಲಿ ಇವರು ತೆರೆದಿರುವ ಪ್ರಿವ್ಯೂ ಥಿಯೇಟರ್ ಕನ್ನಡ ಚಿತ್ರೋದ್ಯಮಕ್ಕೆ ಈಗಾಗಲೇ ಒಂದಷ್ಟು ಗೌರವ ತಂದು



ಕೊಟ್ಟಿದೆ. ಹೆಚ್ಚು-ಕಮ್ಮಿ ಕನ್ನಡ ಚಿತ್ರಗಳ ಮಾಧ್ಯಮಗೋಷ್ಠಿ ನಡೆಯುವುದು ಈ ಪ್ರಿವ್ಯೂ ಥಿಯೇಟರಿನಲ್ಲೇ. ಅವರೇ ಸೂತ್ರಧಾರಿ ನಿರ್ಮಾಪಕರು. ಅವರ ಸಹಾಯಕ ಕಿರಣ್ ಕುಮಾರ್ ಈ ಚಿತ್ರದಿಂದ ನಿರ್ದೇಶಕರಾಗಿದ್ದಾರೆ. ಈ ಕಿರಣ್ ಕನ್ನಡ ಚಿತ್ರರಂಗ ಕಂಡ ಅತ್ಯುತ್ತಮ ಕ್ಯಾಮರಮನ್ ಪಿಎಚ್‌ಕೆ. ದಾಸ್‌ಗೆ ಸಹಾಯಕ ಕೂಡಾ. ಈತನ ಚಿತ್ರಕ್ಕೆ ಗುರು, ದಾಸ್ ಅವರೇ ಛಾಯಾಗ್ರಹಕರಾಗಿದ್ದಾರೆ.

ಸೂತ್ರಧಾರಿ ಚಿತ್ರದ ಬಿಡುಗಡೆ ಯಾಕೆ ಇಷ್ಟೊಂದು ವಿಳಂಬವಾಯಿತು? ಎಂಬುದಕ್ಕೆ ಕಾರಣ ಕೊಟ್ಟ ನವರಸನ್- ವಾರಕ್ಕೆ ಏಳೆಂಟು ಚಿತ್ರಗಳು ತೆರೆಕಾಣುತ್ತಿವೆ. ಆದರೆ ಚಿತ್ರಗಳ ಹೆಚ್ಚಿನ ನಿರ್ಮಾಪಕರಲ್ಲಿ ನಗುವಿಲ್ಲ. ಎಲ್ಲಿ ಕೊರತೆ ಕಾಣುತ್ತಿದೆ ಎಂಬುದಕ್ಕೆ ಯಾರಲ್ಲೂ ಉತ್ತರವಿಲ್ಲ. ಈ ಎಲ್ಲ ಕಾರಣಗಳನ್ನು ಅರ್ಥೈಸಿಕೊಂಡು ನಲವತ್ತು ದಿನಗಳ ಮೊದಲೇ ಚಿತ್ರ ಬಿಡುಗಡೆಯ ದಿನಾಂಕ ಪ್ರಕಟಿಸಿದ್ದೇನೆ ಮತ್ತು ದೊಡ್ಡಮಟ್ಟದಲ್ಲಿ ಪ್ರಚಾರ ಆರಂಭಿಸಿದ್ದೇನೆ. ಚಿತ್ರದಲ್ಲಿ ಚಂದನ್ ಶೆಟ್ಟಿ ಹೆಸರು ಮತ್ತು ಹವಾ ಎರಡೂ ಇದೆ. ಮುಖ್ಯವಾಗಿ ಅವರು ಸೋಲೋ ಹೀರೋ ಆಗಿ ಅಭಿನಯಿಸಿರುವ ಮೊದಲ ಚಿತ್ರ. ಸಂಗೀತ ನಿರ್ದೇಶಕ ಕೂಡಾ. ಅವರು ಕೊಟ್ಟಿರುವ ಬ್ಯಾಕ್‌ಗ್ರೌಂಡ್ ಮ್ಯೂಸಿಕ್ ಚಿತ್ರವನ್ನು ಹೆಚ್ಚುಗಾರಿಕೆ ಮಾಡಬಹುದು ಅನಿಸುತ್ತೆ. ಸಂಜನಾ ಆನಂದ್ ಡ್ಯಾಶ್ ಹಾಡಿನಲ್ಲಿ ಬರುತ್ತಾರೆ. ಅಪೂರ್ವ ನಾಯಕಿ ಎಂದು ನವರಸನ್ ವಿವರಿಸಿಕೊಂಡು ಹೋಗುತ್ತಾರೆ. ಗೆದ್ದಿರುವವರನ್ನು ಗೆಲ್ಲಿಸುವುದರಲ್ಲಿ ಅರ್ಥವಿಲ್ಲ. ಈ ಉದ್ದೇಶದಲ್ಲಿ ಮೀರಾ, ಪಲ್ಲವಿ, ಸುಶ್ಮಿತಾ ಹೀಗೆ ಒಂದಷ್ಟು ಪ್ರತಿಭೆಗಳು ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ; ಇದು ನವರಸನ್ ಕೊಟ್ಟ ಮತ್ತೊಂದು ಟಿಪ್ಪಣಿ.

ನನ್ನ ಬದುಕಿನಲ್ಲಿ ನೆನಪಾಗಿ ಉಳಿಯುವಂಥ ಚಿತ್ರ ಸೂತ್ರಧಾರಿ; ಮುಖ್ಯವಾಗಿ ನಾನು ಈ ಚಿತ್ರದಲ್ಲಿ ಹೀರೋ ಎಂದು ಮಾತು ಆರಂಭಿಸಿದ ಚಂದನ್ ಶೆಟ್ಟಿ ಹಾಡುಗಳು ನಿರೀಕ್ಷೆಗೂ ಮೀರಿ ಟ್ರೆಂಡಿಂಗ್ ಆಗಿದೆ. ಒಳ್ಳೆ ಪಾತ್ರವೂ ಸಿಕ್ಕಿದೆ. ಈ ಚಿತ್ರದ ಆರಂಭದ ನಂತರ ನನ್ನ ಬದುಕಿನಲ್ಲಿ ಒಂದಷ್ಟು ಏರು-ಪೇರೂ ಆಗಿಹೋಗಿದೆ ಎಂದು ಹೇಳಿಕೊಂಡ ಚಂದನ್ ಬಿಟ್ಟು ಹೋದ ಹೆಂಡತಿ. ತನ್ನ ಮತ್ತು ಮತ್ತು ಸಂಜನಾ ಆನಂದ್ ನಡುವೆ ಮದುವೆ ಮಾತುಗಳು ಹುಟ್ಟಿದ್ದೂ ಉಂಟು ಎನ್ನುವಾಗ ಸಂಜನಾ ಆನಂದ್ ಅದೇ ಕ್ಷಣದಲ್ಲಿ ಎಂಟ್ರಿ ಹಾಕಿ ಚಂದನ್ ತನ್ನ ಸಹೋದರನಂತೆ ಎಂದುಬಿಟ್ಟರು. ಈ ಹಂತದಲ್ಲಿ ಚಂದನ್ ಕಣ್ಣರಳಿಸಿದರು. ಚೇತನ್‌ಗೌಡ, ಮುನೇಗೌಡ ಹಾಗೂ ರಾಜೇಶ್ ಚಿತ್ರದ ಬಿಡುಗಡೆ ದಿನಾಂಕವನ್ನು ಪ್ರಕಟಿಸಿದರು. ಊಟ-ತಿಂಡಿ ಬಿಟ್ಟ ಮಾಧ್ಯಮಗೋಷ್ಠಿ ನಡೆಯುವ ಸಂಪ್ರದಾಯದಲ್ಲಿ ನವರಸನ್ ಒಂದು ಚಂದದ ಊಟ ಹಾಕಿಸಿದರು.

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 30.3.2025

# ಕೆಡಿ ಶಿವ ಶಿವ ಹಾಡು 50 ಮಿಲಿಯನ್!



ಈ ವರ್ಷ ಸಾಕಷ್ಟು ಕುತೂಹಲ ಹಾಗೂ ನಿರೀಕ್ಷೆಗಳನ್ನು ಹುಟ್ಟುಹಾಕಿರುವ ಚಿತ್ರ ಎಂದರೆ ಧ್ರುವ ಸರ್ಜಾ ನಟನೆಯ ಕೆಡಿ. ಜೋಗಿ ಪ್ರೇಮ್ ನಿರ್ದೇಶನ ಹಾಗೂ ಆಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಅಭಿನಯದ ಪ್ಯಾನ್ ಇಂಡಿಯಾ ಚಿತ್ರ ಇದಾಗಿದ್ದು, ಚಿತ್ರವನ್ನು ದಕ್ಷಿಣ ಭಾರತದ ಹೆಸರಾಂತ ನಿರ್ಮಾಣ ಸಂಸ್ಥೆ ಕೆ.ವಿ.ಎನ್. ಪ್ರೊಡಕ್ಷನ್ಸ್ ನೂರಾರು ಕೋಟಿ ಬಜೆಟ್‌ನಲ್ಲಿ ಈ ಚಿತ್ರವನ್ನು ನಿರ್ಮಿಸುತ್ತಿದೆ.



ಈ ಚಿತ್ರದ ಜನಪದ ಶೈಲಿಯಲ್ಲಿ ಮೂಡಿಬಂದಿರುವ ಶಿವ ಶಿವ ಹಾಡಿನ ಲಿರಿಕಲ್ ವಿಡಿಯೋ ಇದೀಗ 50 ಮಿಲಿಯನ್ ದಾಟಿ ವೀಕ್ಷಣೆಯಾಗಿದೆ. ಈ ಹಾಡಿಗೆ ನಿರ್ದೇಶಕ ಪ್ರೇಮ್ ಹಾಗೂ ಕೈಲಾಶ್ ಖೇರ್ ದನಿಯಾಗಿದ್ದು, ಉಳಿದಂತೆ ತೆಲುಗು, ತಮಿಳು, ಮಲಯಾಳಂ ಭಾಷೆಗಳಲ್ಲಿ ಅಲ್ಲಿನ ಗಾಯಕರುಗಳೇ ಹಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚು ಜನಪ್ರಿಯವಾದಂಥ ಹಾಡು ಇದಾಗಿದ್ದು ಪ್ರತಿಯೊಬ್ಬರ ಬಾಯಲ್ಲೂ ಅದೇ ಸಾಂಗ್ ಗುನುಗುತ್ತಿದೆ.

ಪ್ರೇಮ್ ನಿರ್ದೇಶನದ ಚಿತ್ರಗಳಲ್ಲಿ ಹಾಡುಗಳೇ ಹೈಲೈಟ್ ಆಗಿರುತ್ತವೆ, ಅದೇರೀತಿ ಕೆಡಿ ಚಿತ್ರದಲ್ಲೂ ಸಹ ಸಂಗೀತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದ್ದು ಅರ್ಜುನ್ ಜನ್ಯ ಇಡೀ ಚಿತ್ರದ ಮ್ಯೂಸಿಕ್‌ನಲ್ಲಿ ಮ್ಯಾಜಿಕನ್ನೇ ಮಾಡಿದ್ದಾರೆ. ಶಿವ ಶಿವ ಹಾಡಲ್ಲಿ ಶಿವನ ವೈಭವೀಕರಣವನ್ನು ಗ್ರಾಫಿಕ್ ಮೂಲಕ ಅದ್ಭುತವಾಗಿ ಕಟ್ಟಿಕೊಡಲಾಗಿದೆ. ಭಜರಂಗಿ ಮೋಹನ್ ಈ ಹಾಡಿಗೆ ಕೊರಿಯೋಗ್ರಫಿ ಮಾಡಿದ್ದಾರೆ. ಮೋಹನ್ ಬಿ. ಕೆರೆ ಅವರ ಕಲಾ ನಿರ್ದೇಶನ ಈ ಹಾಡಿಗಿದ್ದು, ಹಾಡುಗಳು ಆ ಚಿತ್ರದ ಇನ್ವಿಟೇಶನ್ ಇದ್ದ ಹಾಗೆ, ಶಿವ ಶಿವ ಹಾಡಿನಲ್ಲಿರುವ ಕಣ್ ಕೋರೈಸುವ ವಿಶ್ಯುಯೆಲ್ಸ್, ಅದ್ದೂರಿ ಮೇಕಿಂಗ್, ಕಿವಿಗಪ್ಪಳಿಸುವ ಹಾಡಿನ ಟ್ಯೂನ್ ಎಂಥವರನ್ನೂ ಬಡಿದೆಬ್ಬಿಸುವಂತಿದೆ. ಯೂರೋಪ್‌ನಲ್ಲಿ ಚಿತ್ರಕ್ಕೆ 264 ಪೀಸ್ ಆರ್ಕೆಸ್ಟ್ರಾ ಮಾಡಿಸಿದ್ದಾರೆ ಕೆ.ಡಿ. ಚಿತ್ರದ ಮ್ಯೂಸಿಕ್‌ಗೆ ಹಾಕಿದ ಹಣದಲ್ಲಿ ಒಂದು ದೊಡ್ಡ ಸಿನಿಮಾನೇ ಮಾಡಬಹುದಿತ್ತು ಎಂದು ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರೇ ಹೇಳಿದ್ದಾರೆ.

ಈ ಚಿತ್ರದಲ್ಲಿ ಧ್ರುವ ಸರ್ಜಾ ಜತೆ ನಾಯಕಿಯಾಗಿ ರೀಶ್ಮಾ ನಾಣಯ್ಯ ನಟಿಸಿದ್ದಾರೆ, ಈ ಹಾಡಲ್ಲಿ 70ರ ದಶಕದ ಬೆಂಗಳೂರನ್ನು ಮೋಹನ್ ಬಿ.ಕೆರೆ ಅವರು ಅದ್ಭುತ ಸೆಟ್‌ನಲ್ಲಿ ನಿರ್ಮಿಸಿದ್ದಾರೆ, ಕೆಡಿ ಚಿತ್ರದಲ್ಲಿ ಒಟ್ಟು 6 ಹಾಡುಗಳಿದ್ದು, ಇದೀಗ ಈ ಚಿತ್ರದ ಮತ್ತೊಂದು ಸಾಂಗ್ ಬಿಡುಗಡೆಯಾಗುವ ಸನಿಹದಲ್ಲಿದೆ, ಇಂದು ಕೆಡಿ ಚಿತ್ರದ 2ನೇ ಹಾಡು ಸೆಟ್ ಆಗಲ್ಲ ನಂಗು ನಿಂಗು ಎನ್ನುವ ಹಾಡಿನ ಪ್ರೊಮೋ ಬಿಡುಗಡೆಯಾಗಲಿದೆ.


ಕಾಳಿದಾಸ ಎಷ್ಟು ಇನ್ನೋಸೆಂಟೋ, ಅಷ್ಟೇ ರಾ ಆಗಿರುತ್ತಾನೆ, ಆ ಪಾತ್ರವನ್ನು ದ್ರುವ ನೈಜವಾಗಿ ಮಾಡಿದ್ದಾರೆ. ಈತನನ್ನು ಶಿವಣ್ಣ, ಅಪ್ಪುಸರ್‌ಗೆ ಹೋಲಿಸುತ್ತೇನೆ, ಏಕೆಂದರೆ ಅಷ್ಟು ಎನರ್ಜಿ ಈತನಲ್ಲಿದೆ. ಚಲಿಸುವ ಕಾರ್‌ಮೇಲೆ ಡ್ಯಾನ್ಸ್ ಮಾಡಿದ್ದಾನೆ. ಸುಪ್ರೀತ್ ನಮ್ಮ ಫ್ಯಾಮಿಲಿ ಇದ್ದಹಾಗೆ ಎಂದು ನಿರ್ದೇಶಕ ಪ್ರೇಮ್ ಹೇಳಿದ್ದಾರೆ.

ಅಂದಹಾಗೆ, 1970-75ರ ಸಮಯದಲ್ಲಿ ನಡೆದ ನೈಜಘಟನೆ ಆಧಾರಿತ ಗ್ಯಾಂಗ್‌ಸ್ಟರ್ ಕಥೆ ಈ ಚಿತ್ರಲ್ಲಿದೆ, ಚಿತ್ರೀಕರಣಕ್ಕಾಯೇ 20 ಎಕರೆಯಷ್ಟು ವಿಶಾಲವಾದ ಜಾಗದಲ್ಲಿ ಬಹು ಕೋಟಿ ವೆಚ್ಚದಲ್ಲಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಿಸಲಾಗಿದೆ. ಚಿತ್ರದ ಆರು ಕಲರ್‌ಫುಲ್ ಹಾಡುಗಳಿಗೆ ಆರು ಜನ ಕೊರಿಯಾಗ್ರಾಫರ್‌ಗಳು ಕೆಲಸ ಮಾಡುತ್ತಿದ್ದಾರೆ. ಇನ್ನು ಕೆಡಿ ಚಿತ್ರಕ್ಕೆ ವಿಕ್ರಾಂತ್ ರೋಣ ಖ್ಯಾತಿಯ ವಿಲಿಯಂ ಡೇವಿಡ್ ಅವರ ಕ್ಯಾಮೆರಾ ವರ್ಕ್ ಇದೆ. ಸಂಜಯ್‌ದತ್ ಅಲ್ಲದೆ ಶಿಲ್ಪಾ ಶೆಟ್ಟಿ, ನೋರಾ ಫತೇಹಿ ಸೇರಿದಂತೆ ಬಾಲಿವುಡ್‌ನ ಅನೇಕ ಕಲಾವಿದರು ಈ ಚಿತ್ರದಲ್ಲಿ ನಟಿಸಿದ್ದಾರೆ. ಜೊತೆಗೆ ಕ್ರೇಜಿಸ್ಟಾರ್ ರವಿಚಂದ್ರನ್, ನಟ ರಮೇಶ್ ಅರವಿಂದ್ ಹೀಗೆ ಹೆಸರಾಂತ ಕಲಾವಿದರ ದಂಡೇ ಈ ಚಿತ್ರದಲ್ಲಿದೆ. ☯

## ಬಹುಭಾಷಾ ಚಿತ್ರಗಳಲ್ಲಿ ಕೆಜಿಎಫ್ ಖ್ಯಾತಿಯ ಅವಿನಾಶ್

ಮುಂದೊಂದು ದಿನ ನಟನಾಗಬಹುದು, ಬಹುಭಾಷೆಯ ಚಿತ್ರಗಳಲ್ಲಿ ನಟಿಸಬಹುದೆಂದು ಕನಸನ್ನೂ ಕಂಡಿರದ ಅವಿನಾಶ್ ಇವತ್ತು ಕನ್ನಡವಲ್ಲದೆ, ತೆಲುಗು, ತಮಿಳು, ಹಿಂದಿ ಮತ್ತು ಮಲಯಾಳಂ ಭಾಷೆಗಳಲ್ಲಿ ಬೇಡಿಕೆಯ ನಟರಾಗಿದ್ದಾರೆ. ಕಡಿಮೆ ಸಮಯದಲ್ಲಿ ಬೇರೆ ಭಾಷೆಯ ಜನಪ್ರಿಯ ನಟರೊಂದಿಗೆ ತೆರೆ ಹಂಚಿಕೊಂಡು ಛಾಪು ಮೂಡಿಸಿದ್ದಾರೆ. ಕೆಜಿಎಫ್ ಮೂಲಕ ಚಿತ್ರರಂಗಕ್ಕೆ ಪರಿಚಿತರಾಗಿ, ನಂತರ ಹಲವು ಚಿತ್ರಗಳಲ್ಲಿ ನಟಿಸುತ್ತಿದ್ದಾರೆ.

ಕೆಜಿಎಫ್ ಚಿತ್ರದಲ್ಲಿ ಆ್ಯಂಡ್ರೂ ಎಂಬ ಪಾತ್ರ ಮಾಡಿ ಅವಿನಾಶ್ ಮೂಲತಃ ಬೆಂಗಳೂರಿನವರು, ನಟಿಸಬೇಕು ಎಂಬ ಆಸೆ ಬಿಟ್ಟರೆ, ಯಾವತ್ತೂ ಅವರು ಸ್ಟೇಜ್ ಹತ್ತಿರಲಿಲ್ಲ.



ಚಿರಂಜೀವಿ ಸರ್ಜಾ ಸ್ನೇಹ ಬಿಟ್ಟರೆ, ಚಿತ್ರರಂಗದವರ ಪರಿಚಯವೂ ಇರಲಿಲ್ಲ. ಒಮ್ಮೆ ತಮ್ಮ ಆಸೆಯನ್ನು ಚಿರು ಬಳಿ ಹೇಳಿಕೊಂಡಾಗ, ಅವರು ಪನ್ನಗಾಭರಣರನ್ನು ಪರಿಚಯ ಮಾಡಿಸಿದರಂತೆ. ಪನ್ನಗ, ಛಾಯಾಗ್ರಾಹಕ ಭುವನ್ ಗೌಡ ಅವರನ್ನು ಪರಿಚಯಿಸಿದ್ದಾರೆ. ಆಗ ಕೆಜಿಎಫ್ ಚಿತ್ರದಲ್ಲಿ ತೊಡಗಿಸಿಕೊಂಡಿದ್ದ ಭುವನ್, ಅವಿನಾಶ್‌ರನ್ನು ನಿರ್ದೇಶಕ ಪ್ರಶಾಂತ್ ನೀಲ್‌ಗೆ ಭೇಟಿ ಮಾಡಿಸಿದ್ದಾರೆ. ಚಿತ್ರಕ್ಕೆ ಸೂಕ್ತ ಪಾತ್ರಧಾರಿಗಳ ಹುಡುಕಾಟದಲ್ಲಿದ್ದ ಪ್ರಶಾಂತ್, ಒಂದು ಪಾತ್ರಕ್ಕೆ ಅವಿನಾಶ್‌ರನ್ನು ಆಯ್ಕೆ ಮಾಡಿದ್ದಾರೆ.

ನಟನೆ ಗೊತ್ತಿರದ ಅವಿನಾಶ್‌ಗೆ ಕ್ಯಾಮೆರಾ ಹೇಗೆ ಎದುರಿಸಬೇಕೆಂದು ತಿಳಿದಿಲ್ಲ, ಸುಮಾರು ಒಂದು ವರ್ಷ ಪ್ರಶಾಂತ್ ನೀಲ್, ಕಾರ್ಯಾಗಾರ ಮಾಡಿ ಅವಿನಾಶ್‌ರನ್ನು ತಿದ್ದಿ-ತೀಡಿ ಕ್ಯಾಮೆರಾ ಮುಂದೆ ನಿಲ್ಲಿಸಿದ್ದಾರೆ. ಅದಕ್ಕೆ ಪ್ರತಿಯಾಗಿ ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಅವಿನಾಶ್ ಮೊದಲ ಚಿತ್ರದಲ್ಲೇ ಗಮನ ಸೆಳೆದಿದ್ದಾರೆ. ಕೆಜಿಎಫ್ 1' ಮತ್ತು ಕೆಜಿಎಫ್ 2' ಚಿತ್ರಗಳ ಜೊತೆಗೆ ಗುರುದೇವ್ ಹೊಯ್ಸಳ ಚಿತ್ರದಲ್ಲೂ ತಮ್ಮ ಅಭಿನಯದ ಮೂಲಕ ಗಮನ ಸೆಳೆದಿದ್ದಾರೆ. ಕನ್ನಡವಲ್ಲದೆ, ತೆಲುಗಿನ ವೀರಸಿಂಹ ರೆಡ್ಡಿ, ವಾಲ್ಟರ್ ವೀರಯ್ಯ, ತಮಿಳಿನ ವೆಟ್ಟೈಯಾನ್, ಕಂಗುವಾ, ಕಾದರ್ ಭಾಷ ಎಂದ್ರ ಮುತ್ತುರಾಮಲಿಂಗಂ', ಮಲಯಾಳಂನ ಒರು ಪೆರುಂ ಕಲಿಯಟ್ಟಂ', ಹಿಂದಿಯ ಬೇಬಿ ಜಾನ್' ಚಿತ್ರಗಳಲ್ಲಿ ಈಗಾಗಲೇ ನಟಿಸಿರುವ ಅವಿನಾಶ್, ಏಸ್, ಗುಡ್‌ಬ್ಯಾಡ್ ಅಗ್ಲಿ', ಕಿಂಗ್ಡಮ್', ಬುಲೆಟ್', ನಾಗಬಂಧಂ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಪೋಷಕ ನಟನಾಗಿ ಗ ಅಭಿನಯಕ್ಕೆ ಪ್ರಾಮುಖ್ಯತೆ ಇರುವ ಅರ್ಥಪೂರ್ಣ ಪೋಷಕ ಪಾತ್ರಗಳಿಗೆ ಎದುರು ನೋಡುತ್ತಿದ್ದೇನೆ ಎನ್ನುವ ಅವಿನಾಶ್ ಅಂಥಾ ಪಾತ್ರಗಳಿಗಾಗಿ ಎದುರು ನೋಡುತ್ತಿದ್ದೇನೆ' ಎನ್ನುತ್ತಾರೆ. ☯

## ವಾಮನ ಟ್ರೈಲರ್‌ಗೆ ದರ್ಶನ್ ಸಾಥ್

ಅಂದುಕೊಂಡಂತೆ ಆಗಿದ್ದರೆ ನಟ ಧನ್ವೀರ್ ಗೌಡ ಮತ್ತು ಯುಐ ಸುಂದರಿ ರೀಷ್ಮಾ ನಾಣಯ್ಯ ನಟನೆಯ ಚಿತ್ರ ವಾಮನ, ವರ್ಷದ ಹಿಂದೆಯೇ ಚಿತ್ರಮಂದಿರಗಳಲ್ಲಿ ತೆರೆ ಕಾಣಬೇಕಿತ್ತು. ಆದರೆ, ಅನಿರೀಕ್ಷಿತ ಕಾರಣಗಳಿಂದಾಗಿ ಚಿತ್ರದ ಬಿಡುಗಡೆ ವಿಳಂಬವಾಗಿದ್ದು, ಕೊನೆಗೂ ಈ ಚಿತ್ರ ಏಪ್ರಿಲ್ 10 ರಂದು ರಾಜ್ಯದಾದ್ಯಂತ ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಈಗಾಗಲೇ ಈ ಚಿತ್ರತಂಡ ಮುದ್ದು ರಾಕ್ಷಸಿ ಮತ್ತು ವಾ ವಾ ವಾಮನ ಎಂಬ ಹಾಡುಗಳನ್ನು ಬಿಡುಗಡೆ ಮಾಡಿದ್ದು, ಚಿತ್ರದ ಬಗ್ಗೆ ತೀವ್ರ ಕುತೂಹಲ ಹುಟ್ಟುಹಾಕಿವೆ. ಚಿತ್ರದ ಟೀಸರ್ ಕೂಡ ಎಲ್ಲರ ಗಮನ ಸೆಳೆದಿದೆ. ಇದೀಗ ಚಿತ್ರದ ಟ್ರೈಲರನ್ನು ಚಾಲೆಂಜಿಂಗ ಸ್ಟಾರ್ ದರ್ಶನ್ ಅವರು ಬಿಡುಗಡೆ ಮಾಡಲಿದ್ದಾರೆ.



ವಾಮನ ಚಿತ್ರದ ಕಥೆ, ಚಿತ್ರಕಥೆ ಮತ್ತು ಸಂಭಾಷಣೆ ಬರೆದಿರುವ ಶಂಕರ್ ರಾಮನ್ ಅವರು ವಾಮನ ಚಿತ್ರದ ಮೂಲಕ ನಿರ್ದೇಶಕನಾಗಿ ಕನ್ನಡ ಚಿತ್ರರಂಗಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ. ಏಕ್ ಲವ್ ಯಾ, ಯುಐ ಮತ್ತು ಬಾನ ದಾರಿಯಲ್ಲಿ , ಅಲ್ಲದೆ ಸೂಪರ್ ಸ್ಟಾರ್ ಉಪೇಂದ್ರ ನಟನೆ ಹಾಗೂ ನಿರ್ದೇಶನದ ಯುಐ ಚಿತ್ರಗಳ ಮೂಲಕ ಗುರುತಿಸಿಕೊಂಡಿರುವ ಕೊಡಗಿನ ಬೆಡಗಿ ರೀಷ್ಮಾ ನಾಣಯ್ಯ ಅವರು ವಾಮನ ಚಿತ್ರದಲ್ಲಿ ನಾಯಕ ಧನ್ವೀರ್‌ಗೆ ಜೋಡಿಯಾಗಿ ಇದೇ ಮೊದಲ ಬಾರಿಗೆ ತೆರೆ ಹಂಚಿಕೊಂಡಿದ್ದಾರೆ. ಇನ್ನು ಈ ಚಿತ್ರದಲ್ಲಿ ಹಿರಿಯನಟಿ ತಾರಾ ಅವರು ನಾಯಕನ ತಾಯಿಯಾಗಿ ಕಾಣಿಸಿಕೊಂಡಿದ್ದಾರೆ. ಸಂಪತ್ ರಾಜ್, ಆದಿತ್ಯ ಮೆನನ್, ಅವಿನಾಶ್, ಅಚ್ಯುತ್‌ಕುಮಾರ್, ಪೆಟ್ರೋಲ್ ಪ್ರಸನ್ನ, ಶಿವರಾಜ್ ಕೆಆರ್ ಪೇಟೆ ಮತ್ತು ಕಾಕ್ರೋಚ್ ಸುಧಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.



ಈ ಚಿತ್ರದ ಹಾಡುಗಳಿಗೆ ಅಜನೀಶ್ ಲೋಕನಾಥ್ ಅವರು ಸಂಗೀತ ಸಂಯೋಜಿಸಿದ್ದು, ವಿ ನಾಗೇಂದ್ರ ಪ್ರಸಾದ್ ಸಾಹಿತ್ಯ ಬರೆದಿದ್ದಾರೆ. ಭೂಷಣ್ ಅವರು ನೃತ್ಯ ಸಂಯೋಜನೆ ಮಾಡಿದ್ದಾರೆ ಮತ್ತು ಮಹೇಂದ್ರ ಸಿಂಗ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಈಕ್ವಿನಾಕ್ಸ್ ಗ್ಲೋಬಲ್ ಎಂಟರ್‌ಟೈನ್ಮೆಂಟ್ ಬ್ಯಾನರ್ ಅಡಿಯಲ್ಲಿ ಚೇತನ್ ಗೌಡ ಅವರು ಈ ಚಿತ್ರವನ್ನು ಅದ್ದೂರಿ ಬಜೆಟ್‌ನಲ್ಲಿ ನಿರ್ಮಿಸಿದ್ದಾರೆ.

2019ರಲ್ಲಿ ಸಿಂಪಲ್ ಸುನಿ ನಿರ್ದೇಶನದ ಬಜಾರ್ ಚಿತ್ರದ ಮೂಲಕ ಧನ್ವೀರ್‌ಗೌಡ ಅವರು ಸ್ಯಾಂಡಲ್ವುಡ್‌ಗೆ ಎಂಟ್ರಿ ಕೊಟ್ಟಿದ್ದರು. ಆನಂತರ ಹರಿ ಸಂತೋಷ್ ಅವರ ನಿರ್ದೇಶನದ 'ಬೈ ಟು ಲವ್' ಮತ್ತು ಜಯತೀರ್ಥ ಅವರ ನಿರ್ದೇಶನದ 'ಕೈವ' ಚಿತ್ರಗಳಲ್ಲಿ ನಾಯಕನಾಗಿ ಕಾಣಿಸಿಕೊಂಡರು. ಇದೀಗ ತಮ್ಮ ನಾಲ್ಕನೇ ಚಿತ್ರ ವಾಮನದಲ್ಲಿ ಮಾಸ್-ಆ್ಯಕ್ಷನ್ ಹೀರೋ ಆಗಿ ಧನ್ವೀರ್ ಗೌಡ ಅವರು ಕನ್ನಡ ಚಿತ್ರಪ್ರೇಕ್ಷಕರ ಮುಂದೆ ಬರಲು ಸಜ್ಜಾಗಿದ್ದಾರೆ. ☯

Vol. 40 No. 43 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com